ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣ ಸಾಹಿತ್ಯ ಮಾಲಿಕೆ ೦೨



# ಆತ್ಮಶ್ರೀ ಸುಜನಾ

ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣ ಸಾಹಿತ್ಯ ಮಾಲಿಕೆ – 2

**ಸುಜನಾ ೯೪: ಗೌರವಾಂಜಲಿ ಸಂಕಲನ**

# ಆತ್ಮಶ್ರೀ ಸುಜನಾ

**ಪ್ರಧಾನ ಸಂಪಾದಕರು**

ಎಸ್.ಸಿ.ಕಿರಣ್‌ಕುಮಾರ್

**ಸಂಪಾದಕರು**

ಶಿ.ಕುಮಾರಸ್ವಾಮಿ

ಪ್ರಕಾಶನ

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ).,

ಶ್ರೀ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ (ರಿ).,

ಕೃಷ್ಣರಾಜಪೇಟೆ

**ಆತ್ಮಶ್ರೀ ಸುಜನಾ** ಎಂಬ ಈ ಕೃತಿಯು ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣಾ ಸಾಹಿತ್ಯ ಮಾಲಿಕೆಯ ಎರಡನೆಯ ಪ್ರಕಟಣೆಯಾಗಿದೆ ಮತ್ತು ಗ್ರಾಮಭಾರತಿ ವಿದ್ಯಾಸಂಸ್ಥೆ ಮತ್ತು ಶ್ರೀ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರಕಾಶಿಸಲ್ಪಟ್ಟಿರುತ್ತದೆ.

ಮೊದಲ ಮುದ್ರಣ : ಏಪ್ರಿಲ್ 2024

ಪ್ರಕಾರ : ಸಂಯೋಜಿತ ಸಾಹಿತ್ಯ ಪ್ರಬಂಧಗಳು

ಪ್ರಕಾಶಕರು ಹಾಗೂ
ಕೃತಿ ಸ್ವಾಮ್ಯ : GB & SSKC

ಪುಟಗಳು : 94 ಪುಟಗಳು

ಬೆಲೆ : ರೂ. 120

ಪುಸ್ತಕದ ಅಳತೆ : 1/8th ಡೆಮಿ

ರಕ್ಷಾ ಪುಟದ ವಿನ್ಯಾಸ : ಶಿವರಾಜು
ಹಾಗೂ ಮುದ್ರಣ : GB & SSKC Graphics

# ಅರ್ಪಣೆ



ಜನನ 05.12.1946 ಮರಣ 18.12.2007

## ಮಾನ್ಯ ಶ್ರೀ ಎಸ್.ಸಿ.ಚಿಕ್ಕಣ್ಣಗೌಡರು

ಸಂಸ್ಥಾಪಕರು ಶ್ರೀ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ (ರಿ).,
ಕೃಷ್ಣರಾಜಪೇಟೆ

ಪೂಜ್ಯಶ್ರೀ ಎಸ್.ಸಿ.ಚಿಕ್ಕಣ್ಣಗೌಡರು ಮಂಡ್ಯ ಜಿಲ್ಲೆಯ ಪ್ರಾತಃ ಸ್ಮರಣೀಯರಲ್ಲೊಬ್ಬರು. 1975ರಿಂದ ಸಕ್ರೀಯವಾಗಿ ಸಹಕಾರ ಕ್ಷೇತ್ರ, ಶಿಕ್ಷಣ ಕ್ಷೇತ್ರದಲ್ಲಿಯೂ ಹಾಗೂ 1994ರಲ್ಲಿ ರಾಜಕೀಯ ಕ್ಷೇತ್ರದಲ್ಲಿಯೂ ಸೇವೆಯನ್ನು ಪ್ರಾರಂಭಿಸಿದರು. ತಮ್ಮ ನೇರ ನಡೆ, ದಿಟ್ಟ ಮಾತು, ನಿಷ್ಠ ಸಮಾಜ ಸೇವೆಯಿಂದ ಬಡವರ ಆಶಾಕಿರಣ ಎಂದು ಹೆಸರಾದರು.

ತಮ್ಮ ಜೀವನದುದ್ದಕ್ಕೂ ತತ್ವ ನಿಷ್ಠೆಯಿಂದ, ಮನುಷ್ಯತ್ವದಿಂದ ನಂಬಿದವರ ಕೈಹಿಡಿದು, ಕೃಷ್ಣರಾಜಪೇಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)., ಹಾಗೂ ಶ್ರೀ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ (ರಿ)., ಅನ್ನು ಕಟ್ಟಿ ಬೆಳೆಸಿ ನೂರಾರು ಜನರಿಗೆ ಜೀವನಾಧಾರವಾದರು ಹಾಗೂ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಜನ್ಮ ಸಾರ್ಥಕ ಪಡಿಸಿಕೊಂಡು ಆದರ್ಶ ಪುರುಷರಾದರು.

ಈ ಮಹಾ ಪುರುಷರಿಗೆ "ಆತ್ಮಶ್ರೀ ಸುಜನಾ" ಕಿರುಕೃತಿ ಅರ್ಪಿತವಾಗಲಿ ಎಂದು ಆಶಿಸುತ್ತೇವೆ.

# ಪ್ರಧಾನ ಸಂಪಾದಕರ ನುಡಿ

ಕೃಷ್ಣರಾಜಪೇಟೆಯ ಗ್ರಾಮಭಾರತಿ ವಿದ್ಯಾಸಂಸ್ಥೆ ಮತ್ತು ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್(ರಿ) ಸಹಯೋಗದಲ್ಲಿ ಕಳೆದ 2023ರ ಸಾಲಿನಿಂದ ಎಸ್.ಸಿ.ಚಿಕ್ಕಣ್ಣಗೌಡರ ಸಂಸ್ಮರಣಾ ಸಾಹಿತ್ಯ ಮಾಲಿಕೆ ಆರಂಭಗೊಂಡಿದ್ದು ಪ್ರಪ್ರಥಮವಾಗಿ "ಸಾಹಿತ್ಯ ಸಂಭ್ರಮ" ಎಂಬ ಬಿ.ಇಡಿ ಪ್ರಶಿಕ್ಷಣಾರ್ಥಿಗಳ ಹಾಗೂ ಸ್ಥಳೀಯ ಸಾಹಿತಿಗಳ ಪ್ರಬಂಧ ಸಂಕಲನ ಪ್ರಕಟಗೊಂಡಿದೆ. ಇದೀಗ ಮಹಾಕವಿ ಸುಜನಾ ಅವರ 94ನೇ ಜನ್ಮ ವರುಷದ ಗೌರವ ಸ್ಮರಣೆಗಾಗಿ 'ಆತ್ಮಶ್ರೀ ಸುಜನಾ' ಎಂಬ ಸಂಪಾದಿತ ಕೃತಿಯನ್ನು ಲೋಕಾರ್ಪಣೆ ಗೊಳಿಸಲಾಗುತ್ತಿದೆಯೆಂದು ತಿಳಿಸಲು ತುಂಬಾ ಹೆಮ್ಮೆಯಾಗುತ್ತಿದೆ.

2018ರಿಂದಲೂ 'ಸುಜನಾ ನಮನ' ಕಾರ್ಯಕ್ರಮವು ನಿರಂತರವಾಗಿ ಬಿ.ಇಡಿ, ಪ್ರಶಿಕ್ಷಣಾರ್ಥಿಗಳ ಹಾಗೂ ಸ್ಥಳೀಯ ಸಾಹಿತ್ಯ ಸಂಸ್ಥೆಗಳ ಆಶ್ರಯದಲ್ಲಿ ನಡೆದು ಬಂದಿದೆ. ಈ ವರ್ಷ ವಿಶೇಷವಾಗಿ 'ಆತ್ಮಶ್ರೀ ಸುಜನಾ' ಕೃತಿಯನ್ನು ಸಂಯೋಜಿಸಲಾಗಿದೆ. ಇದಕ್ಕೆ ಪ್ರಧಾನ ಪ್ರೇರಕರು ಶಿ.ಕುಮಾರಸ್ವಾಮಿ. ಅವರು ನಿವೃತ್ತರಾದಂದಿನಿಂದಲೂ ನಮ್ಮ ಸಂಸ್ಥೆಯ ಒಡನಾಟದಲ್ಲಿದ್ದು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಶೇಷ ಕಾರ್ಯಕ್ರಮಗಳನ್ನು ಸಂಘಟಿಸಿರುತ್ತಾರೆ. ಈ ಕೃತಿಯ ಸಂಪಾದಕರಾಗಿರುವ ಶಿ.ಕು ರವರಿಗೆ ಕೃತಿಯನ್ನು ರೂಪಿಸಿರುವ  ಎಲ್ಲಾ ಲೇಖಕರಿಗೆ ಸುಂದರವಾಗಿ ಮುದ್ರಿಸಿರುವ ಸಂಸ್ಥೆಯವರಿಗೆ ಹಾಗೂ ಸಹೃದಯರೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು

**ಮೊ: 9242877708** **ಎಸ್.ಸಿ.ಕಿರಣ್‌ಕುಮಾರ್**

# ಸಂಪಾದಕರ ನುಡಿ

ಪ್ರಬುದ್ಧ ಸಂವೇದನಾ ಶೀಲಗುಣ ಸಂಪದ ಹಾಗೂ ಎಚ್ಚರಗಣ್ಣಿನ ಕವಿ ಎಂದೇ ಖ್ಯಾತರಾಗಿದ್ದ ಸುಜನಾ ಅವರ 94ನೇ ಜನ್ಮೋತ್ಸವ ನಿಮಿತ್ತ ಈ ಆತ್ಮಶ್ರೀ ಸುಜನಾ ಎಂಬ ಕೃತಿಯನ್ನು ಗೌರವಪೂರ್ವಕವಾಗಿ ಸಮರ್ಪಿಸಲಾಗಿದೆ.


ಗ್ರಾಮಭಾರತಿ ವಿದ್ಯಾಸಂಸ್ಥೆಯ ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣಾ ಸಾಹಿತ್ಯ ಮಾಲೆಯ ಎರಡನೆಯ ಕೃತಿಯಾಗಿ ಆತ್ಮಶ್ರೀ ಸುಜನಾ ಪ್ರಕಟಗೊಳ್ಳುತ್ತಿದೆ. ಈ ಕಾರಣಕ್ಕೆ ಗ್ರಾಮಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷರಿಗೂ, ಸರ್ವಸಮಸ್ತರಿಗೂ, ಕೃತಿ ರೂಪಿಸುವುದಕ್ಕೆ ಸಹಕರಿಸಿದ ಶ್ರೀಚಾ.ಶಿ.ಜಯಕುಮಾರ್, ಶ್ರೀ ಮಾರೇನಹಳ್ಳಿ ಲೋಕೇಶ್, ಶ್ರೀ ಎಚ್.ಎನ್.ವಜ್ರಪ್ರಸಾದ್ ಮೊದಲಾದವರಿಗೂ, ಶುಭ ಹಾರೈಸಿರುವ ಶ್ರೀ ಲಿಂಗಣ್ಣ ಬಂಧೂಕಾರ ಹಾಗೂ ಹಾಗೂ ಶ್ರೀ ಜಿ.ಟಿ.ವೀರಪ್ಪ ಅವರಿಗೂ, ಸುಜನಾ ಪುತ್ರಿ ಪುತ್ರರಿಗೂ, ಸಕಾಲಕ್ಕೆ ಲೇಖನಗಳನ್ನು ಒದಗಿಸಿಕೊಟ್ಟಿರುವ ಲೇಖಕರುಗಳಿಗೂ ಹಾಗೂ ಅಂದವಾಗಿ ಮುದ್ರಿಸಿರುವ ಗ್ರಾಮಭಾರತಿ ಗ್ರಾಫಿಕ್ಸ್‌ನ ಸರ್ವರಿಗೂ ಅನಂತಾನಂತ ಕೃತಜ್ಞತೆಗಳು.


**ಶಿ.ಕುಮಾರಸ್ವಾಮಿ**
**ಮೊ: 9449148885**

# ಸುಜನಾ ಛಾಯಾಬಿಂಬ










ವರ್ಧಮಾನ ಪೀಠಪ್ರಶಸ್ತಿ—ಪ್ರೊ. ಸುಜನಾ



ಪು.ತಿ.ನ. ವಿಚಾರ ಸಂಕಿರಣದ ಒಂದು ಗೋಷ್ಠಿ

# ಸುಜನಾ ಪತ್ರಿಕಾಬಿಂಬ

■ ಲಲಾಟಾಕ್ಷ ಎಸ್. ಮೈಸೂರು

ಕನ್ನಡ ಸಾಹಿತ್ಯ ಲೋಕದಲ್ಲಿ 'ಸುಜನಾ' ಎಂದೇ ಹೆಸರಾದ ಎಸ್.ಜಿ.ನಾರಾಯಣ ಶೆಟ್ಟಿ ಅವರ ಸಾಹಿತ್ಯ ಕೊಡುಗೆಗಳಿಗೆ ಪುತ್ರ 'ಡಿಜಿಟಲ್ ಸ್ಪರ್ಶ' ನೀಡಲು ಮುಂದಾಗಿದ್ದಾರೆ.

ಸುಜನಾ ಅವರು ರಚಿಸಿದ ಕಾವ್ಯ, ವಿಮರ್ಶೆ, ಕವಿತೆ, ವಚನಗಳು, ಪ್ರಬಂಧಗಳು ಜಾಲತಾಣದಲ್ಲಿ ಸಾಹಿತ್ಯಾಸಕ್ತರು, ಓದುಗರಿಗೆ ಸುಲಭವಾಗಿ ಸಿಗಬೇಕು ಎಂಬ ಉದ್ದೇಶದಿಂದ ಪುತ್ರ ಎನ್.ಶ್ರೀಧರ್ ಡಿಜಿಟಲೀಕರಣದಲ್ಲಿ ದಾಖಲಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಈಗಾಗಲೇ ಶೇ.80ರಷ್ಟು ಕೆಲಸ ಪೂರ್ಣಗೊಂಡಿದೆ. ಈ ಮೂಲಕ ತಾವೂ ಕನ್ನಡ ಸಾಹಿತ್ಯ ಲೋಕಕ್ಕೆ ಕಿರುಕಾಣಿಕೆ ನೀಡಲು ಹೊರಟಿದ್ದಾರೆ.

ಇ-ಪುಸ್ತಕ: ಯುಗ ಸಂಧ್ಯಾ, ಹೃದಯ ಸಂವಾದ, ಒಂದೇ ಸೂರಿನಡಿ, ಚಿಲಿಪಿಲಿ ಮಕ್ಕಳ ಕವನ ಸಂಕಲನ, 'ಏಜಾಕ್ಸ್' ಕನ್ನಡ ಅನುವಾದ ನಾಟಕ ಸೇರಿದಂತೆ 14ಕ್ಕೂ ಹೆಚ್ಚು ಪ್ರಮುಖ ಕೃತಿಗಳನ್ನು ಸುಜನಾ ರಚಿಸಿದ್ದಾರೆ. ಈ ಕೃತಿಗಳನ್ನು 'ಇ-ಪುಸ್ತಕ'ದಲ್ಲಿ ಅಳವಡಿಸುವ ಕಾರ್ಯದಲ್ಲಿ ಎನ್.ಶ್ರೀಧರ್ ಎರಡು ವರ್ಷಗಳಿಂದ ನಿರತರಾಗಿದ್ದಾರೆ. ಕರೊನಾ ಹಿನ್ನೆಲೆಯಲ್ಲಿ ಡಿಜಿಟಲೀಕರಣ ಕಾರ್ಯ ವಿಳಂಬವಾಗಿದ್ದು, ಶೀಘ್ರ ಪೂರ್ಣಗೊಳಿಸಲಿದ್ದಾರೆ.

### ಪ್ರಮುಖ ಕೃತಿಗಳು

'ಯುಗಸಂಧ್ಯಾ' ಕೃತಿಗೆ 2002ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಹೃದಯ ಸಂವಾದ' ಕೃತಿಗೆ 1963ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ, 'ಒಂದೇ ಸೂರಿನಡಿಯಲ್ಲಿ' ಕವನ ಸಂಕಲನಕ್ಕೆ, ವರ್ಧಮಾನ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿವೆ. ಭಾರತ ಕಥಾ ಮಂಜರಿ, ಕುಮಾರವ್ಯಾಸ (ವಿಮರ್ಶಾ ಗ್ರಂಥ), ಪರಂಪರೆ, ಕುವೆಂಪು, ಪುತಿನ ಸಾಹಿತ್ಯದ ಹೊಳಹುಗಳು, ಚಿಲಿಪಿಲಿ ಮಕ್ಕಳ ಕವನ ಸಂಕಲನ, ಇಬ್ಬನಿ ಆರತಿ, 'ಏಜಾಕ್ಸ್' ಎಂಬ ಗ್ರೀಕ್ ನಾಟಕ ಕನ್ನಡಕ್ಕೆ ಅನುವಾದ, ಬಾಲ ಕಾಂಡ ವಾಲ್ಮೀಕಿ ರಾಮಾಯಣ (ಸಿಪಿಕೆ ಅವರೊಂದಿಗೆ) ಅನುವಾದಿತ ಕೃತಿ.



ಸುದ್ದಿ ಬಾಣಸಿಗರು

## ಹೊಸ ತಲೆಮಾರಿಗೆ ಸುಜನಾ ಸಾಹಿತ್ಯ ಪರಿಚಯ

ತಂದೆಯವರು ಸಾಹಿತ್ಯಕ್ಕೆ ನೀಡಿದ ಕೊಡುಗೆಗಳನ್ನು ಇಂದಿನ ತಲೆಮಾರಿನ ಓದುಗರಿಗೆ ತಲುಪಿಸಲು ಡಿಜಿಟಲೀಕರಣ ಕಾರ್ಯಕ್ಕೆ ಮುಂದಾಗಿದ್ದೇವೆ. ಅವರ ಎಲ್ಲ ಕೃತಿಗಳು ಓದುಗರಿಗೆ ಸುಲಭವಾಗಿ ಸಿಗಬೇಕು ಎಂಬುದು ಉದ್ದೇಶ. ಹಾಗಾಗಿ, ಇ-ಪುಸ್ತಕ, ವೆಬ್‌ಸೈಟ್ ವಿನ್ಯಾಸ ಸೇರಿದಂತೆ ಹಲವು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಸುಜನಾ ಅವರಿಗೆ ಸಂಬಂಧಿಸಿದ ಯಾವುದೇ ಬರಹ, ಛಾಯಾಚಿತ್ರ, ಧ್ವನಿ ಸಂಗ್ರಹಗಳು ಇದ್ದಲ್ಲಿ ನಮಗೆ ನೀಡಿದರೆ ಸಂರಕ್ಷಿಸಿ ಇಡಲಾಗುವುದು.

| ಎನ್.ಶ್ರೀಧರ್ ಸುಜನಾ ಅವರ ಪುತ್ರ

### ಸಮಗ್ರ ಪುಸ್ತಕ

ಸುಜನಾ ಅವರು ಕಾವ್ಯ, ವಿಮರ್ಶೆ, ನಾಟಕವಲ್ಲದೆ ಹಲವು ಪ್ರಬಂಧ ಗಳನ್ನು ರಚಿಸಿದ್ದಾರೆ. 40ಕ್ಕೂ ಹೆಚ್ಚು ಪ್ರಬಂಧಗಳು ಬಿಡಿ ಬಿಡಿಯಾಗಿ ಪ್ರಕಟಗೊಂಡಿವೆ. ಈ ಎಲ್ಲ ಪ್ರಬಂಧಗಳನ್ನು ಕ್ರೋಢೀಕರಿಸಿ ಸಮಗ್ರ ಪುಸ್ತಕ ಹೊರತರುವ ಯೋಜನೆಯನ್ನು ಎನ್.ಶ್ರೀಧರ್ ಕೈಗೆತ್ತಿಕೊಂಡಿದ್ದಾರೆ.

### ಧ್ವನಿ ಮುದ್ರಣ ಸಂಗ್ರಹ



ಸುಜನಾ ಅವರ ಭಾಷಣ, ಸಂವಾದ, ಚರ್ಚೆಗಳನ್ನೊಳಗೊಂಡ ಧ್ವನಿಗಳನ್ನು (ಈ ಹಿಂದೆ ಆಡಿಯೋ ಟೇಪ್) ಎಂಪಿತ್ರಿ (ಸಿಡಿ)ರೂಪದಲ್ಲಿ ಸಂಗ್ರಹಿಸಿಟ್ಟಿದ್ದಾರೆ. ತಂದೆ ಆಕಾಶವಾಣಿಯಲ್ಲಿ ನಡೆಸಿಕೊಟ್ಟ ಕಾರ್ಯಕ್ರಮಗಳ ಧ್ವನಿಗಳನ್ನು ಪಡೆದುಕೊಂಡು ಎಲ್ಲವನ್ನೂ ಸಂರಕ್ಷಿಸಿ ಇಟ್ಟಿದ್ದಾರೆ. ಅಲ್ಲದೆ, ಪ್ರಮುಖ ದಿಗ್ಗಜ ಸಾಹಿತಿಗಳ ಜತೆಗಿನ ಅಪರೂಪದ ಛಾಯಾಚಿತ್ರಗಳೂ ಸುಜನಾ ಅವರ ಮನೆಯಲ್ಲಿವೆ.

### ವೆಬ್‌ಸೈಟ್ ವಿನ್ಯಾಸ

ಲೇಖನ, ಕವಿತೆ, ಧ್ವನಿ ಮುದ್ರಣ, ಕೈ ಬರಹಗಳು, ಛಾಯಾಚಿತ್ರಗಳು ಓದುಗರಿಗೆ ಒಂದೆಡೆ ಸಿಗುವಂತೆ ಮಾಡುವ ಉದ್ದೇಶದಿಂದ ಪ್ರತ್ಯೇಕ ವೆಬ್‌ಸೈಟ್ ವಿನ್ಯಾಸ ಮಾಡಲು ಮುಂದಾಗಿದ್ದಾರೆ. ಸುಜನಾ ಸಾಹಿತ್ಯಕ್ಕೆ ನೀಡಿದ ಕೊಡಗೆಗಳು ಎಲ್ಲವೂ ಒಂದೆಡೆ ಲಭ್ಯವಾಗಬೇಕು ಹಾಗೂ ಶಾಶ್ವತವಾಗಿ ಉಳಿಯಬೇಕು ಎಂಬ ಉದ್ದೇಶ ಪುತ್ರ ಶ್ರೀಧರ್ ಅವರದ್ದು.

### ಹೊಸಹೊಳಲಿನಿಂದ ಮೈಸೂರುವರೆಗೆ

ಎಸ್.ಜಿ.ನಾರಾಯಣ ಶೆಟ್ಟಿ (ಸುಜನಾ) ಅವರು ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕು ಹೊಸಹೊಳಲು ಗ್ರಾಮದಲ್ಲಿ 1930 ಏಪ್ರಿಲ್ 13ರಂದು ಜನಿಸಿದರು. ಹೊಸಹೊಳಲಿನಲ್ಲಿ ಪ್ರಾಥಮಿಕ ಶಿಕ್ಷಣ, ಹೊಳೆನರಸೀಪುರದಲ್ಲಿ ಪ್ರೌಢಶಿಕ್ಷಣ ಪಡೆದರು. ಮೈಸೂರು ವಿವಿಯಿಂದ ಬಿಎ ಆನರ್ಸ್ ಪದವಿ ಪಡೆದು, ಮಹಾರಾಜ ಕಾಲೇಜಿ ನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಯುವ ರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು. ಮೈಸೂರು ವಿವಿ ಉಪ ಕುಲ ಸಚಿವರಾಗಿಯೂ ಸೇವೆ ಸಲ್ಲಿಸಿದರು. ರಾಷ್ಟ್ರಕವಿ ಕುವೆಂಪು ಅವರ ಆತ್ಮೀಯ ಶಿಷ್ಯರಲ್ಲಿ ಇವರೂ ಒಬ್ಬರು. ಪುತಿನ ಅವರೊಂದಿಗೆ ಒಡನಾಟ ಹೊಂದಿದ್ದರು. 2009ರಲ್ಲಿ ಗೌರವ ಡಾಕ್ಟರೇಟ್ ಪಡೆದರು. 2011 ಮೇ 16ರಂದು ಮೈಸೂರಿನ ಜಯಲಕ್ಷ್ಮೀಪುರಂ ನಿವಾಸದಲ್ಲಿ ನಿಧನರಾದರು.

### ಕುಟುಂಬ

ಸುಜನಾ ಅವರಿಗೆ ಮೂವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಪುತ್ರರಾದ ರಂಗನಾಥ್, ಗುರುದೇವ್ ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವ ಹಿಸುತ್ತಿದ್ದಾರೆ. ಶ್ರೀಧರ್ ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರನಾಥ ತಾಂತ್ರಿಕ ಮಹಾವಿದ್ಯಾ ಲಯದಲ್ಲಿ ಮಾಹಿತಿ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರು. ಪುತ್ರಿ ಶುಚಿಸ್ಮಿತಾ ಸ್ವಯಂ ಉದ್ಯೋಗದಲ್ಲಿ ತೊಡಗಿದ್ದಾರೆ.

## ಮಾನವೀಯ ಸಂವೇದನೆಗಳ ಸಾಹಿತಿ ಸುಜನಾ

ಪ್ರಜಾವಾಣಿ ವಾರ್ತೆ

ಕೆ.ಆರ್.ಪೇಟೆ: 'ಮಾನವೀಯ ಸಂವೇದನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಮಹಾಕಾವ್ಯ ಬರೆದ ಸುಜನಾ ಅವರು ಮಹಾಕವಿ ಕುವೆಂಪು ನಂತರ ಮೌಲ್ಯಯುತ ಹಾಗೂ ಸತ್ವಪೂರ್ಣ ಕಾವ್ಯರಚಿಸಿದವರು' ಎಂದು ಸಾಹಿತಿ ಡಾ.ಮ.ರಾಮಕೃಷ್ಣ ಹೇಳಿದರು.

ಪಟ್ಟಣದ ಎಸ್.ಎಂ.ಲಿಂಗಪ್ಪ ಬಿಎಡ್ ಕಾಲೇಜಿನಲ್ಲಿ ಶುಕ್ರವಾರ ನಡೆದ ಸುಜನಾ ಅವರ 89 ನೇ ವರ್ಷದ ಜನ್ಮದಿನದ ಕಾರ್ಯಕ್ರಮದಲ್ಲಿ ಅವರು ಶಿ.ಕುಮಾರಸ್ವಾಮಿ ಅವರು ಸಂಪಾದಿಸಿರುವ ಡಾ.ಸುಜನಾ ಅವರ 'ಸೂಕ್ತಿ ಸುಧಾರ್ಣವ' ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದರು.

ಮಹಾಭಾರತದ ನಂತರದ ಸಂಗತಿಗಳನ್ನು ರನ್ನ, ಪಂಪ, ಕುಮಾರವ್ಯಾಸ ತಮ್ಮ ಮಹಾಕಾವ್ಯಗಳಲ್ಲಿ ಕಟ್ಟಿಕೊಡಲಿಲ್ಲ. ಆ ಪ್ರಯತ್ನವನ್ನು ಸುಜನಾ ತಮ್ಮ 'ಯುಗಸಂಧ್ಯಾ'ದಲ್ಲಿ ಮಾಡಿದ್ದಾರೆ. ಚಿಕ್ಕ ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿ ಸ್ಪಂದಿಸುತಿದ್ದ ಸುಜನಾ ಅವರು ಕುವೆಂಪು ಶಿಷ್ಯರಾಗಿ ಅವರು ತೋರಿಕೊಟ್ಟ ದಾರಿಯಲ್ಲಿ ಕನ್ನಡ ಸಹಿತ್ಯವನ್ನು ಸಮೃದ್ಧಗೊಳಿಸಿದವರು' ಎಂದರು.



ಕೆ.ಆರ್.ಪೇಟೆಯ ಎಸ್.ಎಂ.ಲಿಂಗಪ್ಪ ಬಿಎಡ್ ಕಾಲೇಜಿನಲ್ಲಿ ನಡೆದ ಸುಜನಾ ಅವರ 89ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಮ.ರಾಮಕೃಷ್ಣ ಶಿ.ಕುಮಾರಸ್ವಾಮಿ ಅವರು ಸಂಪಾದಿಸಿರುವ ಡಾ.ಸುಜನಾ ರವರ 'ಸೂಕ್ತಿ ಸುಧಾರ್ಣವ' ಕೃತಿ ಬಿಡುಗಡೆಮಾಡಿದರು

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಾಹಿತಿ ಚಿಕ್ಕಮರಳಿ ಬೋರೇಗೌಡ ಅವರು, 'ಸುಜನಾ ಅವರು ಗಡಿ ಮೀರಿದವರು. ಅವರ ಜಯಂತಿ ಕಾರ್ಯಕ್ರಮವನ್ನು ಸ್ಥಳೀಯ ಮಟ್ಟದಲ್ಲಿಯಾದರೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಬೇಕಿತ್ತು' ಎಂದು ಅಭಿಪ್ರಾಯಪಟ್ಟರು.

ಅವರು ರಚಿಸಿರುವ ಮಹಾಕಾವ್ಯದ ಬಗ್ಗೆ ಚರ್ಚೆ, ಸಂವಾದ ಆಗಬೇಕಿತ್ತು. ಅಂಥ ಪ್ರಯತ್ನ ನಡೆದಿಲ್ಲ ಎಂಬುದು ವಿಷಾದಕರ. ಸುಜನಾ ಜಿಲ್ಲೆಯ ಕವಿಗಳಾದ ಪುತಿನ, ಕೆಎಸ್‌ನ, ಎ.ಎನ್.ಮೂರ್ತಿರಾವ್, ಬೆಸಗರಹಳ್ಳಿ ರಾಮಣ್ಣ, ತ್ರಿವೇಣಿ ಅಂತೆಯೇ ಶ್ರೇಷ್ಠ ಸಾಹಿತಿಗಳಾಗಿದ್ದವರು ಎಂದರು.

ಸಂಚಾಲಕ ಶಿ.ಕುಮಾರಸ್ವಾಮಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಗ್ರಾಮಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷ ಎಸ್.ಸಿ.ಕಿರಣ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸುಜನಾ ಸಾಹಿತ್ಯ ಕೃತಿ ಕುರಿತ ಪ್ರಬಂಧ ಸ್ಪರ್ಧೆ ವಿಜೇತರಿಗೆ ತಾಲ್ಲೂಕು ಜಾನಪದ ಪರಿಷತ್ತಿನ ಅಧ್ಯಕ್ಷ ಕೆ.ಎಸ್.ಸೋಮಶೇಖರ್ ಬಹುಮಾನ ವಿತರಿಸಿದರು.

ಪ್ರಾಂಶುಪಾಲ ಪಿ.ಸುರೇಶ್, ಸುಜನಾ ಸಹೋದರರಾದ ಡಾ.ಶ್ರೀನಿವಾಸ ಶೆಟ್ಟಿ, ಗೋವಿಂದಶೆಟ್ಟಿ, ವೈದ್ಯರಾದ ಡಾ.ಸುಬ್ರಹ್ಮಣ್ಯ, ಸಾಹಿತಿಗಳಾದ ಮಾರೇನಹಳ್ಳಿ ಲೋಕೇಶ್, ಅ.ಮ.ಶ್ಯಾಮೇಶ್. ನಾಗರಾಜು. ಚಾ.ಶಿ. ಜಯಕುಮಾರ್. ತಾಲ್ಲೂಕು ಕಸಾಪ ಮಾಜಿ ಅಧ್ಯಕ್ಷ ಕೆ.ಆರ್.ನೀಲಕಂಠ, ಭಾರತ್ ವಿಕಾಸ ಪರಿಷತ್ತಿನ ಅಧ್ಯಕ್ಷ ಪದ್ಮೇಶ್ ಇತರರು ಇದ್ದರು.

# ಸುಜನಾರವರ ಹಸ್ತಾಕ್ಷರ

ಕೋಟಿ ಮಾರ್ಗವಿದೆ ಬೇಕೆ ಬರಲು ಮೃತ್ಯುವಿಗೆ?/ ಶೀಘ್ರ
ಮಾರ್ಗಗಳುಂಟು ನೂರೆಂಟು. ಉತ್ಕಟ ಪ್ರಣಯಿ ಯುವ.
ಪ್ರೇಮಿಕನು ಸುಲಭವಾಗಿ ಬಟ್ಟೆಗೊಳ್ಳುವನು. ಪಥಕೆ ಸಮ್ಮುಖದ
ರಥವನೇರುವನು.

ಸುಜನಾ

...ಣ ಬನ್ನಿ

ನನ್ನ ನಾಡು ನನ್ನ ಹೆಮ್ಮೆ

ವಿಶೇಷ ಪುರವಣಿ

**ಪ್ರತಿನಿಧಿ** ...ಇವ ನಮ್ಮವ

ಸುಜನಾ, ಕುವೆಂಪು ಅವರ ಪ್ರೀತಿಯ ಶಿಷ್ಯರಾಗಿದ್ದೂ ಕುವೆಂಪು ಅವರ ಕೃತಿಗಳ ಕುರಿತು ಬಹಳ ನಿಷ್ಠುರವಾಗಿ, ವಸ್ತುನಿಷ್ಠವಾಗಿ, ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದರು. ಪು.ತಿ.ನ. ಕಾವ್ಯದ ಹೊಳಹುಗಳು ಇವರ ವಿಮರ್ಶೆಯ ಮೇಲಿನ ಪಾಂಡಿತ್ಯಕ್ಕೆ ಸಾಕ್ಷಿಯಾದ ಮತ್ತೊಂದು ಕೃತಿ.



## ಸುಜನಾ
## ಕನ್ನಡ ಸಾಹಿತ್ಯ ಲೋಕದ ಸಜ್ಜನ

ಇವರ ಹೆಸರು ಸುಜನಾ. ಮೂಲ ಹೆಸರು ಎಸ್. ನಾರಾಯಣ ಶೆಟ್ಟಿ. ಕನ್ನಡ ಸಾಹಿತ್ಯಲೋಕದ ಸಜ್ಜನರೆಂದೇ ಹೆಸರು ಪಡೆದ ಸುಜನಾ ಮೈಸೂರಿನಲ್ಲಿ ಓದಿ ಬೋಧಿಸಿ ಮೈಸೂರನ್ನೇ ತಮ್ಮ ಸಾಹಿತ್ಯ ಕಾಯಕದ ಕ್ಷೇತ್ರವನ್ನಾಗಿಸಿ ಕೊಂಡವರು. ಕುವೆಂಪು ನಂತರ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವರು; ಸ್ವತಃ ಕುವೆಂಪು ಶಿಷ್ಯರಾಗಿದ್ದವರು.

ಕಾವ್ಯ ವಿಮರ್ಶೆ, ಅಧ್ಯಯನದೊಂದಿಗೆ ಸಾಹಿತ್ಯ ವಲಯದಲ್ಲಿ ತಮ್ಮದೇ ವಿಯವಂತಿಕೆಗೆ ಹೆಸರಾಗಿದ್ದ ಸುಜನಾ ಅವರು ಹುಟ್ಟಿದ್ದು ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲ ಗ್ರಾಮದಲ್ಲಿ (ಏಪ್ರಿಲ್ 13, 1930) ಹೊಳೆ ನರಸೀಪುರ, ಬೆಂಗಳೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದ ಸುಜನಾ ಕುವೆಂಪು, ಡಿ.ಎಲ್. ನರಸಿಂಹಾಚಾರ್ ಅವರಿಗೆ ನೆಚ್ಚಿನ ಶಿಷ್ಯರಾಗಿದ್ದು ಅವರಿಂದ ಪ್ರಭಾವಿತರಾಗಿದ್ದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದ ಅವರು ಸೃಜನಶೀಲ ಲೇಖಕರಾಗಿ, ವಿಮರ್ಶಕರಾಗಿ ಕನ್ನಡಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ಮೈಸೂರು ಮಹಾರಾಜ ಕಾಲೇಜು, ಯುವರಾಜ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿದ್ದರು. ಕುವೆಂಪು ವಿವರಿಸಿದ ದರ್ಶನ ವಿಮರ್ಶೆಯ ವಿಧಾನವನ್ನನುಸರಿಸಿ ಸಾಹಿತ್ಯ ವಿಮರ್ಶೆಯ ಹೊಸವಿಧಾನವನ್ನೇ ರೂಪಿಸಿ ಬೆಳೆಸಿದ ಕೀರ್ತಿ ಸುಜನಾ ಅವರಿಗೆ ಸಲ್ಲುತ್ತದೆ. ಹೃದಯ ಸಂವಾದ, ಪರಂಪರೆ ಮತ್ತು ಕುವೆಂಪು ಅವರ ಗಮನಾರ್ಹ ವಿಮರ್ಶಾ ಕೃತಿಗಳು. ಕುವೆಂಪು ಅವರ ಪರಮ ಅಭಿಮಾನಿ ಆಗಿದ್ದ ಸುಜನಾ ಕುವೆಂಪು ಸಾಹಿತ್ಯದ ಬಗ್ಗೆ ಮಾಡಿದ ಅನೇಕ ಉಪನ್ಯಾಸಗಳು ಅನೇಕ ಒಳನೋಟಗಳಿಂದ ಕೂಡಿದೆ. ಕುವೆಂಪು ಅವರ ಪ್ರೀತಿಯ ಶಿಷ್ಯರಾಗಿದ್ದೂ ಕುವೆಂಪು ಅವರ ಕೃತಿಗಳ ಕುರಿತು ಬಹಳ ನಿಷ್ಠುರವಾಗಿ, ವಸ್ತುನಿಷ್ಠವಾಗಿ, ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದರು. ಪು.ತಿ.ನ. ಕಾವ್ಯದ ಹೊಳಹುಗಳು ಇವರ ವಿಮರ್ಶೆಯ ಮೇಲಿನ ಪಾಂಡಿತ್ಯಕ್ಕೆ ಸಾಕ್ಷಿಯಾದ ಮತ್ತೊಂದು ಕೃತಿ.

ಗ್ರೀಕ್ ನಾಟಕ ಇಜಾಕ್ಸ್ ಅನ್ನು ಸಮರ್ಥವಾಗಿ ಅನುವಾದಿಸಿ ಕನ್ನಡಕ್ಕೆ ಕೊಟ್ಟಿರುವುದರ ಜೊತೆಗೆ ಭಾರತ ಕಥಾಮಂಜರಿ, ಬಾಲ ಕಾಂಡ ವಾಲ್ಮೀಕಿ ರಾಮಾಯಣವನ್ನು ಸಿ.ಪಿ.ಕೆ. ಅವರೊಡನೆ ಅನುವಾದಿಸಿದ್ದಾರೆ. ಮಹಾಭಾರತದ ಕುರುಕ್ಷೇತ್ರ ಯುದ್ಧ ಮುಗಿದ ನಂತರದ ಘಟನಾವಳಿಗಳ ಮೇಲೆ ರಚಿತವಾದ ಮುಕ್ತ ಛಂದಸ್ಸಿನ ಯುಗ ಸಂಧ್ಯಾ ಮಹಾಕಾವ್ಯ ಇವರ ಮೇರು ರಚನೆಗಳಲ್ಲೊಂದು. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ವರ್ಧಮಾನ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಗೌರವಗಳಿಗೆ ಭಾಜನರಾಗಿದ್ದ ಸುಜನಾ ನಿಧನರಾದದ್ದು 2011 ರಲ್ಲಿ.

### ಕೋಗಿಲೆಯಾಕಾರದ ಕೊಳಕ್ಕೆ ಸ್ಫೂರ್ತಿಯಾದವರು...

ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನೂತನ ಕಟ್ಟಡ ನಿರ್ಮಾಣದ ಸಂದರ್ಭ. ಆಗ ದೇಜಗೌ ಅವರು ಅಧ್ಯಯನ ಸಂಸ್ಥೆ ಕಟ್ಟಡದ ರೂಪುರೇಷಗಳನ್ನು ತಯಾರಿಸುತ್ತಿದ್ದರು. ಆ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾಗಿದ್ದ ಸುಜನಾ ಅಧ್ಯಯನ ಸಂಸ್ಥೆಯ ಆವರಣದಲ್ಲಿ ಸುಂದರ ಉದ್ಯಾನವನ ಹಾಗೂ ಪುಟ್ಟ ಕೊಳವೊಂದನ್ನು ನಿರ್ಮಿಸುವ ಸಲಹೆ ನೀಡಿದರಲ್ಲದೆ, ತಾವೇ ವಿಶೇಷ ಕಾಳಜಿ ವಹಿಸಿ ಕೊಳವನ್ನು ಕೋಗಿಲೆಯ ಆಕರದಲ್ಲಿ ನಿರ್ಮಿಸುವಂತೆ ಸೂಚಿಸಿದರು. ಕನ್ನಡ ಸಾಹಿತ್ಯ ಪರಂಪರೆಯು ಕೋಗಿಲೆ ದನಿಯಂತೆ ನಿರಂತರವಾಗಿ ಸುಶ್ರಾವ್ಯವಾಗಿ ಉಲಿಯಲಿ ಎಂಬ ಉದ್ದೇಶದಿಂದ ಸುಜನಾ ನೀಡಿದ ಸಲಹೆಗನುಗುಣವಾಗಿ ಇಂದಿಗೂ ಅಧ್ಯಯನ ಸಂಸ್ಥೆಯ ಮುಂದಿನ ಉದ್ಯಾನನದಲ್ಲಿರುವ ಆ ಕೊಳ ಸುಜನಾ ಅವರ ಕನ್ನಡದ ಮೇಲಿನ ಕಾಳಜಿಯನ್ನು ಸಾರುತ್ತಿದೆ.

# ಆತ್ಮಶ್ರೀ ಸುಜನಾ ಪುಸ್ತಕ ಲೋಕಾರ್ಪಣೆ ಛಾಯಾಬಿಂಬ

## ದಿನಾಂಕ:೧೩.೦೪.೨೦೨೪




ಎಡಗಡೆಯಿಂದ : ರಂಗನಾಥ್ (ಸುಜನಾರವರ ಹಿರಿಯ ಪುತ್ರ), ಕೆ.ಎಸ್.ಸೋಮಶೇಖರ್ (ಮಾಜಿ ತಾ.ಕ.ಸಾ.ಪ ಅಧ್ಯಕ್ಷರು), ಎಸ್.ಸಿ.ಕಿರಣ್‌ಕುಮಾರ್(ಅಧ್ಯಕ್ಷರು, ಗ್ರಾಮಭಾರತಿ ವಿದ್ಯಾಸಂಸ್ಥೆ), ಕೆ.ಜೆ.ನಾರಾಯಣ್ (ರಂಗಕರ್ಮಿ) ಚಂದ್ರಶೇಖರಯ್ಯ (ನಿವೃತ್ತ ಮುಖ್ಯೋಪಾಧ್ಯಾಯರು) ಮತ್ತು ಶ್ರೀಧರ್ (ಸುಜನಾರವರ ದ್ವಿತೀಯ ಪುತ್ರ).





ಜ್ಯೋತಿ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಗಣ್ಯರು ಎಡಗಡೆಯಿಂದ : ರಂಗನಾಥ್ (ಸುಜನಾರವರ ಹಿರಿಯ ಪುತ್ರ), ಕೆ.ಎಸ್.ಸೋಮಶೇಖರ್ (ಮಾಜಿ ತಾ.ಕ.ಸಾ.ಪ. ಅಧ್ಯಕ್ಷರು), ಎಸ್.ಸಿ.ಕಿರಣ್‌ಕುಮಾರ್(ಅಧ್ಯಕ್ಷರು, ಗ್ರಾಮಭಾರತಿ ವಿದ್ಯಾಸಂಸ್ಥೆ), ಶಿ.ಕುಮಾರಸ್ವಾಮಿ, ಶ್ರೀಧರ್ (ಸುಜನಾರವರ ದ್ವಿತೀಯ ಪುತ್ರ), ಚಂದ್ರಶೇಖರಯ್ಯ (ನಿವೃತ್ತ ಮುಖ್ಯೋಪಾಧ್ಯಾಯರು) ಮತ್ತು ಕೆ.ಜೆ.ನಾರಾಯಣ್ (ರಂಗಕರ್ಮಿ).



ವೇದಿಕೆಯಲ್ಲಿದ್ದ ಗಣ್ಯರುಗಳೊಂದಿಗೆ ಕೆ.ಜೆ.ನಾರಾಯಣ್‌ರವರು 'ಆತ್ಮಶ್ರೀ ಸುಜನಾ' ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು.




ಸಮಾರಂಭದಲ್ಲಿ ಉಪಸ್ಥಿತರಿದ್ದ ಸುಜನಾರವರ ಸುಪುತ್ರ ಶ್ರೀಧರ್‌ರವರು ಸಮಾರಂಭವನ್ನು ಉದ್ದೇಶಿಸಿ ಮನದಾಳದ ಮಾತುಗಳನ್ನಾಡಿದರು.




ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್.ಸಿ.ಕಿರಣ್‌ಕುಮಾರ್(ಅಧ್ಯಕ್ಷರು, ಗ್ರಾಮಭಾರತಿ ವಿದ್ಯಾಸಂಸ್ಥೆ) ಅಧ್ಯಕ್ಷೀಯ ನುಡಿಗಳನ್ನಾಡಿದರು.

# ಆತ್ಮಶ್ರೀ ಸುಜನಾ ಪುಸ್ತಕ ಲೋಕಾರ್ಪಣೆ ಪತ್ರಿಕಾಬಿಂಬ

## ದಿನಾಂಕ:೧೪.೦೪.೨೦೧೮

# ಸುಜನಾ ಸಮಗ್ರ ಸಾಹಿತ್ಯ ಪುನರ್ ಮುದ್ರಣ ಅಗತ್ಯ

## ಜನ್ಮ ದಿನಾಚರಣೆ, ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಕೆ.ಜೆ.ನಾರಾಯಣ ಒತ್ತಾಯ

ಕೆ.ಆರ್.ಪೇಟೆ : ಕನ್ನಡ ಸಾರಸ್ವತ ಲೋಕದಲ್ಲಿ ಯುದ್ಧೋತ್ತರ ಮಹಾಭಾರತವನ್ನು ಸಮರ್ಥವಾಗಿ ಚಿತ್ರಿಸಿ ಮಹಾಕಾವ್ಯ ಬರೆದ ಕೆ.ಆರ್.ಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದವರಾದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಸುಜನಾ ಅವರ ಸಮಗ್ರ ಸಾಹಿತ್ಯವನ್ನು ಸರ್ಕಾರ ಪುನರ್ ಮುದ್ರಿಸಿ ಪ್ರಚುರಗೊಳಿಸಬೇಕೆಂದು ಹಿರಿಯ ರಂಗತಜ್ಞ ಮತ್ತು ಸಾಹಿತಿ ಕೆ.ಜೆ.ನಾರಾಯಣ ಒತ್ತಾಯಿಸಿದರು.

ಪಟ್ಟಣದ ಗ್ರಾಮಭಾರತಿ ವಿದ್ಯಾ ಸಂಸ್ಥೆಯ ಎಸ್.ಸಿ.ಚಿಕ್ಕಣ್ಣಗೌಡ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ಸುಜನಾ-96ನೇ ಜನ್ಮದಿನ ಆಚರಣೆ ಸಮಾರಂಭದಲ್ಲಿ ವಿವಿಧ ಲೇಖಕರು ಬರೆದಿರುವ ಸುಜನಾ ಕುರಿತ 'ಆತ್ಮಶ್ರೀ ಸುಜನಾ' ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಸಋಷಿ, ರಾಷ್ಟ್ರಕವಿ ಕುವೆಂಪು ಅವರ ಶಿಷ್ಯರಾಗಿದ್ದ ಸುಜನಾ ಗುರು ನಡೆದ ಹಾದಿಯಲ್ಲಿಯೇ ಸಾಗಿದವರು.

ಮಹಾಕಾವ್ಯ ರಾಮಾಯಣ ಮಹಾ ದರ್ಶನಂ ಕಾವ್ಯದಿಂದ ಪ್ರೇರಣೆಗೊಂಡು ಮಹಾಭಾರತ



ಮಹಾಕಾವ್ಯದ ಯುದ್ಧೋತ್ತರ ಘಟನೆಗಳನ್ನು ಮಹಾ ಕಾವ್ಯವಾಗಿ ಬರೆದವರು ಅವರ ಸಾಹಿತ್ಯವನ್ನು ಒಂದೇ ಮಾತಿನಲ್ಲಿ ಅಳೆಯಲಾಗದು. ಅದು ಸಂಕೀರ್ಣ ಸಂಗತಿಗಳನ್ನೊಳಗೊಂಡ ಉದಾತ್ತ ಚಿಂತನೆಯ ಸಾಹಿತ್ಯವಾಗಿದೆ. ವಿದ್ಯಾರ್ಥಿಗಳು ಮತ್ತು ಸಾಹಿತ್ಯಾಸಕ್ತರು ಸುಜನಾ ಸಾಹಿತ್ಯವನ್ನು ಓದಿ ಅರ್ಥ ಮಾಡಿಕೊಂಡರೆ ಪ್ರಸ್ತುತದ ಹಲವು ಘಟನೆಗಳಿಗೆ ಪರಿಹಾರ ಒದಗಬಲ್ಲದು. ಯುದ್ಧ ಮತ್ತು ಅದರ ಭೀಕರತೆ. ಅದರಿಂದಾಗುವ ಪರಿಣಾಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿರುವ ಅವರ ಸಾಹಿತ್ಯ ಕೃತಿಗಳ ಓದು ಅವಶ್ಯ. ವಸ್ತು ಒಂದೇ ಆದರೂ ನೋಟ ಬೇರೆ. ಬೇರೇ ಎಂಬಂತೆ ಸುಜನಾ ಸಾಹಿತ್ಯದಲ್ಲಿ ವಸ್ತುವನ್ನು ಉಪಮೇಯಗಳ ಮೂಲಕ ಬಳಸಿಕೊಂಡಷ್ಟು ಬೇರೆಯವರು ಬಳಸಿಲ್ಲ. ಇಷ್ಟಾದರೂ ಅವರು ಪ್ರಚಾರಕ್ಕೆ ಗಮನ ಹರಿಸಲಿಲ್ಲ. ಮುಂದೆ ನುಗ್ಗುವ ವ್ಯಕ್ತಿತ್ವ ಪ್ರದರ್ಶಿಸಲಿಲ್ಲ. ಹಾಗಾಗಿ ಅವರಿಗೆ ದಕ್ಕಲೇಬೇಕಾಗಿದ್ದ ಹಲವು ಅವಕಾಶಗಳು, ಪ್ರಶಸ್ತಿಗಳು ಕೈತಪ್ಪಿ ಹೋದವು. ಪ್ರಚಾರವೂ ಸಿಗಲಿಲ್ಲ ಎಂದು ಕೆ.ಜೆ.ನಾರಾಯಣ ಅವರು ಬೇಸರ ವ್ಯಕ್ತಪಡಿಸಿದರು.

ಸಮಾರಂಭವನ್ನು ಉದಯರವಿ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ಸೋಮಶೇಖರ ಉದ್ಘಾಟಿಸಿ ಮಾತನಾಡಿದರು.

ಸಾಹಿತಿ ಬಿ.ಕುಮಾರಸ್ವಾಮಿ, ಚಂದ್ರಶೇಖರಯ್ಯ, ಎಸ್.ಸಿ.ಕಿರಣ್ ಮುಂತಾದವರು ಮಾತನಾಡಿದರು.

ಸುಜನಾ ಅವರ ಪುತ್ರರಾದ ರಂಗನಾಥ್ ಮತ್ತು ಶ್ರೀಧರ್, ಸಹೋದರ ಡಾ.ಶ್ರೀನಿವಾಸಶೆಟ್ಟಿ, ಎಸ್.ಎಂ.ಲಿಂಗಪ್ಪ ಬಿಎಡ್ ಕಾಲೇಜಿನ ಪ್ರಾಂಶುಪಾಲ ಪಿ.ಸುರೇಶ್, ಸಾಹಿತಿಗಳಾದ ಕೆ.ಕಾಳೇಗೌಡ, ಬಲ್ಲೇನಹಳ್ಳಿ ಮಂಜುನಾಥ್, ಜಾ.ಬಿ.ಜಯಕುಮಾರ್, ಬಳ್ಳೇಕೆರೆ ಮಂಜುನಾಥ್, ಮಾರೇನಹಳ್ಳಿ ಲೋಕೇಶ್, ಊಗಿನಹಳ್ಳಿ ಮಹೇಶ್, ತ.ಮ.ಶ್ಯಾಮೇಶ್, ಕಿಕ್ಕೇರಿ ಬಲರಾಮು ಸೇರಿದಂತೆ ಸುಜನಾ ಕುಟುಂಬಸ್ಥರು, ಅಭಿಮಾನಿಗಳು ಬಿಎಡ್ ಕಾಲೇಜಿನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಾಹಿತ್ಯ ಲೋಕದ ಅಪೂರ್ವ ಚೇತನ

• ಮಹೇಶ್ ಊಗಿನಹಳ್ಳಿ

ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕು ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ತನ್ನದೇ ಆದ ವಿಶಿಷ್ಟ ಹಾಗೂ ಮಹತ್ವದ ಕೊಡುಗೆಯನ್ನು ನೀಡಿದೆ. ಹಲವು ಮಹನೀಯ ಸಾಹಿತ್ಯ ದಿಗ್ಗಜರನ್ನು ನಾಡಿಗೆ ಸಮರ್ಪಿಸಿದ ಕೀರ್ತಿ ಈ ತಾಲ್ಲೂಕಿಗಿದೆ. ಪ್ರಖ್ಯಾತ ಸಾಹಿತಿ ಎ.ಎನ್ ಮೂರ್ತಿರಾಯರು, ಹಾಸ್ಯ ಸಾಹಿತಿಗಳಾದ ಅ.ರಾ.ಮಿತ್ರ, ಮೈಸೂರು ಮಲ್ಲಿಗೆ ಖ್ಯಾತಿಯ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರಂತೆಯೇ ಡಾ.ಸುಜನಾ (ಎಸ್.ನಾರಾಯಣಶೆಟ್ಟಿ) ಅವರು ಸಹ ನಾಡಿನ ಸಾರಸ್ವತ ಲೋಕಕ್ಕೆ ಈ ತಾಲ್ಲೂಕಿನ ಹೆಮ್ಮೆಯ ಕೊಡುಗೆ.

ನವೋದಯ ಕವಿಗಳ ಕಾವ್ಯನಾಮಗಳು ಹೆಚ್ಚು ಸರಳ ಹಾಗೂ ಆಕರ್ಷಕವಾಗಿ ಇರುತ್ತಿದ್ದವು ಅಂತಹ ಕಾವ್ಯನಾಮಗಳಲ್ಲಿ ಬಹಳ ವೈಶಿಷ್ಟ್ಯ ಪೂರ್ಣ ಹಾಗೂ ಹೆಚ್ಚು ಅತ್ಯಾಕರ್ಷಕವಾದಂತಹ ಕಾವ್ಯನಾಮ ಕುವೆಂಪು ಅವರದ್ದು. ಕುವೆಂಪು ಅವರ ಕಾವ್ಯನಾಮ. ಕುವೆಂಪು ಅವರಿಗೆ ಪರಮ ಆಪ್ತರಾದ ಸುಜನಾ ಅವರ ಕಾವ್ಯನಾಮವು ಅಷ್ಟೇ. ಸುಗುಣ, ಸೌಜನ್ಯ, ಸರಳ, ಸುಂದರವಾದ ಕಾವ್ಯಸೌಂದರ್ಯ ಪ್ರಜ್ಞೆಯ ರೂಪಕದಂತೆ ಧ್ವನಿಸುತ್ತದೆ.

ಹೊಸಹೊಳಲು ಸುಬ್ಬಯ್ಯಶೆಟ್ಟಿ ಮತ್ತು ಗೌರಮ್ಮ ದಂಪತಿಗಳ ಮಗನಾಗಿ 1930 ಏಪ್ರಿಲ್ 13 ರಂದು ಜನಿಸಿದ ನಾರಾಯಣಶೆಟ್ಟರು 'ಯುಗಸಂಧ್ಯಾ' ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವರು. ಬೆಂಗಳೂರು, ಮೈಸೂರಲ್ಲಿ ವಿದ್ಯಾಭ್ಯಾಸ ಮುಗಿಸಿ ನಂತರ ತಮ್ಮ ಪರಮ ಪೂಜ್ಯ ಗುರು ಕುವೆಂಪು, ಡಿ.ಎಲ್.ಎನ್ ಮುಂತಾದವರಿಂದ ಪ್ರಭಾವಿತರಾಗಿ ತಾವೂ ಅಧ್ಯಾಪಕರಾಗಬೇಕೆಂದು ಎಂ.ಎ. ಪದವಿ ಗಳಿಸಿದ ಸುಜನಾ ಅವರು ಕಾವ್ಯರಚನೆಯಿಂದ ಸಾಹಿತ್ಯ ಕೃಷಿ ಆರಂಭಿಸಿ ಆನಂತರ ಹಲವು ಪ್ರಕಾರಗಳಿಗೆ ತೆರೆದುಕೊಂಡು ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದು ಗಮನಾರ್ಹ ಸಂಗತಿ.



ನವೋದಯ, ನವ್ಯ, ದಲಿತ, ಬಂಡಾಯ.. ಹೀಗೆ ಹಲವು ಬಗೆಯ ಸಾಹಿತ್ಯ ಪ್ರಕಾರಗಳ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುಜನಾ ನವೋದಯ ಕವಿಗಳ ಸಾಲಿಗೆ ನಿಲ್ಲುವಂತಹರು. ನವ್ಯದ ಬಗ್ಗೆ ಅವರಿಗೆ ಅಷ್ಟು ಆಸಕ್ತಿ ಇರಲಿಲ್ಲ, ಅವರ ಬಗ್ಗೆ ಸೈದ್ಧಾಂತಿಕ ಹಾಗೂ ತಾತ್ವಿಕ ವಿರೋಧ ಇತ್ತು. ಆದರೆ ದಲಿತ ಹಾಗೂ ಬಂಡಾಯದ ಬಗ್ಗೆ ಸುಜನಾ ಅವರಿಗೆ ಅಪಾರ ಒಲವಿತ್ತು. ಹಸಿವು, ಬಡತನ, ಸಿಟ್ಟು, ನೋವು, ನಲಿವನ್ನು ಹತ್ತಿರದಿಂದ ನೋಡಿದವರಾಗಿದ್ದರು. ಜಾತಿಯತೆಯನ್ನು ಸುಜನಾ ಬಲವಾಗಿ ವಿರೋಧಿಸುತ್ತಿದ್ದರು. ಶೋಷಿತ ಸಮುದಾಯಗಳು ಮತ್ತು ಹಿಂದುಳಿದ ವರ್ಗಗಳ ಬಗ್ಗೆ ಅಪಾರವಾದ ಅಭಿಮಾನ, ಅನುಕಂಪವನ್ನು ಇಟ್ಟುಕೊಂಡಿದ್ದರು. ಆದರೆ ನೇರವಾಗಿ ಎಲ್ಲಿಯೂ ಎಡ-ಬಲ ಪಂಥಕ್ಕೆ ಅಂಟಿಕೊಂಡವರಲ್ಲ. ತಮ್ಮ ಕಾವ್ಯ ಮತ್ತು ಸಾಹಿತ್ಯ ವಿಮರ್ಶೆಗಳ ಮೂಲಕ ಬಹಳ ಸೂಚ್ಯವಾಗಿ ಏನು ಹೇಳಬೇಕೋ ಅಷ್ಟನ್ನು ಸ್ಪಷ್ಟವಾಗಿ ಹೇಳಿಬಿಡುತ್ತಿದ್ದರು. ಇದ್ದು ಇಲ್ಲದ ಹಾಗೆ, ಎಲ್ಲದರಲ್ಲೂ ಇದ್ದ ಹಾಗೆ ಬರೆಯುವುದೇ ಸುಜನಾ ಕಾವ್ಯದ ವಿಶೇಷತೆ. ರೂಪಕ ಶೈಲಿ ಅವರ ಹೆಚ್ಚುಗಾರಿಕೆ.

ಸುಜನಾ ಅವರು ನಾಟ್ಯಯಾತ್ರೆ, ಮಂಗಳಾರತಿ, ಸೊನ್ನೆ, ಎರಡರ ನಡುವೆ, ಉಡುದಾರ ಮುಂತಾದ ಕವನಸಂಕಲನಗಳ ಜೊತೆಗೆ 'ಚಿಲಿಪಿಲಿ'ಎಂಬ ಮಕ್ಕಳ ಸಂಕಲನವನ್ನೂ, ಸೇರಿದಂತೆ ಕಾವ್ಯ ರಚನೆ ಮತ್ತು ವಿಮರ್ಶಾ ಕೃತಿಗಳೂ ಸೇರಿದಂತೆ ಒಟ್ಟು 17 ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಸುಜನಾ ವಿಜ್ಞಾನದ ಬಗ್ಗೆ ಅತ್ಯಂತ ಆಸಕ್ತಿಯನ್ನು ಹೊಂದಿದ್ದರು. ವೈದ್ಯಕೀಯ ಹಾಗೂ ಸಂಗೀತದ ವಿಚಾರಗಳಲ್ಲಿ ಕೂಡ ಆಸಕ್ತಿ ಬೆಳೆಸಿಕೊಂಡಿದ್ದರು. ಮನೋ ಸಂತೋಷಕ್ಕಾಗಿ ವೀಣೆಯನ್ನು ನುಡಿಸುತ್ತಿದ್ದರು. ನಾಟ್ಯಯಾತ್ರೆ, ಒಂದೇ ಸೂರಿನಡಿಯಲ್ಲಿ ಅವರ ಜನಪ್ರಿಯ ಕವನ ಸಂಕಲನಗಳಾಗಿದ್ದವು. ಅಲ್ಲದೆ ಗ್ರೀಕ್ ಭಾಷೆಯ ಏಜಾಕ್ಸ್ ಎಂಬ ಪ್ರಖ್ಯಾತ ನಾಟಕವನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಸುಜನಾ ಅನುವಾದ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡು ಸೈ ಎನಿಸಿಕೊಂಡಿದ್ದರು.

ಸುಜನಾ ಅವರು ಮೈಸೂರು ಮಹಾರಾಜಾ ಕಾಲೇಜು, ಯುವರಾಜಾ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಆದರೆ ಎಲ್ಲಿಯೂ ಅಧಿಕಾರಕ್ಕಾಗಿ ಲಾಬಿ ಹಾಗೂ ರಾಜಕೀಯ ಲಾಬಿಗಳಿಗೆ ಒಳಗಾಗಲಿಲ್ಲ. ಸುಜನಾ ಸನ್ಮಾನ, ಗೌರವ ಹಾಗೂ ಅಭಿನಂದನೆಗಳನ್ನು ತಿರಸ್ಕಾರದ ಮನೋಭಾವದಿಂದ ನೋಡುತಿದ್ದರು. ಅವರ ಅಭಿಮಾನಿಗಳು ಬಲವಂತವಾಗಿ ಒಪ್ಪಿಸಿ ಗೌರವ ಸಲ್ಲಿಸಲು ಮುಂದಾಗಿ ಮುಜುಗರಕ್ಕೆ ಒಳಗಾಗಿರುವ ಸನ್ನಿವೇಶಗಳು ನಡೆದಿದೆ. ಮೈಸೂರು ವಿವಿ ಗೌರವ ಡಾಕ್ಟರೇಟ್ ಕೊಡಲು ಮುಂದಾಗಾಗ 'ಬೇಡ, ನನಗೆ ಈಗ ಈ ಡಾಕ್ಟರೇಟ್‌ನಿಂದ ಏನಾಗಬೇಕು. ನನಗೆ ಗುರು (ಕುವೆಂಪು)ವಿನ ಕೃಪೆ ಸಾಕು ಎಂದಿದ್ದರು.

'ಯುಗಸಂಧ್ಯಾ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಮುಖ ಪ್ರಶಸ್ತಿಗಳಿಗೆ ಸುಜನಾ ಭಾಜನರಾಗಿದ್ದಾರೆ. ಆದರೆ, ಅವರ ಸಾಹಿತ್ಯ ವಿದ್ವತ್ಪೂರ್ಣತೆಗೆ ಮತ್ತು ವಿಮರ್ಶೆಗಳಿಗೆ ಸರಿಯಾದ ಮನ್ನಣೆ ಹಾಗೂ ಪ್ರಚಾರಗಳು ಸಿಗಲಿಲ್ಲ ಎಂಬುದು ಸುಜನಾ ಅಭಿಮಾನಿಗಳ ಕೊರಗು. ಆದರೆ, ಅವರ ಸಾಹಿತ್ಯ ಮತ್ತು ವ್ಯಕ್ತಿತ್ವ ಬಹುಕಾಲದವರೆಗೂ ನೆನಪಿನಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಹುದು. ■

ಹೀಗೊಂದು ನೆನಪು

# ಸುಜನಾ ಕಾವ್ಯ ನುಡಿ

## (ಡಾ. ಸುಜನಾ ಅವರ ಕೆಲವು ಕಾವ್ಯ ಕೃತಿಗಳಿಂದ ಆಯ್ದಿರುವ ನುಡಿ ದರ್ಶನ)

**1.** ಹೊತ್ತಿಸಿಹ ಕರ್ಪೂರ ಉರಿದು ಹೋಗುವ ಮೊದಲೆ
ವ್ಯೋಮಮಾಲಿಯ ಪದಕೆ ಮಂಗಳಾರತಿಯೆತ್ತು
ಬೇಗ, ಹೇ ಪೂಜಾರಿ ! ಬಹು ಯುಗದ ಹಂಬಲಕೆ. –ಮಂಗಳಾರತಿ

2. ಸತ್ತ ಹಾವಾಡಿಗನು ಬಿಟ್ಟು ಹೋಗುವುದೇನು
ತನ್ನ ಮಗನಿಗೆ ಬರಿಯ ಹಾವುಗಳ ಬುಟ್ಟಿ !
ಅಸ್ತ್ರ ವಿದ್ಯಾಬಲರು ಬಿಟ್ಟು ಹೋಗುವುದೇನು
ತಮ್ಮ ಜನರಿಗೆ, ಬರಿಯ ಸಾವುಗಳ ಹುಟ್ಟಿ ! – ಮಂಗಳಾರತಿ

3. ಓಟು ಮೆರವಣಿಗೆಗಾಗಿ ಲಾರಿಯಲಿ ಹೊತ್ತು
ನಗರ ಕೇಂದ್ರಗಳತ್ತ ಹೊಯ್ದರೇನಂತು ಬಂತು ಯೋಗ?
ಸಂತೆಯೆಡೆಯಿಂದ ಕುರಿ ಕೋಳಿ ಆಡುಗಳ ನಗರದೆಡೆಗೆ
ಹೊತ್ತೊಯ್ಯೊ ಲಾರಿಯಲಿ ಬಂತೇನು ಅವಕೆ ಭೋಗ? – ಮಂಗಳಾರತಿ

4. ಗರುಡ ಮಣಿಕೈಯೊಳುಂಟೆಂದು
ಕಂಡ ಹುತ್ತಕ್ಕೆಲ್ಲ ಕೈ ತುಡುಕ ಬರದು
ಮರುಜೇವಣಿಯ ಮದ್ದ ತಿಂದವರೆಂದುರು
ಕೆಂಡಹೊಂಡದಲ್ಲಿ ಉರುಳಾಡಲರಿದು !

5. ಅವಮಾನಗಳ ಸಹಿಸಬಹುದತಿಕ್ಲೇಷದಿಂದ
ಸನ್ಮಾನಗಳ ಸಹಿಸಬಾರದು ಮೌನದಿಂದ
ಬೇಸಿಗೆಯ ಬರವ ತಾಳಿದ್ದ ಕೆರೆಕಟ್ಟೆಯ
ಬಿರು ಮಳೆಗೆ ಬಿರಿಯುವುದು ಸಿರಿಹೊಟ್ಟೆಯು !

6. ತನ್ನ ಮೊಳ ಬೆರಳುಗಳೆ ಮೊದಲಳತೆಗಾಧಾರ
ತನ್ನಡಿಯೆ ತನ್ನ ನಡೆಯನ್ನಳೆವ ಸೂತ್ರಧಾರ
ತನ್ನ ಕಿವಿ ಕಣ್ ಮೂಗೆ ಲೋಕಾನುಭವ ನೇತ್ರಧಾರ
ತನ್ನಾತ್ಮದನುಭವವೆ ದೈವಾನುಭವಕೆಲ್ಲ ಆದಿಮೂಲಾಧಾರ

7. ನನ್ನ ನಾ ತೋಡಿಕೊಳುವೆ, ಹಾಡಿಕೊಳುವೆ,
ಹಾಡುತ್ತ ತಳಮನದ ಒಳಜಲದ ಜನದ ಅಧಿಮನದ
ಶಿವಜಟೆಯ ಕ್ಷೀರಸಾಗರದಲ್ಲಿ ಮೂಡಿ ಕೊಳುವೆ. – ಒಂದೆ ಸೂರಡಿಯಲ್ಲಿ

8. ನಾವು ಹೊತ್ತು ತಂದಂಥ ಬುತ್ತಿ
ಸಾಕದುವೆ ನಮಗೆ ತವನಿಧಿಯ ಶಕ್ತಿ – ಸೊನ್ನೆಯೆರಡರ ನಡುವೆ

9. ಬೂದಿಗೂ ಉರಿವಾಸೆ
ಬಚ್ಚಬಾಯಿಗೂ ಮೂಳೆಯಗಿಯೂವಾಸೆ
ಗಜಗಡ್ಡಿ ಬಳ್ಳಸವೆದರೂ ಅಳೆಯುವಾಸೆ
ಸಾಂತ ಜೀವಿಗನಂತ ಆಸೆ।

10. ಉನ್ಮತ್ತನಾಗಬೇಡ, ಚಿನ್ಮತ್ತನಾಗಿ ಹಾಡ!
ಹೃನ್ಮಧುವ ಕಡೆದು ನೀಡ!

11. ಒಂಟಿಯಿದ್ದರೂ ಬಿಡದು
ತಬ್ಬುವುದು ವಿಶ್ವವು
ಇಬ್ಬನಿಯ ತಬ್ಬುವುದು
ಬಿಡದೆ ಆಕಾಶವು!

12. ಕಾವ್ಯ : ಬಾಳ್ ತೀವಿದ ಒಳಬೆಳಕಿನ ಅಮೃತವೆ!

13. ನಿನ್ನಂತೆ ನೀನು ಬಾಳು : ನನ್ನಂತೆ ನಾನು ಬಾಳೇನು,
ಆಗ ಕೇಳು : ಬಿತ್ತನೆಯ ಕಾಳು ಮುಕ್ಕಾದರಾಯ್ತು ಹಾಳು!

14. ಯಾರು ಬಲ್ಲರೋ ಜೀವ ನಿನ್ನೊಳಮನದ ದಾವ.

15. ಮೇಳವಿಲ್ಲ ಗಾನಕೆ; ತಾಳವಿಲ್ಲ ತಾನಕೆ; ತಾಳಿಯಿಲ್ಲ ಮಾನಕೆ;
ಪಾಳಿಯಿಲ್ಲ ಧ್ಯಾನಕೆ; ಅಲೆಮನದಯಾನಕೆ; ಅಲೆಯ ಕಡಲ ಮೌನಕೆ

16. ಸುದ್ದಿಯಾಗ ಹೋಗಿ, ಗೊದ್ದತಿಂದಿತಲ್ಲ, ಲದ್ದಿ ತಿಂದರಲ್ಲ;
ಬುದ್ದಿ ಹೇಳ ಹೋಗಿ, ಗುದ್ದು ತಿಂದರಲ್ಲ!

17. ಬುಡದೊಳಗೆ ಹರಿವ ಹೇಮಾವತಿಯ ಹಾರವಿಟ್ಟ
ರಂಗನಾಥನ ಗುಡಿಯ ಮುಡಿಯೊಳಗೆ ತೊಟ್ಟ ಹೇಮಗಿರಿ ಬೆಟ್ಟ !

18. ಹೊಳೆಯ ನೀರಿರಲಿ ಈಗ ಮಳೆ ನೀರಿಗೂ ಬಂತು ಆಮ್ಲರುಚಿಯು;
ಧೂಮ ರುಚಿಯು, ರಕ್ತ ರುಚಿಯು. – ಒಂದೆ ಸೂರಿಡಿಯಲ್ಲಿ

19. ಯಾವುದು ಸತ್ ಯಾವುದು ಅಸತ್
ಇದೆನಗೆ ಹೇಳುವರಾರ್ !
ಇದರಾಟದ ಹೂಟವ ತೋರುವರಾರ್
ಭವದಾಟದ ಕಾಟವ ತಪ್ಪಿಪರಾರ್ !

20. ಯಾರಯ್ಯ ಯಾರ ಹಗೆ ?
ತನ್ನಗಿಂತಲೂ ತನ್ನ ಹಗೆ ?
ತಾನ್ನೇ ತನ್ನಯ ಬಿತ್ತನೆಯ ಹಗೆ ? – ಒಂದೆ ಸೂರಡಿಯಲ್ಲಿ

21. ಹರಿದ ಹಳೆ ಪಾತ್ರದಲ್ಲೆ ಹೊಸ ನೀರ ಕೆಡೆತ
ಅದೆ ತೃಷಿತ ಶರಧಿಯ ನದಿಯ ಕುಡಿತ ! – ಒಂದೆ ಸೂರಡಿಯಲ್ಲಿ

22. ಅಯ್ಯ ಗಂಡು ಕವಿ ಪುಂಗವರೆ
ಏಕೆಲ್ಲು ಹೀಗೆ ನಮ್ಮ ಉಟ್ಟುದಲ್ಲೆಲ್ಲ ನೀವು
ಹಾಡು ಹಗಲಲ್ಲೆ ಜನ ಜಂಗುಳಿಯ ಮಧ್ಯದಲ್ಲೆ
ಸುಲಿದೆಸೆದು ಜೃಂಭಿಯಿಸಿರಿ – ಒಂದೇ ಸೂರಡಿಯಲ್ಲಿ

23. ಪರಿತಪ್ತ ಮನದ ಭಾವಗಳೆ ಕವನಗಳೆ

ನಾಳೆ ನೀವಾರ ಸಂತೈಸಲಿಹಿರಿ

ಅಲ್ಲೆ ಇದ್ದರೂ ಇರದ ರೀತಿಯಿರುದಂಥ ಮುಕ್ತ ಮನಸು

ಇದ್ದರೂನೂ ಇರದಿದ್ದರೂ ಯಾರಿಗೇನೂ ಗೂನು?

ಆಗಿದ್ದ ಭೀಮ ಮತ್ತೊಬ್ಬ ಗೋಪಶ್ಯಾಮ

ಯಾರಿರುವರೀಗ ಉಚಿತ ಪ್ರೇಕ್ಷಣೆಯ ಸಾರ್ವಭೌಮ!

– ಒಂದೇ ಸೂರಡಿಯಲ್ಲಿ

25. ನೂರು ನಾಲಿಗೆಯುಂಟು ಎದೆಗೆ ಮೌನದಲಿ

ಕೋಟಿ ಕಣ್ಣಗಳುಂಟು ನಭಕೆ ಇರುಳಿನಲ್ಲಿ!

26. ನಲ್ಲಿಯಲ್ಲಿ ಬಿದ್ದುದೆಲ್ಲ ಶುದ್ಧವಲ್ಲ

ಕಾಶಿ ಗಂಗೆಯಲ್ಲಿ ಹರಿದದ್ದೆಲ್ಲ ತೀರ್ಥವಲ್ಲ

ಕಾಮಧೇನುವೇ ಇರಲಿ ಇಟ್ಟದ್ದೆಲ್ಲ ಅಮೃತವಲ್ಲ

ದೇವ ಕವಿಯಿರಲಿ ನುಡಿದದ್ದೆಲ್ಲ ಮಂತ್ರವಲ್ಲ. – ಕಣಗಳು

27. ಅಂಬಾರಿ ಆನೆ, ಜಾತ್ರೆಯ ತೇರು,

ದೀವಳಿಗೆಯ ಮೆರವಣಿಗೆ ಎತ್ತುಗಳು,

ಜನ್ಮದಿನಗಳ ನಾಯಕ ಸ್ಮಾರಕಗಳು

ಎಲ್ಲಕ್ಕೂ ಒಂದೆ ದಿನದೇರು, ವರ್ಷವಿಡೀ ಇಳಿಜಾರು. – ಕಣಗಳು

28. ಎಡದ ಕೈಯೊಳಗೆ ಹಾಲಿನ ಬಟ್ಟಲು
ಬಲದ ಕೈಯೊಳಗೋಜು ಗಟ್ಟಿಗೆಯ
ಹಿಡಿದು ಬರುವೆ ಗುರುವೆ, ಬಡಿದು
ಹಾಲು ಕುಡಿಸುವಂಥ ಲೋಕ ಗುರುವೆ
ಇನ್ನೆಂದಿಗೆ ಬರುವೆ? ನೀ ಇನ್ನೆಂದಿಗೆ ಬರುವೆ?
ಮಾತು ಬಲ್ಲವರ ಮೂಕ ನೀತಿಗಳ ಕಂಡು
ಮೂಕ ಜೀವಿಗಳೆಲ್ಲ ಬಲು ಹೇಸಿವೆ.

29. ತಮ್ಮಂಥವರು ಬರುತ್ತಿರಬೇಕು ಆಗಾಗ ನಮ್ಮ ಮನೆಗೆ
ತಿಂಗಳಿಗೊ ವರ್ಷಕ್ಕು ಒಮ್ಮೆಮ್ಮೆ ಬರುತ್ತಿರಬೇಕು
ತಮಂಥ ಅತಿಥಿ ಬರುವಾಗಷ್ಟೇ ನಮ್ಮ ಮನೆ
ಕೊಂಚ ಓರಣವಾಗುವುದು:
ರಜ ತುಂಬಿದ ಅಂಗಳಕೆ ಸಮಾಜನದ ಕಾರಣರಯ್ಯ
ಸಾರಣಿಯ ಯೋಗ ಬರುವುದು !

30. ದೋಣಿ ಯಾವುದು ಭಾರವಲ್ಲವು ಶರಧಿಗೆ
ತೆಪ್ಪವೂ ಸಹ ತೋರವೆನಿಪುದು ಹೊಂಡಕೆ
ಜೀರುಂಬೆಯೂ ಸಹ ಶೃತವೆನಿಹುದು ಕೋಣೆಗೆ
ನಕ್ಷತ್ರ ಕೊಟಿಯು ಹಾರವೆನಿಪುದು ಬಾನಿಗೆ! – ಕಣಗಳು

31. ನಾಯಿ ಕೊಡೆಯೆದುರಿನಲಿ ನಿಂತು
ಬೆಳ್ಗೊಡೆಯ ಭ್ರಮಿಸಿದ ತಿರುಕ ನಾನು – ನಾಣ್ಯಯಾತ್ರೆ

32. ನನ್ನ ಗತಿ ಬೇರೆ ನಿನ್ನ ಗತಿ ಬೇರೆ
ಅಂತೆ ಮತಿ ಬೇರೆ ಬೇರೆ!
ಆದರೂ ಯಾವುದೇ ಗಂಟು
ಕಟ್ಟಿಹುದು ನಮ್ಮನ್ನು ಮೂಲದಲ್ಲಿ.. – ನಾಣ್ಯಯಾತ್ರೆ

33. ನೀರುಳ್ಳಿ–ರಾಜ ಈರುಳ್ಳಿ ! ಇದರ ಸೀರೆ ಪದರಗಳ
ಸುಲಿಯ ಹೋದವರೆಲ್ಲಾ ಬರಿದೆ ಅತ್ತರಣ್ಣ ! – ನಾಣ್ಯಯಾತ್ರೆ

34. ಹಣ್ಣನಷ್ಟೆ ಸವಿ, ಕಚ್ಚದಿರು ಬಿತ್ತನು ಮಾತ್ರ
ಕಚ್ಚುವೆಯ ಸವಿದುದನೆಲ್ಲ ನೀ ಓಕರಿಸುವೆ – ನಾಣ್ಯಯಾತ್ರೆ

35. ದುಡುಕಿ ಚಿತ್ತಾಗುವುದೋ? ಬರಿದಾದರೇನು ಕುಡಿಕೆ
ತೀರದಿದೆ ಬರೆವ ಮಸಿ ಬರೆವವನ ಕುಶಿ ;
ಲೆಕ್ಕಣಿಗೆ ಸಮೆದರೂ ಸಮೆಯದಿದೆ ನಿನ್ನ
ಅಕ್ಷರಾವರ್ತನದ ನಿತ್ಯಯಾತ್ರೆ ನಾರಾಯಣ – ಇಬ್ಬನಿ ಆರತಿ

36. ಯಾರ ಮಲ ಯಾರ ಫಲ ಯಾರದನು ಬಲ್ಲರಯ್ಯ – ಇಬ್ಬನಿ ಆರತಿ

37. ಕವಣೆ ಕಲ್ಲೆರಗಿದರೆ ಕೊಡೆ ಗುರಾಣಿಯ ಹಿಡಿಯಬಹುದಯ್ಯ
ಸಿಡಿಲುಲ್ಕೆ ಬಂದಪ್ಪಳಿಸಿದರೇನು ತಡೆ ಮರೆ ಹಿಡಿಯಬಹುದೇನಯ್ಯ
ಆಕಾಶ ಬಂದಪ್ಪಳಿಸಿದರೆ ಯಾರತ್ತ ಮೊರೆಯತ್ತ ಬಹುದಯ್ಯ
– ಇಬ್ಬನಿ ಆರತಿ

38. ಅಟ್ಟಕ್ಕೆ ಮೆಟ್ಟಿಲು ಇರುವಂತೆ
ಬೆಟ್ಟಕ್ಕೂ ಮೆಟ್ಟಿಲು ಇರುವುದೆ, ಅಮ್ಮಾ?
ಚಾಮುಂಡಿಬೆಟ್ಟಕ್ಕೆ ಬಸ್ಸುಂಟಂತೆ
ಸ್ವರ್ಗಕ್ಕು ಬಸ್ಸುಗಳುಂಟೇನೆ ! – ಚಿಲಿಪಿಲಿ

39. ಏನಾದರೂ ಭಾರವ ಹೊರಿಸಮ್ಮ
ಬ್ಯಾಗಿನ ಬಾರವು ಸಾಕಮ್ಮ
ಹೊತ್ತು ಶಾಲೆಗೆ ಓಡಲಾರೆ – ಚಿಲಿಪಿಲಿ

40. ಧ್ವಜಸ್ಥಂಬಕ್ಕೆ ಯಾವುದೇ ಧ್ವಜದ ಬಗೆಗೂ ಮೋಹವಿರುವುದಿಲ್ಲ
ಅದರ ತುದಿಗೆ ಯಾವ ಭಾವುಟವನ್ನಾದರೂ ಏರಿಸಿ ಹಾರಿಸಬಹುದು.

– ಕಣಗಳು

41. ಕಾಲಕೆಟ್ಟಿಲ್ಲ–ಕಾಲ ಕೆಟ್ಟಿತೆನ್ನುವವರಿಗೆ ವಿವೇಕವಿಲ್ಲ
ಎಷ್ಟೆಲ್ಲಾ ನೀಡಿದ್ದರೂ, ನೀಡುತ್ತಿದ್ದರೂ ಕೊರಗುವುದೇ
ಇಂದಿನ ಮಾನವನ ಸಹಜ ಪ್ರವೃತ್ತಿ..

"ಜೀವ ಕೆನೆಗಟ್ಟುವುದು ತಾಳಿಕೊಳ್ಳಲು ದುಃಖವನು
ದುಃಖಧಾರಣವು ಜೀವ ತಾರಣವು"

42. ಪ್ರಕೃತಿಯ ಮಹಾ ಸೌಭಾಗ್ಯ ಸಂಪತ್ತನ್ನು
ಸಂಯಮದಿಂದ ಬಳಸಿಕೊಳ್ಳುವ ಸಿದ್ಧಿಯಾಗಬೇಕಿದೆ
ತಪ್ಪೋನಪ್ಪೋ ಪ್ರಜಾಪ್ರಭುತ್ವದ ಹೊಣೆಹೊತ್ತಿದ್ದಾಗಿದೆ
ಹಾಗೂ ಸರ್ವರನ್ನೂ ಕಾಪಾಡುವುದೊಂದೇ ಉಳಿದಿರುವ ಶ್ರೇಷ್ಠ ಮಾರ್ಗ

(ತವರೂರು ಹೊಸಹೊಳಲಿನ ಕಾರ್ಯಕ್ರಮದಲ್ಲಿ ನುಡಿದ ನುಡಿಗಳು)

# ಯುಗಸಂಧ್ಯಾ ನುಡಿ ದರ್ಶನ

43. ಮಂಗಳದ ಸಮಯದಲಿ ನೆನೆಯದಿರಮಂಗಳವ
ಸೋತವರ ಬಂಧುಗಳು ಮತ್ತೆ ನೋಯದೆ ಇರಲಿ

44. ಕಳಚು ನಿ: ವೈರಾದಿ ಶೋಕ ಮೋಹಗಳ
ಬಾಳು ನೀ ಚಿರವಾಗಿ ಸ್ವಸ್ಥಾನದಲ್ಲಿ
ನೀ ಸ್ನೇಹ ಮೈತ್ರಿಯಲಿ..

45. ನಡೆದಷ್ಟೇ ತಿಳಿಯುವುದು
ನಡೆದಷ್ಟೂ ಉಳಿಯುವುದು
ನಡದೇ ತೀರಬೇಕು ಅವರವರ ದಾರಿಗಳನವರವರೆ..

46. ಅಳೆಯುತ್ತ ಅಳೆಯುತ್ತ ಬಳಲುವರಲ್ಲದೆಯೆ
ಕೊಳಗ ಬಳಲುವುದೆ ಅಯ್ಯ..

47. ಹರಿವ ರಥಕ್ಕಿಲ್ಲ ನೆಲದರಿವು
ರಥಿಗಿಲ್ಲ ಭೂಮಿಯ ಪರಿವೆ..

48. ಸಿಪ್ಪೆಯನು ಬರಿದೆ ಸುಕ್ಕಿಸಿ
ತಿರುಳ ನಾ ಬಲಿಸಲರಿದು..

49. ನಾಶವೆಂಬುದಿಲ್ಲ ಬರಿಯ ಭಾಸವು
ಪೂರ್ಣವಿದು ಪೂರ್ಣವದು
ಕೂಡಿ ಕಳೆದರು ಪೂರ್ಣ ಉಳಿವುದಖಂಡವಾಗಿಯೆ..

50. ನೀತಿಪಾಲಕರೆ ರೀತಿ ತಪ್ಪಿದರೆ ಗೊಣಗಿಕೊಳದೆ ಜನತೆ.

51. ದಣಿದಿಹುದು : ಧಣಿ – ಧರಣಿ

52. "ದಾರಿ ಮುಗಿಯದೆ ಯಾತ್ರೆಯನು ಮುಗಿಸಬಯಸುವುದು ತಗದು"

53. ಭೋಗ್ಯವಲ್ಲವು ವಸುಂಧರೆಯು ಬಲಹೀನರಿಗೆ

54. ಯುದ್ಧವಾದುದು ಯಜ್ಞ ಶುದ್ಧವಾದುದು ಚಿತ್ತ

55. ಊರೆಯಿಲ್ಲದೆ ನಡೆಯಲರಿದಣ್ಣ.

56. ಮಿತಿಗೆ ಬರದ ಅತಿಬೆಳೆಯೆ ತರುವುದವಸಾನವನು

57. ಇಳಿದ ಧ್ವಜದೊಡನೆ ಮುರಿದು ಬೀಳದು ಕಂಬ

58. ಯೋಗಿಗಾದರೂ ಪುತ್ರ ಮರಣವತಿದುಸ್ಸಹವು

59. ಕಿಡಿಯ ನಂದಿಸದೆ, ಹೊತ್ತಿಹ ಕಾಡುಗಿಚ್ಚನು ಊದಿ ಆರಿಸಬಹುದೇ

60. ಆನಂದ ಮಾಂಗಲ್ಯ ರಸಬಿಂದು ಚಿರವಾಗಿ
ಉಳಿದಿರಲಿ ಹೇ ಚಿರರಸಾನಂದ ಪ್ರಭುವೇ!




## ಡಾ. ಸುಜನಾ ಸಂಕ್ಷಿಪ್ತ ಮಾಹಿತಿ

| | |
|---|---|
| ಪೂರ್ಣ ಹೆಸರು | : ಎಸ್. ನಾರಾಯಣಶೆಟ್ಟಿ |
| ಕಾವ್ಯನಾಮ | : ಸುಜನಾ |
| ತಂದೆ | : ಸುಬ್ಬಶೆಟ್ಟಿ |
| ತಾಯಿ | : ಗೌರಮ್ಮ |
| ಜನನ | : 13–04–1930 : ಹೊಸಹೊಳಲು |
| ವಿಧ್ಯಾಭ್ಯಾಸ | : ಎಂ.ಎ. |
| ವಿವಾಹ | : 1960 |
| ಪತ್ನಿ | : ಶ್ರೀಮತಿ ಲಕ್ಷ್ಮಿ, ಮೇಲುಕೋಟೆ |
| ಮಕ್ಕಳು | : ಶ್ರೀ ರಂಗನಾಥ, ಶ್ರೀಧರ<br>ಶ್ರೀ ಗುರುದೇವ, ಶುಚಿಸ್ಮಿತ |
| ಹುದ್ದೆ | : ಕನ್ನಡ ಪ್ರಾಧ್ಯಾಪಕರು, ಮಹಾರಾಜ,<br>ಯುವರಾಜ ಕಾಲೇಜು, ಮೈಸೂರು<br>ಮೈಸೂರು ವಿ.ವಿ. ಕುಲಸಚಿವರು |

| | | |
|---|---|---|
| ಕೃತಿ ರಚನೆ | : | ಮಂಗಳಾರತಿ, ನಾಣ್ಯಯಾತ್ರೆ, ಒಂದೇ ಸೂರಡಿಯಲ್ಲಿ, ಇಬ್ಬನಿ ಆರತಿ, ಕಣಗಳು, ಚಿಲಿಪಿಲಿ, ಯುಗಸಂಧ್ಯಾ, ಪಂಚಕಲಶ, ಕುಮಾರವ್ಯಾಸ, ಪರಂಪರೆ, ಹೃದಯ ಸಂವಾದ, ಪು.ತಿ.ನ ಸಾಹಿತ್ಯದ ಕೆಲವು ಹೊಳಹುಗಳು ಹಾಗೂ ಸಂವಹನ, ಪರಂಪರೆ ಮತ್ತು ಕುವೆಂಪು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. |
| ಪ್ರಶಸ್ತಿಗಳು | : | ವರ್ಧಮಾನ ಪ್ರಶಸ್ತಿ : 1982,<br>ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ : 1989<br>ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ : 1994<br>ಡಿ. ದೇವರಾಜು ಅರಸು ಪ್ರಶಸ್ತಿ : 1998<br>ವಿಶ್ವಮಾನವ ಪ್ರಶಸ್ತಿ : 1999<br>ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ : 2002<br>ಕ.ರಾ.ಮು.ವಿ.ಡಾ ॥ ಪ್ರಶಸ್ತಿ : 2008 |
| ಮರಣ | : | 15–05–2011 |

**“ ನಾವು ಹೊತ್ತು ತಂದಂಥ ಬುತ್ತಿ**
**ಸಾಕದುವೆ ನಮಗೆ ತವನಿಧಿಯ ಶಕ್ತಿ”**

**– ಡಾ. ಸುಜನಾ**

# ಪರಿವಿಡಿ


| | | | |
|---|---|---|---|
| 1. | ವರ್ಧಮಾನ ಪ್ರಶಸ್ತಿ ಸ್ವೀಕಾರ ಭಾಷಣ : ಸುಜನಾ | – | 25 |
| 2. | ಶುಭ ಹಾರೈಕೆ : ಲಿಂಗಣ್ಣ ಬಂಧೂಕಾರ್ | – | 28 |
| 3. | ವಿದ್ಯಾಗುರು ಸುಜನಾ : ಪ್ರೋ. ಜಿ.ಟಿ.ವೀರಪ್ಪ | – | 29 |
| 4. | ನಮ್ಮ ಸುಜನಾ ನಮ್ಮ ಹೆಮ್ಮೆ : ಹೆಚ್ ಎನ್ ವಜ್ರಪ್ರಸಾದ್ | – | 31 |
| 5. | ಸುಜನಾ ಒಂದು ನೆನಪು : ಪವಿತ್ರ ಕೆ.ಆರ್. | – | 36 |
| 6. | ಹೊಸಹೊಳಲು ಸುಜನಾ ಚಿಲಿ ಪಿಲಿ–ಭಾಗ 02 ಎಸ್.ಎನ್ ಪೂಜಾ | – | 39 |
| 7. | ಚಿಲಿ ಪಿಲಿ ಮಕ್ಕಳ ಕವನ ಸಂಕಲನ : ಮಾರೇನಹಳ್ಳಿ ಲೋಕೇಶ್ | – | 43 |
| 8 | ಯುಗ ಸಂಧ್ಯಾ ಒಂದು ಚಿಂತನೆ: ಡಾ॥ ಬಿ.ಸಿ. ವಿಜಯಕುಮಾರ್ | – | 48 |
| 9 | ಮೇರುಕವಿ ಸುಜನಾ : ಅ.ಮ.ಶ್ಯಾಮೇಶ್ | – | 52 |
| 10 | ಸುಜನಾ ಅವರೊಡನೆ ಒಂದೆರಡು ಮಾತುಕತೆ : ಮ.ರಾಮಕೃಷ್ಣ | – | 55 |
| 11. | ಯುಗಸಂಧ್ಯಾ : ಜೇನುಗೂಡು ಮಹೇಶ್ ಊಗಿನಹಳ್ಳಿ | – | 60 |
| 12. | ನೇಕಾರರ ಕವಿ ಸಾಹಿತಿ : ಭಾರತಿ ಬಾಸ್ಕರ್ | – | 63 |
| 13. | ಸಿ.ಪಿ.ಕೆ ಕವನ | – | 64 |
| 14. | ಸುಜನಾ ಯುಗಸಂಧ್ಯಾದ ಜೀವ ಸೆಲೆ: ಬಲ್ಲೇನಹಳ್ಳಿ ಮಂಜುನಾಥ್ | – | 65 |
| 15. | ಸುಜನಾ ಒಂದು ಸವಿನೆನಪು : ಹೆಚ್.ಎನ್.ವಿಶ್ವನಾಥ್ | – | 71 |
| 16. | ನೆನಪಿನ ಅಂಗಳದಲಿ ಸುಜನಾ : ಕೆ.ಜೆ ನಾರಾಯಣ | – | 76 |
| 17. | ಜೀವಂತ ಸುಜನಾ : ಕಿಕ್ಕೇರಿ ದಿನೇಶ್‌ಕುಮಾರ್ | – | 81 |
| 18. | ಸುಜನಾ ಒಂದು ದೊಡ್ಡ ಯಶಸ್ಸು: ಯಶೋಧ ಪಾಂಡುಶೆಟ್ಟಿ | – | 83 |
| 19. | ನಾನು ಮೆಚ್ಚಿದ ಗಣ್ಯರು : ಡಾ॥ ಬೇರ್ಯ ರಾಮಕುಮಾರ್ | – | 86 |
| 20. | ಸುಜನಾ : ಡಾ॥ ಪಿ.ಕೆ.ರಾಜಶೇಖರ್ | – | 89 |
| 21. | ಸುಜನಾ – ನಮನ : ಶಿ.ಕುಮಾರಸ್ವಾಮಿ | – | 90 |
| 22. | ಅನುಬಂಧ 1 : ಸುಜನಾ ಕುರಿತ ಕೃತಿಗಳು — ಸಂಗ್ರಹ ಕೆ.ಜಿ.ನಾಗರಾಜು | – | 91 |
| 23. | ಅನುಬಂಧ 2 : ಕೃತಿಗಳಲ್ಲಿ ಲೇಖನಗಳು — ಸಂಗ್ರಹ ಕೆ.ಜಿ.ನಾಗರಾಜು | – | 92 |
| 24. | ಅನುಬಂಧ 3 : ಸುಜನಾ ಕೃತಿಗಳು | – | 93 |
| 25. | ಅನುಬಂಧ 4 : ಗ್ರಾಮಭಾರತಿ ಪ್ರಕಟಣೆಗಳು | – | 94 |

# ವರ್ಧಮಾನ ಸಾಹಿತ್ಯ ಪ್ರಶಸ್ತಿ – ಸ್ವೀಕಾರ ಭಾಷಣ

## ಪ್ರೊ ಸುಜನಾ

ಪ್ರಾಚಾರ್ಯರು, ಯುವರಾಜ ಕಾಲೇಜು ಮೈಸೂರು. 1988 : ಮೂಡುಬಿದಿರೆ
17–01–1988
ದ.ಕ ಜಿಲ್ಲಾ ಕಸಾಪ ಸಮ್ಮೇಳನ

ಈ ಕೆರೆ ಕಟ್ಟೆಗಳಿಗೆ ನೀರು ಬರದೆ ಬರಗಾಲದಲ್ಲಿ ಬಿರುಕು ಬರುವುದು ಉಂಟು ಏರಿಗಳಿಗೆಲ್ಲ. ಅಂಗಳವೆಲ್ಲ ದೂಳು ಏಳುವುದುಂಟು ಆ ಬೇಸಿಗೆ ಬಂತಲ್ಲ ಎಂದು. ಬಹಳ ದಿವಸಗಳಾದ ಮೇಲೆ ಮಳೇನು ತುಂಬಾ ಬರುವುದುಂಟು. ಮಳೆ ಬಂದಾಗ ಬಿರುಕು ಏರಿಗಳು ಒಡೆಯುತ್ತವೆ. ಮೋಳೆ ಬಿದ್ದಂತಹ ತೂಬುಗಳು ಬಾಯಿ ತೆರೆದುಕೊಂಡು ನೀರನ್ನೆಲ್ಲ ಹೊರಗೆ ಚಲ್ಲಿ ಬಿಡುತ್ತವೆ. ಅವಜ್ಞೆಗೆ ತುತ್ತಾಗುವ ಯಾವ ಲೇಖಕ ಕವಿಯಾಗಲಿ ಬಿರುಕುಗೊಂಡಿರುತ್ತಾನೆ. ಅತಿಶಯವಾದ ಸನ್ಮಾನ ಬಂದರೆ ಬಡೀತಾನೆ. ನನಗೆ ಈ ಸನ್ಮಾನ ಆ ಅಪಾಯದಿಂದ ಪಾರು ಮಾಡಲಿ ಎಂದು ಬಿಟ್ಟು ದೇವರಲ್ಲಿ ಬೇಡಿಕೊಳ್ಳುತ್ತೇನೆ.

ನಾನೇ ಒಂದು ವಚನದಲ್ಲಿ ಬರೆದಿರುವುದುಂಟು. ಬರಗಾಲಗಳನ್ನು ನೀನು ದೋಚಿಸಿತಕ್ಕಂಥವನು. ಮಳೆಗಾಲದಲ್ಲಿ ನೀನು ಅಳುತ್ತೀಯ, ಆದ್ದರಿಂದ ನೀನು ನಿನ್ನ ಬರಗಾಲದಲ್ಲಿ ಕೆರೆ ಮೋರೆಗಳನ್ನು ಎಚ್ಚರವಾಗಿ ಬಿಗಿಪಡಿಸಿಕೊ ಅಂತ. ಆದುದರಿಂದ ಈ ಸನ್ನಿವೇಶದಲ್ಲಿ ಇಷ್ಟೇ. ಈ ಪ್ರಶಸ್ತಿ ನನಗೆ ಬರುತ್ತೆ ಅಂತ ನಾನು ಕಲ್ಪಿಸಿಗೊಂಡಿರಲಿಲ್ಲ. ನೂರು ಎಂಬತ್ತು ಕವನಗಳ ಈ ಒಂದು ಸಂಕಲನವನ್ನು ತಂದಾಗ ಆರು ಅಥವಾ ನಾಲ್ಕು ಕವನಗಳನ್ನು ತರಬೇಕು ಎಂದು ಅಂದುಕೊಂಡಿದ್ದೆ, ದುಡ್ಡು ಹೆಚ್ಚಾಗುತ್ತೆ ಅಂತ ಒಂದು, ಯಾರು ಓದದಿರಬಹುದು ಎಂಬುದು ಮತ್ತೊಂದು. ಈ ಎರಡು ಎಚ್ಚರದಿಂದ ನಾನು ಆ ರೀತಿ ಮಾಡಿದೆ. ವಾಸ್ತವವಾದುದ್ದರಿಂದಲೋ ಏನೋ ಬಹುಮಾನ ಇದಕ್ಕೆ ತಾಗಿದೆ. ಈ ವರ್ಧಮಾನ ಪ್ರಶಸ್ತಿ ನಾನು ಹೆಸರು ಮಾತ್ರ ಕೇಳಿದ್ದೆ. ಆದರೆ ಇವರಿಗೆ, ಇವರ ಕಣ್ಣಿಗೆ ನಾನು ಬಿದ್ದೆ. ಆಮೇಲೆ ನಾನು ತಿಳಿದುಕೊಂಡಾಗ ನಾ. ಮೊಗಸಾಲೆಯವರು ನನಗೊಂದು ಕಾಗದ ಬರೆದರು. ನಿಮಗೆ ಪ್ರಶಸ್ತಿ ಬಂದಿದೆ ಇತ್ಯಾದಿ ಇತ್ಯಾದಿ. ನೀವು ಬರೆದಿರುವ ಕವನ ಸಂಕಲನಗಳು ನಮ್ಮ ಬಳಿಯಲ್ಲಾಗಲೀ ನಮ್ಮ ಅಧ್ಯಕ್ಷರ ಬಳಿಯಲ್ಲಾಗಲಿ ಇಲ್ಲ ಅಂತ. ನನಗೆ ಬಹಳ ಸಂತೋಷ ಆಯಿತು. ಯಾರಾದರೂ ನನ್ನ ಸ್ನೇಹಿತರು

ಅರ್ಜಿ ಹಾಕಿ ಕೊಂಡಿದ್ದಿರಾ, ಯಾರಾದ್ದಾದರೂ influence ಮಾಡಿಸಿದಿರಾ ಎಂದು ನನ್ನನ್ನು ಕೇಳಿದರು. ನನಗೆ ಬಹಳ ನೋವು ಕೂಡಾ ಆಯಿತು. ಆಗ ಈ ಕಾಗದ ನನಗೆ protection. ಸಾಹಿತ್ಯ ಅಕಾಡೆಮಿಗಳು ಆ ರೀತಿ ಮಾಡುತ್ತವೆ ಎಂದು ಕೇಳಿದ್ದೇನೆ, ನಾ ಎಂದೂ ಮಾಡಿರಲಿಲ್ಲ. ಯಾರಿಗೂ ಅರ್ಜಿ ಗುಜರಾಯಿಸಿ ಕೊಂಡಿಲ್ಲ. ನನ್ನ ಪ್ರಕಟಣೆಯ ಹೆಸರುಗಳು ವಿಶ್ವವಿದ್ಯಾನಿಲಯದಲ್ಲಿ ಬರಬೇಕು ಎಂದು ಯಾವತ್ತೂ ನಾನು ಹೆಸರುಗಳನ್ನು ಕಳುಹಿಸಿಕೊಟ್ಟಿಲ್ಲ. ಎಲ್ಲೋ ಅಭೂತ ಮೂಲೆಯಲ್ಲಿದ್ದವನನ್ನು ಇವರು ಆರಿಸಿದ್ದಾರೆ. ಪ್ರಾಯಶಃ ಇಡೀ ವರ್ಧಮಾನ ಪ್ರಶಸ್ತಿಯ ವ್ಯವಹಾರ ವಿಧಾನವೇ ಇದು ಎಂದು ಅಂದುಕೊಂಡಿದ್ದೀನಿ. ಇದು ಸತ್ಯ ಎಂದು ನನ್ನ ಅನುಭವಕ್ಕೆ ಬಂದಿರುವುದರಿಂದ. ಇದು ಬಹಳ ದೊಡ್ಡ ಉದ್ದೇಶ ಎಂದು ಅಂದು ಕೊಂಡಿದ್ದೀನಿ. ನನಗೆ ಇದರ ಅರ್ಹತೆ ಇದೆ–ಇಲ್ಲ ಎಂಥ ಅಲ್ಲ. ಹೇಳದೇ ಇದ್ದಂಥವನಿಗೆ ಅವರಿಗೆ ಗಮನಕ್ಕೆ ಬಂದಂಥ ಯಾವುದೇ ಗುಣಕ್ಕಾಗಿ ಕೊಟ್ಟಿದ್ದಾರೆ. ಒಂದೇ ಹೇಳತಕ್ಕದ್ದು. ನಮ್ಮ ಗುರುಗಳು ಶ್ರೀಕಂಠಯ್ಯನವರು ಒಂದು ಮಾತನ್ನು ಹೇಳ್ತಾ ಇದ್ದರು. Tragedy of love is not dead but indifference ಎಂದು. ಪ್ರೀತಿಯ ದುರಂತ ಎನ್ನುವಂಥದ್ದು ಹೆಣ್ಣಿನ ಗಂಡಿನ ಸಾವಿನಲ್ಲಿ ಇರತಕ್ಕದ್ದಲ್ಲ; ಪರಸ್ಪರ ಅವಜ್ಞೆಯಲ್ಲಿ, ಅಸಡ್ಡೆಯಲ್ಲಿ. ಕವಿಯ ಕಾವ್ಯ ಸಾಯುವುದು ಅಥವಾ ಸತ್ತಂತೆ ಆಗುವುದು, ಈ ಕವಿನೇ ಸತ್ತಂತೆ ಆಗುವುದು, ಮುದ್ದಣರಾಗ ತಕ್ಕದ್ದು, ಬರೆದಂಥ ಕವಿತೆಯನ್ನು ಓದದೇ ಇದ್ದಾಗ ಮಾತ್ರ ಅಲ್ಲ. ಓದಿ ಬಯ್ಯದೇ ಇದ್ದರೂ ಕೂಡ. ಈ ನಿರ್ವಾತ ಪ್ರದೇಶದಲ್ಲಿ ತೂಕವೇ ಇರುವುದಿಲ್ಲ. ರಾಕೆಟ್ಟಿನಲ್ಲಿ ವ್ಯಕ್ತಿಗಳು ಹೋದಾಗ ತೂಕವೇ ಇರುವುದಿಲ್ಲ ಭೂಮಿಯ ಆರ್ಕಣೆಯೂ ಇರುವುದಿಲ್ಲ; ವಿಕರ್ಷಣೆಯೂ ಇರುವುದಿಲ್ಲ. ತೂಕವೇ ಇಲ್ಲದಿರುವಾಗ... ಅವರು ತತ್ತರಿಸಿ ಹೋಗಿ ಬಿಡ್ತಾರೆ. ಕಣಗಳೆಲ್ಲ ಒಡೆದು ಹೋಗಿಬಿಡ್ತವೆ. ಆದ್ದರಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ. ಕವಿಯಾದವನ ಕೃತಿಯನ್ನು ಇಲ್ಲಿ ಓದಿ, ಇದು ಕೃತಿಯೇ ಅಲ್ಲ ಎಂದು ಬೇಕಾದರೆ ಬಯ್ಯಲಿ. ಇಲ್ಲದಿದ್ದರೆ ಈ ಕೃತಿ ಈ ಕಾರಣಕ್ಕಾಗಿ ಅಂತ ಹೇಳಲಿ. ಎರಡೂ ಇಲ್ಲದೇ ಇದ್ದಾಗ, ತುಂಬಾ ಅವಜ್ಞೆಗೆ ಒಳಗಾದಾಗ ಆ ಕೃತಿ ಅರ್ಧ ಸಾಯಬಹುದು ಎಂದು ಕಾಣಿಸುತ್ತದೆ. ಆ ಅಪಾಯದಲ್ಲಿದ್ದ–ಇರಬಹುದಾದ ನನ್ನ ಕೃತಿಗೆ ಈ ವರ್ಧಮಾನ ಪ್ರಶಸ್ತಿ ನೆಮ್ಮದಿಯನ್ನು ತರುವ ಹಾಗೆ ಬಂದಿದ್ದರೂ ನನಗೆ ಹೆದರಿಕೆ. ಯಾವಾಗಲೂ ಕೂಡ ಬಿಟ್ಟ ಮಳೆಗಳು ಬಂದ ಮೇಲೆ ಕೆರೆಗಳು ಒಡೆಯುವ ಅಪಾಯ ಇರುತ್ತದೆ ಎಂದು. ಅದು ಆಗದ ಹಾಗೆ ನಾನು ನೋಡಿಕೊಳ್ಳುವುದಕ್ಕೆ ನನ್ನ ಗುರುವನ್ನು ಪ್ರಾರ್ಥನೆ ಮಾಡುಕೊಳ್ತೇನೆ.

ಈ ಪ್ರಶಸ್ತಿಯನ್ನು ಕೊಟ್ಟು ನನ್ನಲ್ಲಿ ವಿಶ್ವಾಸವನ್ನು, ಪ್ರಾಯಶಃ ನೀನು ಕವಿತೆ ಬರೀತೀ ಎಂಬ ವಿಶ್ವಾಸವನ್ನು ತಂದು ಕೊಟ್ಟಿದ್ದಾರೆ. ನಾನೇ ನನ್ನ ಕವಿತೆಯ ಒಂದು ಕಡೆಯಲ್ಲಿ ಬರೆದಿದ್ದೆ. "ಅಳಿವಳಿದೇ ಲಾಳಿ ಬೀಸಿರುವನೇ ನಾನು" ಅಳಿಯೇ ವಶದಿದ್ದರೆ ಲಾಳಿದನು ಬೀಸಿದರೂ ಕೂಡ ಯಾವುದೇ ಬಟ್ಟೆಯನ್ನು ನೆಯ್ಯಲಿಕ್ಕೆ ಆಗೊಲ್ಲ. ತೆರೆದ ಮನಸ್ಸುಗಳಿಲ್ಲದಿದ್ದರೆ ಯಾವ ಮಾತನಾಡಿದರೂ ಏನು ಪ್ರಯೋಜನ. ಆದುದರಿಂದ ನನಗೆ ನನ್ನ ಕವನದ ವ್ಯವಹಾರ ಗೊತ್ತು. 'ಇದು ಹಣ್ಣಲ್ಲಿ, ಹೂವಲ್ಲಿ ಪಚ್ಚ ಮರುಗತನೆಯಲ್ಲ ಹಳ್ಳಿ ಜಾತ್ರೆಯ ಜವನ' ಎಂದು ನಾನೇ ನನ್ನ ಕವಿತೆಯಲ್ಲಿ ಬರೆದಿದ್ದೇನೆ. ಇದು ಹಳ್ಳಿ ಜಾತ್ರೆಯ ಜವನ. "ಮೋಟು ಕೈಯವನ ದೀರ್ಘ ದಂಡವನ, ಇದುವೆ ನನ್ನ ಕವನ," ಮೋಟು ಕೈಯವನ ಎಷ್ಟೇ ದೀರ್ಘ ದಂಡ ನಮಸ್ಕಾರ ಮಾಡಿದರೂ ಮುತ್ತಾಳ ನೋಡು ಸರಿಯಾಗಿ ನಮಸ್ಕಾರ ಮಾಡ್ತಾ ಇಲ್ಲ ಎಂದು ಹೇಳ್ತಾರೆ. 'ಕುರುಡು ಕುಂಟರು ಕಂಡ ಭುವನ, ಇದು ವೇದ ರಸಿಕರದಲ್ಲ. ಆಕಾಶದಲ್ಲಿ ಹೋಗತಕ್ಕವರದಲ್ಲ. ಇದು ಭುವನ ನಾನು ಕಂಡಿರತಕ್ಕದ್ದು ಕುರುಡು ಕುಂಟರು ಕಂಡ ಭುವನ. ಕುರುಡರಿಗೆ ವಿಶಿಷ್ಟವಾದ ಲೋಕ, ಕುಂಟರಿಗೆ ವಿಶಿಷ್ಟವಾದ ಲೋಕ, ನನ್ನ ಕವಿತೆಯಲ್ಲಿದೆ ಎಂದು ನನಗೆ ವಿಶ್ವಾಸ ಉಂಟು. ಆದರೆ ನನ್ನ ನಮನವನ್ನು ನನ್ನ ಕವಿತೆಯಲ್ಲಿ ಬೇರೆಯಯವರು ಇದೇನು ವಿಕಾರ ಎಂದು ಕೊಳ್ಳಬಹುದು. ಆದ್ದರಿಂದ ಈ ಪ್ರಶಸ್ತಿ ಇಷ್ಟೇ ನೆಮ್ಮದಿಯಿಂದ ತಂದು ಕೊಟ್ಟಿದೆ ಯಾವತ್ತಾದರೂ ಸಹೃದಯರು ಅದನ್ನು ಒಂದು ಸಾರಿ ಓದಿ ಇದು ಕವಿತೆಯಲ್ಲಿ ಎಂದು ಹೇಳಿದರೂ ನನಗೆ ನೆಮ್ಮದಿ ಬರುತ್ತದೆ. ಈ ವರ್ಧಮಾನ ಪ್ರಶಸ್ತಿಯನ್ನು ಕೊಟ್ಟಂತಹ ಈ ಮಹಾ ಸಂಸ್ಥೆಗೆ, ನನ್ನ ಗುರುಗಳಾದ ಕುವೆಂಪುರವರಿಗೆ, ಮಾಸ್ತಿಯವರಿಗೆ ಕೊಟ್ಟಿತ್ತು ಎಂದು ಗೊತ್ತಿತ್ತು. ಇತ್ತ ಕಡೆಗೆ ನನ್ನ ಗಮನ ಬರುವ ಹಾಗೆ ನನ್ನಲ್ಲೂ ವಿಶ್ವಾಸ ಸ್ವಲ್ಪ ಮೂಡುವ ಹಾಗೆ ಅದೇ ಅವಸರದಲ್ಲೂ ಎಚ್ಚರವೂ ಮಾಡುವ ಹಾಗೆ ಮಾಡಿದಂಥ ಈ ಪ್ರಶಸ್ತಿಗೆ, ಈ ಪ್ರಶಸ್ತಿಯನ್ನು ಕೊಟ್ಟಂತ ಮಹಾನ್ ಸಂಸ್ಥೆಗೆ ನಮಸ್ಕಾರಗಳು. ನಮಸ್ಕಾರಗಳು..

ಆಕರ : ಚೂಡಾಮಣಿ

ಸಂಪಾದಕರು : ಜಯಪ್ರಕಾಶ ಮಾವಿನ ಕುಳಿ

1998, ಮೂಡುಬಿದರೆ.

# ಶುಭ ಹಾರೈಕೆ

" ಆತ್ಮಶ್ರೀ ಸುಜನಾ" ಎಂಬ ಸಂಪಾದಿತ ಕೃತಿಯನ್ನು ತಮ್ಮ ಗ್ರಾಮಭಾರತಿ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಪ್ರಕಾಶಿಸುತ್ತಿರುವುದು ನಿಜಕ್ಕೂ ಆತ್ಮ ಸಂತೋಷವನ್ನುಂಟು ಮಾಡಿದೆ. ಪುಣ್ಯ ಸ್ಮರಣರಾಗಿರುವ ಮಹಾಕವಿ ಸುಜನಾ ಅವರು ಯಾವ ಕಾಲಕ್ಕೂ ಸಲ್ಲುವವರಾಗಿದ್ದಾರೆ. ಶ್ರೀಯುತರು ರಚಿಸಿರುವ ಯುಗಸಂಧ್ಯಾ: ಹೃದಯ ಸಂವಾದ: ಸಂವಹನ ಮೊದಲಾದುಗಳೆಲ್ಲವೂ ಚಿದ್ಬೆಳಕಿನ ದಿವ್ಯ ಕೃತಿಗಳಾಗಿವೆ. ಇವುಗಳನ್ನು ಕುರಿತ ನಿರಂತರ ಅಧ್ಯಯನ ಹಾಗೂ ಕಾರ್ಯಕ್ರಮಗಳು ತೀರಾ ಅಗತ್ಯವಾಗಿವೆ.

ಈ ದಿಶೆಯಲ್ಲಿ ತಮ್ಮ ಸಾರಥ್ಯದಲ್ಲಿ ಪ್ರಕಟಗೊಳ್ಳುತ್ತಿರುವ "ಆತ್ಮಶ್ರೀ ಸುಜನಾ" ಕೃತಿಯು ಸಹೃದಯರ ಪಾಲಿಗೆ ಮನನೀಯವೂ – ಮಾರ್ಗದರ್ಶಿ ರೂಪಿಯಾಗಿಯೂ ಉತ್ತಮೋತ್ತಮ ಗ್ರಂಥವಾಗಲಿ ಎಂಬುದೇ ನನ್ನ ಶುಭ ಹಾರೈಕೆ.

**ಲಿಂಗಣ್ಣ ಬಂಧೂಕಾರ್**
**ಗಾಂಧಿ ಭವನ, ಮಂಡ್ಯ.**
**ಮೊ : 9448951250**

**"ಮಡಕೆ ತುಂಬಿದ ಗಾಡಿ ನಿಧಾನವಾಗಿ ಸಾಗಬೇಕು**
**ಇಲ್ಲದಿದ್ದರೆ ದದ್ದಾಗಿ ಬಿಡುತ್ತದೆ"**
**– ಡಾ. ಸುಜನಾ**

# ವಿದ್ಯಾಗುರು ಸುಜನಾ

ಪ್ರೊ. ಸುಜನಾರವರು ನನ್ನ ವಿದ್ಯಾ ಗುರುಗಳು. 1969–73ರಲ್ಲಿ ನಾನು ಪಿಯುಸಿ ಮತ್ತು ಪದವಿ ತರಗತಿಗಳಲ್ಲಿ ಪೂಜ್ಯ ಗುರುಗಳ ಶಿಷ್ಯನಾಗಿದ್ದೆ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪೂಜ್ಯರ ಬಗ್ಗೆ ವಿಶೇಷ ಗೌರವವಿತ್ತು. ಅವರದೇ ಆದ ವಿಶೇಷ ವ್ಯಕ್ತಿತ್ವ ಅವರಲ್ಲಿತ್ತು. ನನ್ನ ಮತ್ತು ಅವರ ಪರಿಚಯ ಸಣ್ಣ ಜಗಳದಿಂದಲೇ ಪ್ರಾರಂಭವಾಯಿತು. ಕಾರಣ ನಾನು ಪಿಯುಸಿ ತರಗತಿಯಲ್ಲಿ ತರಗತಿ ವಿದ್ಯಾರ್ಥಿ ಪ್ರತಿನಿಧಿ ಸ್ಥಾನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆ. ನಾನು ಪ್ರಚಾರಕ್ಕಾಗಿ ಸಣ್ಣ ಕರಪತ್ರವನ್ನು ತರಗತಿಯ ಗೋಡೆಗೆ ಅಂಟಿಸಿದೆ. ಅದನ್ನು ನೋಡಿದ ಗುರುಗಳು ಯಾರು ಹೀಗೆ ಗೋಡೆಗೆ ಕರಪತ್ರ ಅಂಟಿಸಿ ಗೋಡೆಯ ಅಂದ ಕೆಡಿಸಿರುವವರು ಎಂದು ಕೋಪದಿಂದಲೇ ಕೇಳಿದರು. ನಾನು ಎದ್ದು ನಿಂತು ಪ್ರಚಾರಕ್ಕಾಗಿ ಹಾಗೆ ಮಾಡಿದೆ ಎಂದು ಹೇಳಿದೆ. ಯಾರು ನಿನಗೆ ಹೀಗೆ ಮಾಡಲು ಹೇಳಿದ್ದು ಎಂದು ಕೇಳಿದರು. ಹಿರಿಯರು ಪ್ರಚಾರಕ್ಕಾಗಿ ಹೀಗೆ ಮಾಡುತ್ತಾರೆ ಎಂದು ಹೇಳಿದೆ. ಅದಕ್ಕೆ ಅವರು ನಾನು ಹೇಳಿದ್ನೆ ಎಂದರು. ನೀವಲ್ಲ ಚುನಾವಣೆ ಮಾಡುವ ಹಿರಿಯರು ಪ್ರಚಾರಕ್ಕಾಗಿ ಹೀಗೆ ಮಾಡುತ್ತಾರೆ ಎಂದು ಮರುತ್ತರಕೊಟ್ಟೆ. ಅದಕ್ಕೆ ಅವರು ಕೋಪದಿಂದಲೇ ಬೈದು ತಲಹರಟೆ ಕುಳಿತುಕೋ ಎಂದು ರೇಗಿದರು. ಚುನಾವಣೆ ಮುಗಿದು ನಾನು ಆಯ್ಕೆಯಾಗಿದ್ದೆ. ನಾನು ತರಗತಿಯಲ್ಲಿ ಶ್ರದ್ಧೆಯಿಂದ ಪಾಠ ಕೇಳುತ್ತಿದ್ದೆ. ಇದನ್ನು ಗಮನಿಸಿದ ಗುರುಗಳು ನನ್ನ ಬಗ್ಗೆ ಮನದಲ್ಲೇ ಪ್ರೀತಿ ಇಟ್ಟುಕೊಂಡಿದ್ದರು. ಪರಿಚಯ ಜಗಳದಿಂದಲೇ ಪ್ರಾರಂಭವಾದರೂ ಅವರ ಕೊನೆಯ ದಿನಗಳವರೆಗೆ ನಮ್ಮಿಬ್ಬರ ಗುರು ಶಿಷ್ಯರ ಬಾಂಧವ್ಯ ಗಾಢವಾಗಿ ಉಳಿದಿತ್ತು. ಗುರುಗಳು ತರಗತಿಯಲ್ಲಿ ಹಳಗನ್ನಡ ಕಾವ್ಯ ಪಠ್ಯಗಳನ್ನು ಮನಮುಟ್ಟುವಂತೆ ಪಾಠ ಮಾಡುತ್ತಿದ್ದರು. ತರಗತಿಗಳಲ್ಲೂ ಕೂಡ ರನ್ನ, ಕುಮಾರವ್ಯಾಸ, ಪಂಪರ ಕಾವ್ಯಗಳನ್ನು ಒಮ್ಮೊಮ್ಮೆ ತಾವು ಪುಸ್ತಕ ತರದಿದ್ದಾಗ ವಿದ್ಯಾರ್ಥಿಗಳ ಪಠ್ಯ ಪುಸ್ತಕವನ್ನು ಈಸಿಕೊಂಡು ನಿರರ್ಗಳವಾಗಿ ಪಠ್ಯ ಬೋಧನೆ ಮಾಡುತ್ತಿದ್ದುದ್ದು ಈಗಲೂ ನೆನಪಿದೆ, ಆದರೆ ಬಹಳಷ್ಟು ಸಾರಿ ಪಠ್ಯ ವಿಷಯಗಳ ಜೊತೆಗೆ ಪ್ರಾಪಂಚಿಕ ವಿಷಯಗಳನ್ನು ಹೆಚ್ಚು ಹೇಳುತ್ತಿದ್ದರು. ಪಠ್ಯ ಮತ್ತು ಪ್ರಪಂಚ ಜ್ಞಾನ ಎರಡೂ ವಿದ್ಯಾರ್ಥಿಗಳಿಗೆ ತಿಳಿಯಲಿ ಎಂಬ ಕಾರಣದಿಂದ ಇರಬಹುದೇನೋ. ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ಕುರಿತೆ ಮಾತನಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ಪಠ್ಯ ಜ್ಞಾನದ ಜೊತೆಗೆ ಪ್ರಾಪಂಚಿಕ ಜ್ಞಾನವೂ ತಿಳಿಯಲಿ ಎಂಬ ಉದ್ದೇಶವಿರಬಹುದು. ಅವರ ಓದಿನ ವಿಸ್ತಾರ ಅಪಾರವಾಗಿತ್ತು. ಸಾಹಿತ್ಯ ವಿಷಯಗಳ ಜೊತೆಗೆ ವಿಜ್ಞಾನ, ರಾಜ್ಯಶಾಸ್ತ್ರ ಮುಂತಾದ ವಿಷಯ ಗ್ರಂಥಗಳನ್ನು ಹೆಚ್ಚಾಗಿ ಓದುತ್ತಿದ್ದರು. ಅವರ ಮನೆಗೆ ಯಾವಾಗ

ಹೋದರೂ ಅವರ ಅಧ್ಯಯನ ಕೊಠಡಿಯಲ್ಲಿ ಹಲವಾರು ವಿಷಯ ಗ್ರಂಥಗಳೇ ಟೇಬಲ್ಲಿನ ಮೇಲೆ ಹರಡಿಕೊಂಡಿರುತ್ತಿದ್ದವು. ಓದಿದ ಪುಸ್ತಕಗಳು ಹಾಗೆಯೇ ಟೇಬಲ್ ಮೇಲೆ ಬಿದ್ದಿರುತ್ತಿದ್ದುದ್ದು ನೋಡಿದಾಗ ಅವರ ಓದಿನ ವಿಸ್ತಾರತೆ ಅವರಿವಾಗುತ್ತಿತ್ತು. ನಂತರ ನಾನು ಪದವಿ ತರಗತಿಯಲ್ಲಿ ಕನ್ನಡವನ್ನೇ ಐಚ್ಛಿಕ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದರಿಂದ ನನ್ನ ಅವರ ಗುರು–ಶಿಷ್ಯರ ಸಂಬಂಧ ಇನ್ನೂ ಹೆಚ್ಚಾಗಿ ಹತ್ತಿರವಾಗಿತ್ತು. ನನ್ನ ಪರಿಚಯವನ್ನು ಮಾಡಿಕೊಂಡು ಅವರ ಸ್ನೇಹಿತರಾದ ಕೆ.ಟಿ.ವೀರಪ್ಪನವರ ಸೋದರಳಿಯ ನಾನು ಎಂದು ತಿಳಿದ ಮೇಲೆ ನನ್ನ ಬಗೆಗೆ ಪ್ರೀತಿ ಇನ್ನೂ ಹೆಚ್ಚಾಯಿತು. ಅವರು ತರಗತಿಯಲ್ಲಿ ಕುಮಾರವ್ಯಾಸನ ಕಾವ್ಯವನ್ನು ಮಾಡುತ್ತಿದ್ದ ರೀತಿ ಎಂದಿಗೂ ಮರೆಯಲಾಗದು. ಇಡೀ ಪಠ್ಯ ಕಾವ್ಯ ಅವರ ನೆನಪಿನ ಅಂಗಳದಲ್ಲಿ ಇರುತ್ತಿತ್ತು. ಆದ್ದರಿಂದಲೇ ಹಳಗನ್ನಡ ಕಾವ್ಯಗಳನ್ನು ಲೀಲಾಜಾಲವಾಗಿ ಪಾಠ ಮಾಡುತ್ತಿದ್ದರು. ಸಾಮಾನ್ಯವಾಗಿ ವಿದ್ಯಾರ್ಥಿಗಳನ್ನು ಏನಣ್ಣ, ಎಂದೇ ಸಂಬೋಧಿಸುತ್ತಿದ್ದರು. ಅವರ ವಿದ್ವತ್ತಿನ ಹಾಗೂ ಹಿರಿತನದ ಕಾರಣಕ್ಕೆ ಅವರು ಸ್ನಾತಕೋತ್ತರ ತರಗತಿಯಲ್ಲಿ ಬೋಧಕರಾಗಿ ಇರಬೇಕಾಗಿತ್ತು. ವಿಶ್ವವಿದ್ಯಾನಿಲಯ ರಾಜಕೀಯದಿಂದಲೋ ಏನೋ ಕೊನೆಯವರೆಗೂ ಅವರು ಮಹಾರಾಜ, ಯುವರಾಜ ಕಾಲೇಜುಗಳಲ್ಲಿ ಬೋಧಕರಾಗಿದ್ದು ನಂತರ ಕುಲಸಚಿವರ ಸ್ಥಾನಕ್ಕೇರಿ ನಿವೃತ್ತರಾದರು. ನೇರನುಡಿಯ ಪ್ರಾಮಾಣಿಕ ವ್ಯಕ್ತಿಯಾಗಿ ಗುಂಪು ಹಾಗೂ ಜಾತಿ ರಾಜಕಾರಣದಿಂದ ದೂರವಿದ್ದರು. ಇದರಿಂದಲೇ ಏನೋ ಅವರಿಗೆ ಆ ಕಾಲಕ್ಕೆ ಅಭಿನಂದನಾ ಕಾರ್ಯಕ್ರಮವಾಗಲಿ, ಅಭಿನಂದನಾ ಗ್ರಂಥವಾಗಲಿ ಹೊರಬರಲಿಲ್ಲ. ಒಮ್ಮೊಮ್ಮೆ ಏಕಾಂಗಿಯಾಗಿಯೂ ಎಂಬಂತೆ ಇರುತ್ತಿದ್ದರು. ಇದನ್ನೆಲ್ಲ ಗಮನಿಸಿದ್ದ ನಾನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯನಾಗಿದ್ದಾಗ ಅಕಾಡೆಮಿ ವತಿಯಿಂದ ಅವರ ಬಗ್ಗೆ ವಿಚಾರ ಸಂಕೀರ್ಣವನ್ನು ಮಂಡ್ಯದಲ್ಲಿ ಏರ್ಪಡಿಸಿ, ವಿಚಾರ ಸಂಕೀರ್ಣದ ಪ್ರಬಂಧಗಳನ್ನು ಗ್ರಂಥ ರೂಪದಲ್ಲಿ 'ಸುಜನಾ ವ್ಯಕ್ತಿ ಮತ್ತು ಸಾಹಿತ್ಯ' ಎಂಬ ಶೀರ್ಷಿಕೆಯಲ್ಲಿ ಅಕಾಡೆಮಿಯಿಂದ ಪ್ರಕಟಿಸಿದೆ. ಇದು ನನ್ನ ಪೂಜ್ಯ ಗುರುಗಳಿಗೆ ನನ್ನ ಋಣ ತೀರಿಸುವ ಸಣ್ಣ ಪ್ರಯತ್ನವಾಯಿತು ಅಷ್ಟೇ. ಅವರ ಸೋದರಳಿಯ ನರಸಿಂಹಮೂರ್ತಿ ಎಂಬುವವರು ನನ್ನ ವಿದ್ಯಾರ್ಥಿ ಸಹಪಾಠಿಯಾಗಿದ್ದರು. ನಾವಿಬ್ಬರೂ ಆತ್ಮೀಯ ಗೆಳೆಯರು ಆಗಿದ್ದೆವು. ಆದ್ದರಿಂದಲೇ ಸಂಬಂಧ ಗುರು ಶಿಷ್ಯರ ಜೊತೆಗೆ ಇನ್ನೂ ಹೆಚ್ಚಿನ ಬಂಧುತ್ವ ತರಹದ ಒಡನಾಟವಾಯಿತು. ಇಂದಿಗೂ ನನ್ನ ಪೂಜ್ಯ ಗುರುಗಳನ್ನು ಮರೆಯಲಾರೆ. ಅವರ ಬಗ್ಗೆ 'ಆತ್ಮಶ್ರೀ ಸುಜನಾ' ಎಂಬ ಕೃತಿಯನ್ನು ಸಮರ್ಪಿಸುತ್ತಿರುವ ಎಲ್ಲರನ್ನೂ ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ಶಿ.ಕುಮಾರಸ್ವಾಮಿ, ಎಸ್.ಸಿ.ಕಿರಣ್ ಕುಮಾರ್ ಗೆಳೆಯರು ಮಾಡುತ್ತಿರುವ ಪ್ರಯತ್ನಕ್ಕೆ ಅಭಿನಂದನೆಗಳು. ಗುರುಗಳ ನೆನಪು ಮರುಕಳಿಸಲು ಕಾರಣರಾದ ಗ್ರಂಥ ಸಮಿತಿಯ ಎಲ್ಲರಿಗೂ ನನ್ನ ವಂದನೆಗಳು.

**– ಪ್ರೊ. ಜಿ.ಟಿ.ವೀರಪ್ಪ.**
ಮಂಡ್ಯ ಮೊ : 9448572966

# ನಮ್ಮ ಸುಜನಾ ನಮ್ಮ ಹೆಮ್ಮೆ

## "ಸರಳ ಜೀವನ ಉದಾತ್ತ ಚಿಂತನೆ" – ಇದು ಸುಜನಾ ಬದುಕು

ನನ್ನೂರು ಹೊಸಹೊಳಲು ಐತಿಹಾಸಿಕ ಸಾಂಸ್ಕೃತಿಕವಾಗಿ ಪ್ರಸಿದ್ಧಿ ಪಡೆದಿದೆ. ಒಂದು ಬೀದಿಯಲ್ಲಿ ಜೈನ ಬಸದಿ ಪಕ್ಕದ ಬೀದಿಯಲ್ಲಿ ಹೊಯ್ಸಳ ಕಾಲದ ಅದ್ಭುತ ಶಿಲ್ಪಕಲೆಯ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನ ಮತ್ತೊಂದು ಬೀದಿಯಲ್ಲಿ ಕಾಳಮ್ಮನ ದೇವಸ್ಥಾನ, ನಂತರ ಮುಸ್ಲಿಂರ ಮಸೀದಿ. ಇಷ್ಟು ಸಾಕು ನಮ್ಮೂರಿನ ಸರ್ವ ಧರ್ಮ ಸಮನ್ವಯತೆಗೆ ಸಾಕ್ಷಿ. ನಮ್ಮೂರಿನ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನದ ಪ್ರವೇಶದ್ವಾರದ ಪಕ್ಕದಲ್ಲಿರುವ ಮೂಲೆಮನೆ ಸುಬ್ಬಶೆಟ್ಟಿ –ಗೌರಮ್ಮ ದಂಪತಿಗಳ 15 ಮಕ್ಕಳಲ್ಲಿ 3ನೇ ಕುಡಿಯಾಗಿ ಜನಿಸಿದವರೇ ನಾರಾಯಣ ಶೆಟ್ಟಿ. ಇವರ ಕಾವ್ಯ ನಾಮ ಸುಜನಾ (ಸುಬ್ಬಶೆಟ್ಟಿಗೆ ಜನಿಸಿದ ನಾರಾಯಣ ಶೆಟ್ಟಿ) ನಮ್ಮೂರಿನ ಕುರುಹಿನ ಶೆಟ್ಟಿ ಸಮುದಾಯದ ಪ್ರಧಾನ ವೃತ್ತಿ ಕೈಮಗ್ಗ, ಜೊತೆಜೊತೆಗೆ ಕೃಷಿ, ವ್ಯಾಪಾರ ಸಹಜವಾಗಿ ಸುಜನಾ ಅವರ ಮನೆಯಲ್ಲಿ ನಾಲ್ಕು ಕೈ ಮಗ್ಗಗಳು ಇದ್ದವು.

ಇವರ ಪ್ರಾಥಮಿಕ ಶಿಕ್ಷಣ ನಮ್ಮೂರಿನಲ್ಲಿ, ಮಾಧ್ಯಮಿಕ ಶಿಕ್ಷಣ ಹೊಳೆನರಸಿಪುರದಲ್ಲಿ, ಪ್ರೌಢ ಶಿಕ್ಷಣ ಬೆಂಗಳೂರಿನಲ್ಲಿ ಹಾಗೂ ಪದವಿ ಶಿಕ್ಷಣ ಮೈಸೂರಿನ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ನಡೆಯಿತು.

ಕುವೆಂಪು, ತೀನಂಶ್ರೀ, ಅನಕೃ, ಪುತಿನ, ಡಿ.ಎಲ್.ಎನ್. ಎಸ್.ವಿ.ರಂಗಣ್ಣ, ತ.ಸು.ಶಾಮರಾಯ, ದೇಜಗೌ, ಜಿ.ವೆಂಕಟಸುಬ್ಬಯ್ಯ ಇಂತಹ ಶ್ರೇಷ್ಠ ಗುರು ಪರಂಪರೆಯ ಕೃಪೆಯಿಂದ ಮೈಸೂರು ವಿ.ವಿ. ಕನ್ನಡ ಸ್ನಾತಕೋತ್ತರ ಪದವಿಯನ್ನು ಚಿನ್ನದ ಪದಕದೊಂದಿಗೆ ಗಳಿಸಿದರು.

ಸುಜನಾ ಅವರ ಉಪನ್ಯಾಸಕ ವೃತ್ತಿ ತಾವು ಓದಿದ ಮಹಾರಾಜ ಕಾಲೇಜಿನಲ್ಲಿ ಪ್ರಾರಂಭವಾಯಿತು. ನಂತರ ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹಾಗೂ ಯುವರಾಜ ಕಾಲೇಜಿನ ಪ್ರಾಚಾರ್ಯರಾಗಿ ಮೈಸೂರು ವಿ.ವಿ. ಕುಲಸಚಿವರಾಗಿ ಆಡಳಿತ ನಿರ್ವಹಿಸಿದರು.

ಸುಜನಾ ವೃತ್ತಿ ಬದುಕು ಆರಂಭಿಸಿದಾಗ ಅವರ ತಂದೆ ತಮ್ಮ ಮಗನನ್ನು ವಿವಾಹ ಮಾಡಲು ಪ್ರಯತ್ನಿಸಿದಾಗ, ಅನೇಕ ಶ್ರೀಮಂತ ಕುಟುಂಬದ ಮನೆತನದವರು ಹೆಣ್ಣು ಕೊಡಲು ಮುಂದೆ ಬಂದರು. ನಿರ್ಲಿಪ್ತ ಮನಸ್ಸಿನ ಸುಜನಾ ತಮ್ಮ ಒಪ್ಪಿಗೆ ನೀಡದಿದ್ದಾಗ ಅವರ ಆತ್ಮೀಯರಾದ ಉ.ಕಾ.ಸುಬ್ಬರಾಯಚಾರ್‌ರವರ ಮಧ್ಯಸ್ಥಿಕೆಯಲ್ಲಿ ವಿವಾಹವಾಗಲು

ಸಮ್ಮತಿಸಿದರು. ನಮ್ಮೂರಿನ ಶ್ರೀಮಂತ ಕುಟುಂಬದಲ್ಲಿ ಬಡತನದಿಂದ ಮನೆಕೆಲಸ ಮಾಡಿಕೊಂಡಿದ್ದ ಬಡಕುಟುಂಬದ ಹೆಣ್ಣು ಮಗಳನ್ನು ವಿವಾಹವಾದರು. ಅವರೇ ಅವರ ಬದುಕಿನ ಲಕ್ಷ್ಮಿಯಾದರು. ಇದು ಸುಜನಾರವರ ಆದರ್ಶ ಬದುಕಿಗೆ ಒಂದು ನಿದರ್ಶನ.

ಸುಜನಾರವರು ರಾಮಕೃಷ್ಣ ಪರಮಹಂಸರು ಹಾಗು ಸ್ವಾಮಿ ವಿವೇಕಾನಂದರ ವಿಚಾರಗಳಿಂದ ಪ್ರಭಾವಿತರಾಗಿದ್ದರು. ಮೈಸೂರಿನ ರಾಮಕೃಷ್ಣಾಶ್ರಮ ಅವರ ನೆಚ್ಚಿನ ತಾಣಗಳಲ್ಲಿ ಒಂದಾಗಿತ್ತು.

ಸುಜನಾ ಕನ್ನಡ ಪ್ರೋಫೆಸರ್ ಆಗಿ ವಿದ್ಯಾರ್ಥಿಗಳ ಮೇಲೆ ಅಪಾರ ಪ್ರಭಾವ ಬೀರಿದವರು. ವಿದ್ಯಾರ್ಥಿಗಳು ಅವರನ್ನು ಒಪ್ಪಿಕೊಂಡಿರಲಿಲ್ಲ ಅಪ್ಪಿಕೊಂಡಿದ್ದರು. ಅವರ ತರಗತಿಗಳಲ್ಲಿ ಐದು ವಿಭಾಗದ ವಿದ್ಯಾರ್ಥಿಗಳು ಒಟ್ಟಾಗಿ ಕುಳಿತು ಪಾಠ ಕೇಳುತ್ತಿದ್ದರು. ಅವರು ವಿದ್ಯಾರ್ಥಿಗಳನ್ನು 'ಅಣ್ಣ' 'ಅಣ್ಣಯ್ಯ' ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಇಂದಿಗೂ ಅವರ ವಿದ್ಯಾರ್ಥಿಗಳನ್ನು ಸುಜನಾ ಅವರ ಬಗ್ಗೆ ಕೇಳಿದರೆ ಭಾವವೇಶಗೊಳ್ಳುತ್ತಾರೆ, ಕಣ್ಣಂಚಲ್ಲಿ ನೀರು ತುಂಬಿಕೊಳ್ಳುತ್ತಾರೆ.

ರಾಮಾಯಣ ದರ್ಶನಂ ಕಾವ್ಯ ಬೋಧನೆಯ ಸಂದರ್ಭದಲ್ಲಿ ರಾಮ–ಲಕ್ಷ್ಮಣರನ್ನು ಜೀವಂತ ವ್ಯಕ್ತಿಗಳಂತೆ ವಿದ್ಯಾರ್ಥಿಗಳ ಕಣ್ಣ ಮುಂದೆ ತರುತ್ತಿದ್ದರು.

**ಸುಜನಾ ಬದುಕಿನ ಶಿಸ್ತು :**

ಒಂದು ಸಾರಿ ಕಾಲೇಜಿನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮಾತನಾಡುತ್ತಿದ್ದಾಗ ಎದ್ದು ನಿಂತ ಸುಜನಾ ವಿದ್ಯಾರ್ಥಿಗಳನ್ನು ಉದ್ದೇಶಿಸಿ, "ನೀವು ಕಾವು ತೆಗೆದುಕೊಳ್ಳುವ ಮಡಿಕೆಗಳು, ಜಾಸ್ತಿ ಕಾವು ಕೊಟ್ಟರೆ ಹೊಡೆದು ಹೋಗುತ್ತೀರಾ. ಕಡಿಮೆ ಕಾವು ಕೊಟ್ಟರೂ ಹೊಡೆದು ಹೋಗುತ್ತೀರಾ. ನಿಮಗೆ ಕಾವು ಕೊಡಬೇಕಾ ಬೇಡವಾ ಎಂದು ಕೇಳಿದಾಗ ಇಡೀ ಸಭಾಂಗಣ ನಿಶ್ಯಬ್ಧವಾಗಿತ್ತು.

ಮತ್ತೊಂದು ಸಂದರ್ಭ ಸುಜನಾ ಅವರಿಗೆ "ದೇವರಾಜ ಅರಸು ಪ್ರಶಸ್ತಿ' ಬಂದಾಗ ಶತಮಾನಭವನದಲ್ಲಿ ಸನ್ಮಾನ ಕಾರ್ಯಕ್ರಮ ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಗಲಾಟೆ ಮಾಡುತ್ತಿದ್ದಾಗ – ಸುಜನಾ ಎದ್ದು ನಿಂತು "ನನಗೆ ಸನ್ಮಾನ ಮಾಡುವ ನೆಪದಲ್ಲಿ ಅವಮಾನ ಮಾಡುತ್ತಿದ್ದೀರ, ಅವಮಾನ ಮಾಡಲು ಇಲ್ಲಿಗೆ ಕರೆಯಬೇಕಿರಲಿಲ್ಲ, ತರಗತಿಯಲ್ಲೇ ಅವಮಾನ ಮಾಡಬಹುದಿತ್ತು" ಎಂದಾಗ ಕಾಲೇಜಿನ ವಿದ್ಯಾರ್ಥಿಗಳು ಇಡೀ ಕಾರ್ಯಕ್ರಮದಲ್ಲಿ ಶಾಂತವಾಗಿ ಕುಳಿತರು.

ಪ್ರಾಂಶುಪಾಲರಾಗಿದ್ದಾಗ ಯುವರಾಜ ಕಾಲೇಜಿನ ವಜ್ರಮಹೋತ್ಸವ ಕಾರ್ಯಕ್ರಮದಲ್ಲಿ

ವಿದ್ಯಾರ್ಥಿಗಳಿಗೆ ತಿಂಡಿಯ ವ್ಯವಸ್ಥೆ ಏರ್ಪಡಿಸಿದ್ದರು. ವಿದ್ಯಾರ್ಥಿಗಳು ತಿಂಡಿ ತಿಂದ ಪ್ಲೇಟುಗಳನ್ನು ಕಾಲೇಜಿನ ಆವರಣದಲ್ಲಿ ಎಸೆದಿದ್ದರು. ಸುಜನಾ ಇದನ್ನು ಕಂಡು ತಾವೇ ಸ್ವತಃ ವಿದ್ಯಾರ್ಥಿಗಳು ಎಸೆದ ಪ್ಲೇಟ್‌ಗಳನ್ನು ತೆಗೆದು ಕಸದ ಬುಟ್ಟಿಗೆ ಹಾಕಿದಾಗ, ಅದನ್ನು ನೋಡಿದ ಇಡೀ ವಿದ್ಯಾರ್ಥಿ ಸಮುದಾಯ ಅವರಣದಲ್ಲಿ ಎಸೆದ ಪ್ಲೇಟುಗಳನ್ನು ತೆಗೆದು ಕಸದ ಬುಟ್ಟಿಗೆ ಹಾಕಿ ಆವರಣ ಕ್ಷಣಾರ್ಧದಲ್ಲಿ ಸ್ವಚ್ಛಗೊಳ್ಳುತ್ತದೆ.

ಮತ್ತೊಮ್ಮೆ ಕಾಲೇಜಿನಲ್ಲಿ ಸ್ಟ್ರೈಕ್ ನಡೆಯುತ್ತಿದ್ದಾಗ, ಒಬ್ಬ ವಿದ್ಯಾರ್ಥಿ ಕಾಲೇಜು ಕೊಠಡಿಯ ಕಿಟಕಿ ಬಾಗಿಲನ್ನು ಮುರಿಯುತ್ತಾನೆ. ಸುಜನಾ ಆ ವಿದ್ಯಾರ್ಥಿಗೆ ಕಪಾಳಕ್ಕೆ ಹೊಡೆದಾಗ ಯಾವ ವಿದ್ಯಾರ್ಥಿಯು ತುಟಿಪಿಟಕ್ಕೆನ್ನದೆ ಅಲ್ಲಿಂದ ತೆರಳುತ್ತಾರೆ. ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವ ರೀತಿಯಲ್ಲಿ ಪ್ರತಿನಿಧಿಸುವ ಹಕ್ಕಿದೆ. ಆದರೆ ಸಾರ್ವಜನಿಕ ಸ್ವತ್ತು ಹಾಳು ಮಾಡುವ ಹಕ್ಕಿಲ್ಲ ಎಂಬ ನೀತಿ ಸುಜನಾ ಅವರದು.

ಕಾಲೇಜಿಗೆ ಬೇರೆ ಉಪನ್ಯಾಸಕರು ಕಾರಿನಲ್ಲಿ ಬರುವಾಗ ಸುಜನಾ ತಮ್ಮ ವೆಸ್ಪಾ ಸ್ಕೂಟರ್‌ನಲ್ಲಿ ಬರುತ್ತಿದ್ದರು. ಸ್ಕೂಟರ್‌ನ್ನು ಪಾರ್ಕಿಂಗ್ ಜಾಗದಲ್ಲಿ ಪಾರ್ಕ್ ಮಾಡುತ್ತಿದ್ದರು. ಪೇಪರ್ ಬಿದ್ದಿದ್ದರೆ ಆಯ್ದು ಕಸದ ಬುಟ್ಟಿಗೆ ಹಾಕಿ ನಂತರ ಒಳಗೆ ತೆರಳುತ್ತಿದ್ದರು. ಬೆಳೆದು ನಿಂತಿದ್ದ ಕಾಂಗ್ರೆಸ್ ಗಿಡಗಳನ್ನು ತಾವೇ ಕೀಳುತ್ತಿದ್ದರು.

ಅವರು ಪ್ರಿನ್ಸಿಪಾಲ್ ಆಗಿದ್ದಾಗ ವೆಸ್ಪಾ ಸ್ಕೂಟರ್‌ನಲ್ಲಿ ಬಂದು ಇಡೀ ಕಾಲೇಜಿನ ಆವರಣವನ್ನು ಒಂದು ಸುತ್ತು ಹಾಕಿ ನಂತರ ಶೌಚಾಲಯಕ್ಕೆ ತೆರಳಿ ಅಲ್ಲಿ ಗಲೀಜಿದ್ದರೆ, ತಾವೇ ಶೌಚಾಲಯಕ್ಕೆ ನೀರನ್ನು ಹಾಕಿ ಬರುತ್ತಿದ್ದರು. ತಮ್ಮ ಕಚೇರಿಯ ಅಟೆಂಡರ್ ಆಗಿದ್ದ ಸಿದ್ದಪ್ಪರವರನ್ನು ತಮ್ಮ ತಂದೆಯಂತೆ ಗೌರವ ನೀಡುತ್ತಿದ್ದರು. ಅಧಿಕಾರದ ಅಹಂ ಎಂದಿಗೂ ಅವರ ಹತ್ತಿರ ಸುಳಿಯಲು ಬಿಡಲಿಲ್ಲ.

ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಬಯಸಿ ಬಂದಾಗ ಮೊದಲು ಸುಜನಾರವರನ್ನು ಭೇಟಿ ಮಾಡಬೇಕಾಗಿತ್ತು. ವಿದ್ಯಾರ್ಥಿಗಳನ್ನು ಛೇಂಬರ್‌ನಲ್ಲಿ ಕೂರಿಸಿಕೊಂಡು ಯಾವ ಕೋರ್ಸ್‌ಗಳಿವೆ, ನೀನು ಯಾವ ಕೋರ್ಸ್ ಓದಬಹುದು, ಯಾವ ಕೋರ್ಸ್ ಓದಿದರೆ ಏನು ಉಪಯೋಗ ಹೀಗೆ ಸಲಹೆ ಮಾರ್ಗದರ್ಶನ ನೀಡುತ್ತಿದ್ದರು. ಇದಕ್ಕಾಗಿ ಹೆಚ್ಚು ಸಮಯ ಬೇಕಿದ್ದರೂ ಬೇಸರ ಪಡದೆ ಅಗತ್ಯ ಸಲಹೆ ನೀಡುತ್ತಿದ್ದರು.

'ದೇವರಾಜು ಅರಸು ಪ್ರಶಸ್ತಿ' ಬಂದಾಗ ಪ್ರಶಸ್ತಿಯೊಂದಿಗೆ ಬಂದ 1 ಲಕ್ಷ ರೂ ಹಣವನ್ನು ತಾವು ಓದಿದ ತವರೂರಿನ ಮಾಧ್ಯಮಿಕ ಶಾಲೆಯಲ್ಲಿ ನಿಶ್ಚಿತ ಠೇವಣಿ ಖಾತೆಯಲ್ಲಿ ಪಾವತಿಸಿ ಆದರಿಂದ ಬರುವ ಬಡ್ಡಿ ಹಣದಿಂದ ವಿದ್ಯಾರ್ಥಿಗಳಿಗೆ ಪ್ರತಿವರ್ಷ ವಿದ್ಯಾರ್ಥಿ ವೇತನ ಬರುವಂತೆ ವ್ಯವಸ್ಥೆ ಮಾಡಿದ್ದಾರೆ. ನಿಜಕ್ಕೂ ತಮ್ಮ ಜನ್ಮ ಭೂಮಿಗೆ ಅವರು ಸಲ್ಲಿಸಿದ ಗೌರವ ಇದಾಗಿದೆ.

ಸುಜನಾ ಅವರು ಕುವೆಂಪುರವರನ್ನು ತಮ್ಮ "ಆದ್ಯ ಗುರುಗಳಾಗಿ" ಕಂಡವರು. ಅವರ ಸಹೋದರಿ ಶಾರದಮ್ಮ ಹೇಳುವಂತೆ, ಕುವೆಂಪುರವರು ಪ್ರತಿನಿತ್ಯ ಗೋಕುಲಂನಿಂದ ಜಯಲಕ್ಷ್ಮಿಪುರಂಗೆ ವಾಯುವಿಹಾರ ಬರುತ್ತಿದ್ದರಂತೆ. ಸುಜನಾ ಅವರ ಮನೆಯ ಮುಂದೆ ನಡೆದು ಹೋಗುತ್ತಿದ್ದರಂತೆ. ಸುಜನಾ ತಮ್ಮ ಗುರುಗಳು ನಡೆದು ಬರುವ ರಸ್ತೆಯ ಕಡೆಗೆ ಕಾಲನ್ನು ಹಾಕಿ ಮಲಗಬಾರದು ಎಂದು ತಮ್ಮ ಮನೆಯ ರಸ್ತೆಯ ಕಡೆಗೆ ತಲೆಯನ್ನು ಹಾಕಿ ಮಲಗುತ್ತಿದ್ದರಂತೆ. ಎಂತಹ ಗುರು ಭಕ್ತಿ!

ಸುಜನಾ ಅವರು ಸಂಗೀತದ ಬಗ್ಗೆ ಒಲವು ಹೊಂದಿದ್ದರಂತೆ, ವೀಣೆ ನುಡಿಸುವುದನ್ನು ಕಲಿಯುವ ಪ್ರಯತ್ನ ಮಾಡಿದ್ದರಂತೆ, ಇಂದಿಗೂ ಅವರ ಮನೆಯಲ್ಲಿ ವೀಣೆ ಇದೆ ಎಂದು ನೆನಪಿಸಿಕೊಳ್ಳುತ್ತಾರೆ.

ಸುಜನಾ ಸರಳ ವ್ಯಕ್ತಿತ್ವ, ಸದಾ ಶ್ವೇತ ವರ್ಣದ ಜುಬ್ಬಾ ಪೈಜಾಮ ಅವರ ಧಿರಿಸು. ತಮ್ಮ ಬಳಿ ಮೂರು  ಜೊತೆ ಮಾತ್ರ ವಸ್ತ್ರವನ್ನು ಹೊಂದಿದ್ದರಂತೆ. ಆಹಾರದಲ್ಲಿ ಸರಳತೆ. ಮೊದಲು ಕೆಲವೊಮ್ಮೆ ಮಾಂಸಹಾರ ಸೇವಿಸುತ್ತಿದ್ದರು. ಅವರ ವಿವಾಹ ವಾರ್ಷಿಕೋತ್ಸವ ದಿನ ಮನೆಯಲ್ಲಿ ವಿಶೇಷ ಅಡುಗೆ ಮಾಡಿದ್ದರೂ, ಆ ದಿನವೇ ಅವರ ತಂದೆ ಇಹಲೋಕ ತ್ಯಜಿಸುತ್ತಾರೆ. ಅಂದಿನಿಂದ ಸಂಪೂರ್ಣ ಸಸ್ಯಹಾರಿಗಳಾಗುತ್ತಾರೆ. ಇಂದಿಗೂ ಅವರ ಮನೆಯಲ್ಲಿ ಎಲ್ಲರೂ ಸಂಪೂರ್ಣ ಸಸ್ಯಹಾರಿಗಳಾಗಿದ್ದಾರೆ.

ಕುವೆಂಪು ಆದ್ಯ ಗುರುಗಳಾದರೆ, ಪುತಿನ ತಮ್ಮ ಮಗನಂತೆ ಸುಜನಾರವರನ್ನು ಕಂಡರು. ಸಿಪಿಕೆ ಸುಜನಾರವರ ಶಿಷ್ಯ ಎಂದು ಅವರ ಸಹೋದರಿ ನೆನಪು ಮಾಡಿಕೊಳ್ಳುತ್ತಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಪ್ರೊ.ಸುಜನಾರವರ ಮೇರುಕೃತಿ "ಯುಗಸಂಧ್ಯಾ" ಮಹಾಕಾವ್ಯ ರಚನೆ ಆರಂಭಿಸಿದಾಗ ತಮ್ಮ ಮಗಳು ಶುಚಿಸ್ಮಿತರೊಡನೆ ಪಾಂಡಿಚೆರಿಗೆ ತೆರಳಿ ಅರವಿಂದಾಶ್ರಮದಲ್ಲಿ ಹಲವು ದಿನ ತಮ್ಮ ಮಗಳಿಂದ ಮಹಾಕಾವ್ಯದ ಬರವಣಿಗೆ  ಮಾಡಿಸುತ್ತಾರೆ.

'ಮಂಗಳಾರತಿ, ನಾಣ್ಯಯಾತ್ರೆ, ಒಂದೇ ಸೂರಿನಡಿಯಲ್ಲಿ ಸೊನ್ನೆಯರಡರ ನಡುವೆ, ಉಡಿದಾರ (ಕವನ ಸಂಕಲನ) ಹೃದಯ ಸಂವಾದ (ವಿಮರ್ಶೆ) ಏಜಾಕ್ಸ್, ಪುತಿನ ಪಂಚಕಲಶ ಮೊದಲಾದವು ಮೌಲ್ಯಯುತ ಕೃತಿಗಳು.

ಮಂಡ್ಯ ಜಿಲ್ಲಾ ಐದನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಅವರಿಗೆ ಸಂದ ಗೌರವ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಅವರಿಗೆ ನಿಜಕ್ಕೂ ಸಲ್ಲಬೇಕಾದ ಗೌರವವಾಗಿತ್ತು.

ಸುಜನಾ ಯಾವುದೇ ಪ್ರಶಸ್ತಿಯನ್ನು ಬಯಸಿ ಹೋದವರಲ್ಲ ಪ್ರಶಸ್ತಿಗಳೇ ಅವರ ಸಾಹಿತ್ಯ–ವ್ಯಕ್ತಿತ್ವವನ್ನು ಕಂಡು ಅರಸಿ ಬಂದಿವೆ.

ಕರ್ನಾಟಕ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ', ವರ್ಧಮಾನ ಪ್ರಶಸ್ತಿ, ದೇವರಾಜ ಅರಸು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅವರನ್ನು ಅರಸಿ ಬಂದ ಪ್ರಶಸ್ತಿಗಳು.

ಪ್ರೊ.ಸುಜನಾ ಎಲೆಮರೆ ಕಾಯಿಯಂತೆ ಬದುಕಿದ ಮೇರು ವ್ಯಕ್ತಿತ್ವ. ನೇರ ನಡೆ ನುಡಿ ರಾಜಿಯಾಗದ ನಿಷ್ಕಳಂಕ ವ್ಯಕ್ತಿತ್ವ ನಿರ್ಮಲ ಮನಸ್ಸಿನ ಪ್ರೊಫೆಸರ್ ಸುಜನಾ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯುವ ಉಳಿಸುವ ಕೆಲಸ ಜನಪ್ರತಿನಿಧಿಗಳಿಂದ, ತವರಿನ ಜನರಿಂದ, ಕುಟುಂಬದವರಿಂದ ನಿಜಕ್ಕೂ ಆಗಲೇಬೇಕು.

* ಪ್ರೊ.ಸುಜನಾ ಪ್ರತಿಷ್ಠಾನ ಸ್ಥಾಪನೆಯಾಗಬೇಕು
* ಕೃಷ್ಣರಾಜಪೇಟೆ ಪ್ರವಾಸಿ ಮಂದಿರ ವೃತ್ತಕ್ಕೆ 'ಸುಜನಾ ವೃತ್ತ' ಎಂಬ ನಾಮಕರಣವಾಗಬೇಕು
* ಪ್ರವಾಸಿ ಮಂದಿರದ ಬಳಿ ಹೊಸಹೊಳಲು ರಸ್ತೆಗೆ ನಿರ್ಮಾಣವಾಗುತ್ತಿರುವ ಮಹಾದ್ವಾರಕ್ಕೆ "ಪ್ರೊ.ಸುಜನಾ ಮಹಾದ್ವಾರ" ಎಂದು ಹೆಸರಿಡಬೇಕು.
* ಪ್ರೊ.ಸುಜನಾ ರಾಜ್ಯಮಟ್ಟದ ಸಾಹಿತ್ಯ ಪ್ರಶಸ್ತಿ ಸ್ಥಾಪನೆಯಾಗಬೇಕು.
* ಅವರು ಹುಟ್ಟಿದ ಮನೆಯನ್ನು ಸ್ಮಾರಕವಾಗಿ ನಿರ್ಮಾಣ ಮಾಡಬೇಕು.

ಈ ಮೂಲಕ ಪ್ರೊ.ಸುಜನಾ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶಾಶ್ವತವಾಗಿ ಉಳಿಯುವ, ಸದಾ ಮಿನುಗುವ ನಕ್ಷತ್ರವಾಗಬೇಕು ಎಂಬ ಆಶಯದೊಂದಿಗೆ ನನ್ನ ನುಡಿಗಳನ್ನು ಅಕ್ಷರ ರೂಪದಲ್ಲಿ ದಾಖಲಿಸುತ್ತಿದ್ದೇನೆ.

**ವಂದನೆಗಳು**

**ಹೆಚ್.ಎನ್. ವಜ್ರಪ್ರಸಾದ್**
**s/o ನಾಬಿರಾಜಯ್ಯ**
ಹೊಸಹೊಳಲು,
ಮೊ.ಸಂ. 9980055213

# ಸುಜನಾ : ಒಂದು ನೆನಪು

ಡಾ॥ ಸುಜನಾ ಅವರು ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದಲ್ಲಿ 13.04.1930ರಲ್ಲಿ ನೇಕಾರ ಸಮುದಾಯದಲ್ಲಿ ಜನಿಸಿದರು. ಇವರ ತಂದೆ ಸುಬ್ಬಶೆಟ್ಟಿ, ತಾಯಿ ಗೌರಮ್ಮ, ಶ್ರೀಯುತರು ಮೇಲುಕೋಟೆಯ ಲಕ್ಷ್ಮೀ ಅವರನ್ನು 1960ರಲ್ಲಿ ಸಂಗಾತಿಯಾಗಿ ಸ್ವೀಕರಿಸಿದ ಇವರಿಗೆ ರಂಗನಾಥ, ಶ್ರೀಧರ, ಗುರುದೇವ ಹಾಗೂ ಶುಚಿಸ್ಮಿತ ಎಂಬ ಮಕ್ಕಳಿದ್ದಾರೆ.

ಹೊಳೆನರಸೀಪುರದಲ್ಲಿ ಪ್ರೌಢಶಿಕ್ಷಣ, ಬೆಂಗಳೂರಿನಲ್ಲಿ ಪದವಿ, ಮೈಸೂರಿನಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದ ಶ್ರೀಯುತರು ವೃತ್ತಿ ಬದುಕಿನಲ್ಲಿ ಸಾಕಷ್ಟು ಏರಿಳಿತ ಕಂಡವರು. ನೇರ ನುಡಿಯ ನಿಷ್ಠುರವಾದ ಅಹಂರಹಿತ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಮೈಸೂರಿನ ಯುವರಾಜ ಕಾಲೇಜಿನಲ್ಲಿ ಸಹಸ್ರಾರು ಶಿಷ್ಯರನ್ನು ಪಡೆದವರಾಗಿದ್ದಾರೆ. 81 ವರ್ಷಗಳ ತುಂಬು ಜೀವನ ನಡೆಸಿ ಕನ್ನಡ ಸಾರಸ್ವತ ಲೋಕದಲ್ಲಿ ಶ್ರೇಷ್ಠ ಸಾಹಿತಿಗಳಾಗಿ ದಿನಾಂಕ 15.05.2011ರಂದು ನಿಧನರಾದರು.

ಶುದ್ಧಹಸ್ತ, ಪಾರದರ್ಶಕ ಮನಸ್ಸಿನ ಮಿತಭಾಷಿಯಾಗಿ ಉತ್ತಮ ವಾಗ್ಮಿಯಾದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ವಿಶ್ವವಿದ್ಯಾನಿಲಯಕ್ಕೆ ಘನತೆ ತಂದುಕೊಟ್ಟವರಲ್ಲಿ ಒಬ್ಬರಾಗಿದ್ದಾರೆ.

ವೈಚಾರಿಕತೆ, ವೈಜ್ಞಾನಿಕ ಮನೋಭಾವ ಹೊಂದಿದ ಶ್ರೀಯುತರು ಕನ್ನಡ ಸಾಹಿತ್ಯದ ಬಗ್ಗೆ ಹೊಸ ಶಕ್ತಿ ನೀಡಿದವರು, ಹೊಸ ಕಾವ್ಯ ಪರಂಪರೆಗೆ 'ಯುಗ ಸಂಧ್ಯಾ' ಮಹಾಕಾವ್ಯ ನೀಡಿದ ಸೃಷ್ಟಿಕರ್ತರಾಗಿದ್ದಾರೆ.

ಡಾ॥ ಸುಜನಾ ಅವರು ಸದಾ ಶ್ವೇತ ವರ್ಣದ ಪೈಜಾಮ ಜುಬ್ಬಾ ಧರಿಸುತ್ತಿದ್ದರು. ಸರಳತೆಗೆ ಹೆಸರಾಗಿದ್ದ ಇವರು ತಮ್ಮ ಕಾವ್ಯ ರಚನೆಗಳಿಂದ ತಮಗೆ ಸಂದ 'ಡಿ.ದೇವರಾಜ್ ಅರಸು' ಪ್ರಶಸ್ತಿ ಹಣವಾದ ಎರಡು ಲಕ್ಷ ರೂ.ಗಳನ್ನು 'ತವರೂರು ಶಾಲೆಯ ಅಭಿವೃದ್ಧಿಗಾಗಿ' ಧಾನವಾಗಿ ನೀಡಿ ಅಪರೂಪದ ಮಾದರಿ ವ್ಯಕ್ತಿ ಎನಿಸಿದ್ದಾರೆ.

ಮಹಾಭಾರತದ ಯುದ್ಧದ ನಂತರ ನಡೆದಿರಬಹುದಾದ ಘಟನೆಯನ್ನು ಯಥಾವತ್ತಾಗಿ ಕಲ್ಪಿಸಿಕೊಂಡು ರಚಿಸಿದ ಸೃಜನಾತ್ಮಕ ಕೃತಿಯಾದ ಯುಗಸಂಧ್ಯಾ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರೆತಿದೆ (2002ರಲ್ಲಿ).

'ಮಂಗಳಾರತಿ, ನಾಣ್ಯಯಾತ್ರೆ, ಒಂದೆ ಸೂರಡಿಯಲ್ಲಿ, ಇಬ್ಬನಿ ಆರತಿ, ಕಣಗಳು, ಚಿಲಿಪಿಲಿ, ಯುಗಸಂಧ್ಯಾ' ಶ್ರೇಷ್ಠ ಸಾಹಿತ್ಯ ಸಂಗ್ರಹಗಳಾಗಿದ್ದು ಸಾಹಿತ್ಯಾಸಕ್ತರ ಮನಸ್ಸಿಗೆ ಮುದ ನೀಡುವಂತವಾಗಿದೆ.

ವಿಮರ್ಶಕ ಕೃತಿಗಳಾದ ಪರಂಪರೆ, ಹೃದಯ ಸಂವಾದ, ಪು.ತಿ.ನ. ಸಾಹಿತ್ಯದ ಕೆಲವು ಹೊಳಹುಗಳು, ಕುಮಾರ ವ್ಯಾಸ ಇವುಗಳು ಶ್ರೇಷ್ಠ ವಿಮರ್ಶಕ ಕೃತಿಗಳಾಗಿವೆ.

ಪ್ರಶಸ್ತಿಗಳ ಹಿಂದೆ ಎಂದೂ ಸಾಗದ ಸುಜನಾ ಅವರಿಗೆ ಹಲವರು ಪ್ರಶಸ್ತಿಗಳು ಬಯಸದೆ ಸಂದಿವೆ. ವರ್ಧಮಾನ ಪ್ರಶಸ್ತಿ (1982) ಕನ್ನಡ ಸಾಹಿತ್ಯ ಪ್ರಶಸ್ತಿ ಅಕಾಡಮಿ ಪ್ರಶಸ್ತಿ (1989), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1994) ಡಿ.ದೇವರಾಜ್ ಅರಸು ಪ್ರಶಸ್ತಿ (1998), ವಿಶ್ವ ಮಾನವ ಪ್ರಶಸ್ತಿ (1999), ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ (2002), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ (2008).

ಯುಗಸಂಧ್ಯಾ ಮಹಾಕಾವ್ಯದ ಅಂತಿಮ ಸಾರದಲ್ಲಿ ಸಿಗುವುದು ಬೂದಿ ಮತ್ತು ಕಣ್ಣೀರು. 'ಗೆದ್ದವನು ಸೋತ, ಸೋತವನು ಸತ್ತ' ಎಂಬುದನ್ನು ಶ್ರೀಯುತರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಯುದ್ಧದ ನಂತರ ದುಃಖ ದುಮ್ಮಾನಗಳ ಬಳುವಳಿ ಹೆಚ್ಚು. ದುಃಖವನ್ನು ಗೆದ್ದು ನಿರ್ವಿಕಾರವಾಗಿ ಸಮಚಿತ್ತ ಭಾವನೆ ಹೇಗಿರಬೇಕೆಂಬುದನ್ನು ಶ್ರೀಯುತರು ಸಮಗ್ರವಾಗಿ ಚಿತ್ರಿಸಿದ್ದಾರೆ.

ಮಹಾಭಾರತದ ಕಥೆ ಎಲ್ಲರಿಗೂ ತಿಳಿದಿದ್ದರು, ಯುದ್ಧದ ನಂತರ ಗೆದ್ದ ಜನರ ಅವಸ್ಥೆ, ತದನಂತರದ ಅಂತ್ಯವನ್ನು ಸಮಚಿತ್ತವಾಗಿ ತಿಳಿಸಿರುವ ಮಹಾಕಾವ್ಯ ಮತ್ತೊಂದಿಲ್ಲ. ಕುಮಾರವ್ಯಾಸರ ಕಾವ್ಯ ಯುದ್ಧಕ್ಕೆ ಅಂತ್ಯಗೊಂಡಿದೆ. ಲಕ್ಷ್ಮೀಶ, ಜೈಮಿನಿ ಭಾರತ ಅಶ್ವಮೇಧಯಾಗಕ್ಕೆ ಕೊನೆಗೊಂಡರೆ; ಸುಜನಾ ಅವರ ಯುಗಸಂಧ್ಯಾ ಈ ಎರಡರ ಜೊತೆ ನಿವಾರಿಸಿ ಮಹಾಭಾರತದ ನಂತರ ನಡೆದ ಘಟನೆಗಳ ವಾಸ್ತವತೆಯನ್ನು ತೆರೆದಿಟ್ಟ ಮೇರು ಕಾವ್ಯವಾಗಿದೆ. ಭಾರತದ ಸಾಹಿತ್ಯದಲ್ಲಿಯೇ ಉತ್ಕೃಷ್ಠ ಕಾವ್ಯವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಈ ಮಹಾಕಾವ್ಯ ಹಳೆಗನ್ನಡದ ಹೊಸಗನ್ನಡವನ್ನು ಮೀರಿ ಕನ್ನಡದಲ್ಲಿ ಹೊಸ ಭಾಷ್ಯ ಬರೆದು ಕನ್ನಡವನ್ನು ಶ್ರೀಮಂತಗೊಳಿಸಿದೆ. ಯುಗಸಂಧ್ಯಾ ಮಹಾಕಾವ್ಯ 425 ಪುಟಗಳ ಸರಳತೆಯ ಛಂದಸ್ಸನ್ನು ಹೊಂದಿದೆ. ಕಾವ್ಯಸಾರದಲ್ಲಿ ಹರಿದು ಬಂದಿರುವ 'ಗಾಂಭೀರ್ಯ' 'ಬೋರ್ಗರತೆ' 'ತಿಳಿನೀರಿನ ಹಾಲ್ಗಡಲು' ಒಳಗೊಂಡ ಹೂರಣವನ್ನು ಹೊಂದಿದ್ದು ಓದುಗರ ಮನಸ್ಸನ್ನು ಗೆಲ್ಲುವಂತಿದೆ.

ಮಹಾಭಾರದ ಯುದ್ಧ ಮುಗಿದ ನಂತರ ಕೃಷ್ಣ ಯಕಶ್ಚಿತ್ ಬೇಡನ ಬಾಣಕ್ಕೆ ಬಲಿಯಾಗುವುದರ ಮೂಲಕ ದ್ವಾಪರ ಯುಗದ ಅಂತ್ಯಕ್ಕೆ ಮುನ್ನುಡಿಯಾಗುವಂತಿದೆ. ಯಾದವರು ಬಡಿದಾಡಿ ಸಾಯುತ್ತಾರೆ. ದ್ವಾರಕನಗರ ಸಮುದ್ರದಲ್ಲಿ ಮುಳುಗಿ ಹೋಗುತ್ತದೆ.

ಧರ್ಮರಾಯ ಮೊಮ್ಮಕ್ಕಳಿಗೆ ಪಟ್ಟಕಟ್ಟಿ ಸಹೋದರರೊಂದಿಗೆ ಮತ್ತು ಪತ್ನಿಯೊಂದಿಗೆ ಸ್ವರ್ಗಾರೋಹಣ ಕೈಗೊಳ್ಳುವುದರೊಂದಿಗೆ ದ್ವಾಪರಯುಗ ಅಂತ್ಯಗೊಳ್ಳುತ್ತದೆ.

ಶ್ರೀಯುತರು ಮುಪ್ಪಿನ ಸಂದರ್ಭದಲ್ಲಿ ಲೇಖನಿ ಹಿಡಿಯಲಾರದಂತಹ ಸ್ಥಿತಿಯಲ್ಲಿ ಮಕ್ಕಳ ಬರವಣಿಗೆ ಸಹಾಯದಲ್ಲಿ ಮೂಡಿ ಬಂದ ಈ ಕೃತಿ ಯುದ್ಧೋತ್ತರ ಮಹಾಭಾರತದ ಕಥೆಯನ್ನು ಅಚ್ಚುಕಟ್ಟಾಗಿ ನಾಡಿನ ಜನತೆಗೆ ನೀಡಿದೆ. ದೇಶ ಆಳುವವರ ಸ್ವಾರ್ಥ, ಕುಟಿಲತನಕೆ ಇಡೀ ಜನಸಮುದಾಯವನ್ನು ಹೇಗೆ ಸಂಕಟಕ್ಕೆ ಸಿಲುಕಿಸುತ್ತದೆ ಎಂಬುದನ್ನು 'ಯುಗಸಂಧ್ಯಾ' ಬಹುಸುಂದರವಾಗಿ ನಿರೂಪಿಸುತ್ತದೆ.

ಕಾವ್ಯದಲ್ಲಿ ಹೊರಹೊಮ್ಮಿರುವ 'ಮಧ್ಯದ ಅಮಲು' 'ಯಾಧವರ ಅಂತ್ಯ' 'ದ್ವಾರಕಾನಗರ ಮುಳುಗವ ಪ್ರಸಂಗ' 'ಸ್ವರ್ಣಮಯ ಸ್ವಪ್ನ' 'ನಿದ್ರೆ' ಯಂತಹ ಹತ್ತು ಹಲವು ಪ್ರಸಂಗಗಳು ಯುದ್ಧದಲ್ಲಿ ನಡೆದ ದುರಂತದ ಬೆಳವಣಿಗೆಯನ್ನು ಬಿಂಬಿಸುತ್ತದೆ.

ಶ್ರೀಯುತರು ಕಾವ್ಯದಲ್ಲಿ ಮೂಡಿ ಬಂದ ಕೊಂದರೊಬ್ಬರನು ನಂದಿ ಹೋಗದ ಸತ್ಯ ನಡದೇ ತೀರಬೇಕು. ಅವರವರ ದೃಷ್ಟಿಗಳವರೆಗೆ ಎಂಬ ಹತ್ತಾರು ಸಾಲುಗಳ ರಸಗವಳವು ಮಹಾಕಾವ್ಯವನ್ನು ಓದಿದಾಗಲೇ ಅರ್ಥವಾಗಲಿದೆ.

ಇಂತಹ ಮಹಾನ್ ಸಾಹಿತಿಯನ್ನು ನಮ್ಮ ತಾಲ್ಲೂಕು ಪಡೆದಿರುವುದು ಮಹಾ ಪುಣ್ಯವಾಗಿದೆ. ಇವರ ಜನ್ಮ ಜಯಂತಿ ಮನೆಮನೆಯ ಹಬ್ಬವಾಗಿ ಪರಿವರ್ತನೆ ಅಥವಾ ಪರಿವರ್ತಿತವಾದಲ್ಲಿ ಶ್ರೇಷ್ಠ ಸಾಹಿತಿಗೆ ನಾಡಿನ ಜನತೆ ನೀಡುವ ಬಲುದೊಡ್ಡ ಗೌರವಾಗಲಿದೆ.

**ಪವಿತ್ರ ಕೆ.ಆರ್.**
c/o ಗ್ರಾಮಭಾರತಿ ವಿದ್ಯಾಸಂಸ್ಥೆ,
ಎಸ್.ಎಂ.ಲಿಂಗಪ್ಪ ಮಹಾವಿದ್ಯಾಲಯ
ಕೃಷ್ಣರಾಜಪೇಟೆ (2018–19 ತಂಡ)

# ಹೊಸಹೊಳಲು ಸುಜನಾರವರ ಚಿಲಿ–ಪಿಲಿ ಭಾಗ–2 ಮಕ್ಕಳ ಕವನ ಸಂಕಲನ : ಪರಿಚಯ

ಜೀವನದಲ್ಲಿ ಪ್ರತಿಕ್ಷಣವು ನಮಗೆ ಒಂದಲ್ಲಾ ಒಂದು ಅನುಭವವನ್ನು ನೀಡುತ್ತಿರುತ್ತದೆ. ನಮ್ಮ ಎಲ್ಲಾ ಅನುಭವಗಳನ್ನು ಬರೆಯುತ್ತಾ ಹೋದರೆ ಅದು ಕಾದಂಬರಿ ಅಥವಾ ಕಥೆ, ಜೀವನ ಚರಿತ್ರೆ ಆಗುತ್ತದೆ. ಆದರೆ ಎಲ್ಲಾ ಅನುಭವಗಳನ್ನು ಒಂದೆಡೆ ಕೇಂದ್ರಿಕರಿಸಿ ಅಂದರೆ ನಮ್ಮ ಪ್ರತ್ಯಕ್ಷ, ಪರೋಕ್ಷ, ಭೌತಿಕ, ಮಾನಸಿಕ, ಲೌಖಿಕ ಹಾಗೂ ಬಾಲ್ಯದ ಅನುಭವಗಳನ್ನು ರಸವತ್ತಾಗಿ ಸಂತೋಷ ಭರಿತವಾಗಿ ಓದುಗರ ಮನ ಮುಟ್ಟುವಂತೆ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತ ಚಿಕ್ಕ ಚಿಕ್ಕ ಸಾಲುಗಳಲ್ಲಿ ವಿವರಿಸುವುದು ಅಷ್ಟು ಸುಲಭದ ಕೆಲಸವಲ್ಲ ಮತ್ತು ಎಲ್ಲರಿಗೂ ಈ ರೀತಿ ಬರೆಯುವುದು ಸಾಧ್ಯವಾಗುವುದಿಲ್ಲ! ಈ ಅನುಭವಗಳನ್ನು ಹೇಗೆ ನಡೆಯಿತು? ಹಾಗೇ ಬರೆದರೆ ಇತಿಹಾಸ ಎನ್ನಿಸುವುದು, ವೈಜ್ಞಾನಿಕವಾಗಿ ವಿಶ್ಲೇಷಿಸಿದರೆ ಪಾಠವಾಗಿ ಬಿಡುತ್ತದೆ. ಇಂತಿಷ್ಟು ಚೌಕಟ್ಟಿನಲ್ಲಿ ಅಂದರೆ ಒಂದಿಷ್ಟು ಸಾಲುಗಳಲ್ಲಿ, ಪ್ರಾಸವನ್ನು ಬಳಸುತ್ತಾ ಪದಗಳ ಗುಚ್ಚದಿಂದ ಅಲಂಕಾರವನ್ನು ಮಾಡುತ್ತಾ ಒಂದು ರೀತಿಯಲ್ಲಿ ಬಣ್ಣಿಸಿದರೆ ಒಂದು ಸುಂದರ ಕವನವಾಗುವುದು ಹೆಮ್ಮೆಯ ವಿಷಯ ಅಂತಹ ಕವನಗಳನ್ನು ಬರೆದು ನಮಗೆ ಓದಲು ಅನುವು ಮಾಡಿಕೊಟ್ಟವರಿಗೆ ನನ್ನದೊಂದು ನಮನ.

ಸುಜನಾ ಅವರು ಬರೆದಿರುವ ಹಲವು ಪುಸ್ತಕಗಳಲ್ಲಿ ನನಗೆ ದೊರೆತದ್ದು ಚಿಲಿ ಪಿಲಿ ಭಾಗ–2 ಮಕ್ಕಳ ಕವನಗಳು. ನನಗೆ ಏಕೆ ಈ ಪುಸ್ತಕ ಆಯ್ಕೆ ಮಾಡಿಕೊಳ್ಳಬೇಕು? ಎಂದು ಅನಿಸಿತು ಎಂದರೆ ನನಗೆ ಮಕ್ಕಳ ಮುಗ್ಧ ಮನಸುಗಳ ಮಾತು. ಆಟ ಓಟಗಳನ್ನು ಆಡುತ್ತಾ ಯಾವುದೇ ಚಿಂತೆಗಳಿಲ್ಲದೇ, ನಿರಾತಂಕವಾಗಿ ಅವರದ್ದೇ ಲೋಕಗಳಲ್ಲಿ ಮುಳುಗಿರುತ್ತಾರೆ. ಅವರಿಗೆ ಯಾವ ವಿಷಯಗಳ ಬಗ್ಗೆಯು ಪೂರ್ಣವಾಗಿ ಏನು ತಿಳಿದಿರುವುದಿಲ್ಲ. ಅಮ್ಮನ್ನನ್ನು ಅದು ಏನು? ಇದು ಏನು? ಏಕೆ ಎಂದು ಹಲವು ಪ್ರಶ್ನೆಗಳನ್ನು ತುಂಬಿಕೊಂಡಿರುತ್ತಾರೆ.

ಅಂತಹ ಮುಗ್ಧ ಮನಸುಗಳ ಬಗ್ಗೆ ಈ ಪುಸ್ತಕದಲ್ಲಿ ಬರೆದಿರುವುದರಿಂದ ವಿಶೇಷ ಆಸಕ್ತಿ ಮೂಡಿ ಈ ಪುಸ್ತಕದ ಆಯ್ಕೆ ಮಾಡಿಕೊಂಡೆನು. ಇಲ್ಲಿ ಮೊದಲ ಕವನವೇ ನನ್ನನ್ನು ಅತೀವವಾಗಿ ಆಕರ್ಷಿಸಿತು ಮತ್ತು ಖುಷಿ ನೀಡಿತು. ಅ ಆ ಉ ಊ

ಹೇಳುವೆನಮ್ಮಾ, ಬರೆಯಲು ಮಾತ್ರ ಬಾರದಮ್ಮ.. ಅಪ್ಪನ ಕೇಳಿ ಅಕ್ಷರ ಕಲಿಯುವೆ, ಅಕ್ಷರ ಕಲಿತು ನಿನಗೂ ಕಲಿಸುವೆ.

ಏಕೆಂದರೆ ಈ ಕವನದಲ್ಲಿ ಪುಟ್ಟ ಮಗುವೊಂದು ಅಮ್ಮನಿಗೆ ತನ್ನ ತೊದಲು ನುಡಿಗಳಿಂದ ಓದುವ ಬಗ್ಗೆ ತನಗಿರುವ ಮತುಗಳನ್ನು ಮುಕ್ತವಾಗಿ ಹೇಳಿಕೊಡುವಂತಿದೆ ಮತ್ತು ಅಪ್ಪನಿಗೆ ಕೇಳಿ ನಾನು ಅಕ್ಷರವನ್ನು ಕಲಿಯುವೆನಮ್ಮಾ ಎಂದು ಹೇಳುತ್ತಿದೆ. ಮಕ್ಕಳಿಗೆ ಎಲ್ಲಾ ವಿಷಯಗಳಲ್ಲಿಯೂ ಆಸಕ್ತಿ ಇರುತ್ತದೆ. ನಾವು ಆದಷ್ಟು ಪೂರಕವಾಗಿ ಬೆಳೆಸುವ ಕಾರ್ಯವನ್ನು ಮಾಡಬೇಕು ಅದು ನಮ್ಮ ಜವಬ್ದಾರಿ ಎನ್ನಬಹುದು. ಇನ್ನು ಮುಂದೆ ಓದುತ್ತಾ ಮಕ್ಕಳಿಗೆ ಸಾಮಾನ್ಯವಾಗಿ ಕತ್ತಲೆ ಎಂದರೆ ಮಕ್ಕಳಲ್ಲಿ ಭಯ ಇರುವುದು ಸರ್ವೇ ಸಾಮಾನ್ಯ. ಮಕ್ಕಳಲ್ಲಿ ಕತ್ತಲೆ ಅಂದರೆ ಅಮ್ಮನಿಂದ ಸ್ವಲ್ಪ ಸಮಯವು ದೂರ ಇರಲು ಹೆದರಿಕೊಳ್ಳುತ್ತಾರೆ. ಅಂತಹ ಪುಟ್ಟ ಮಕ್ಕಳಲ್ಲಿ ಆಗುವ ಭಯದ ಬಗ್ಗೆ ಅನುಭವವನ್ನು ಆರದ ಹಾಗೆ ಎಣ್ಣೆಯ ಎರೆದರೆ ಕಿಟ್ಟವ ಕೆಡುವುತ ಹತ್ತಿರವಿದ್ದರೆ ಜಗುಲಿಯ ಚುಕ್ಕಿಯ ಮನೆಯಸೊಡರು. "ಆರದ ದೀಪವ ಹಚ್ಚಿದರೆ"? ಎನ್ನುವ ಕವನದಲ್ಲಿ ತಿಳಿಸಿದ್ದಾರೆ.

ಮಕ್ಕಳಲ್ಲಿ ಹಲವು ವಿಷಯಗಳ ಬಗ್ಗೆ ಸಮಾನ್ಯವಾಗಿ ಕುತೂಹಲ ಎಂಬುದು ಹೆಚ್ಚಾಗಿಯೇ ಇರುತ್ತದೆ. ಅಂತಹ  ಹಲವು ವಿಷಯಗಳೆಂದರೆ ದೇವರು, ದೆವ್ವ, ಹಗಲು, ರಾತ್ರಿ, ಕಾಡು, ಚಂದ್ರನ ಬಗ್ಗೆ ತಿಳಿದುಕೊಳ್ಳಲು ಉತ್ಸುಕರಾಗಿರುತ್ತಾರೆ. ಅದರಲ್ಲಿ ಒಂದು ವಿಷಯ ಎಂದರೆ ದೇವರು. ಇಲ್ಲಿ ಮಕ್ಕಳಿಗೆ ದೇವರು ಎಂದರೆ ಯಾರು? ಅವನು ನನ್ನ ಜೊತೆ ಆಡಲು ಬರುತ್ತಾನೆಯೆ? ನಾವು ದೇವರಿಗೆ ಏಕೆ ಕೈ ಮುಗಿಯಬೇಕು? ಅವನು ಏಕೆ ಕಣ್ಣಿಗೆ ಕಾಣುವುದಿಲ್ಲ? ಏಕೆ ಏನ್ನನ್ನು ತಿನ್ನುವುದಿಲ್ಲ? ನಾವು ಏನೇ ಮಾತನಾಡಿದರೂ, ಕೇಳಿದರೂ ಯಾವ ಮಾತಿಗೂ ಪ್ರತ್ಯುತ್ತರ ನೀಡುವುದಿಲ್ಲ? ಹೀಗೆ ಹತ್ತು ಹಲವು ಪ್ರಶ್ನೆಗಳನ್ನು ಅಮ್ಮನಲ್ಲಿ ಕೇಳುತ್ತಿರುತ್ತಾರೆ. ಅಮ್ಮನಿಗೆ ಅವರ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಉತ್ತರಿಸಲು ಸಾಧ್ಯವಾಗದೆ ಅವಳು ಇಂತಹ ಚಿಕ್ ಚಿಕ್ಕ ವಿಷಯಗಳನ್ನು ಸಹ ಸುಜನಾ ಅವರು ಮಕ್ಕಳ ಮುಗ್ಧ ಮನಸನ್ನು ಅರ್ಥಮಾಡಿಕೊಂಡು ಕವನಗಳಲ್ಲಿ ಚಿಕ್ಕದಾಗಿ, ಚೊಕ್ಕದಾಗಿ ತಿಳಿಸಿದ್ದಾರೆ.

ಚಿಟ್ಟೆಯಾಗುವೆಯಮ್ಮ ಈ ಕವನದಲ್ಲಿ ಚಿಟ್ಟೆ ಎಂಬುದು ಒಂದು ಸಾಮಾನ್ಯ ಕ್ರಿಮಿಯಾಗಿದ್ದರೂ ದೊಡ್ಡವರಿಗೆ ಇದರಲ್ಲಿ ಏನೂ ವಿಶೇಷ ಅನ್ನಿಸದಿರಬಹುದು. ಅದೆ ಮಕ್ಕಳಿಗೆ ಅದು ಹಲವು ಬಣ್ಣಗಳಿಂದ ಕೂಡಿರುವುದರಿಂದ ಅದು ತುಂಬ ಆಕರ್ಷಣಿಯಿಂದ ಕಾಣುತ್ತದೆ. ಆದ್ದರಿಂದ ಅವರು ಅದನ್ನು ಹಿಡಿಯುವ ಪ್ರಯತ್ನವನ್ನು ಮಾಡುತ್ತಾರೆ. ಅದನ್ನು ಮುಟ್ಟಿದರೆ ಅವರಿಗೆ ಆಗುವ ಸಂತಸ ಅಪಾರ. ಇಂತಹ ಚಿಕ್ಕ ವಿಷಯವೇ

ಆದರೂ ಈ ಕವನದಲ್ಲಿ ಕವಿ ತುಂಬ ಸೊಗಾಗಿ, ಓದುಗರಿಗೆ ಮನಮುದ ನೀಡುವಂತೆ ಚಿತ್ರಿಸಿದ್ದಾರೆ. ಮಕ್ಕಳಿಗೆ ಚಂದ್ರ ಎಂಬುದು ಒಂದು ರೀತಿಯ ಆಟಿಕೆ ಇದ್ದಂತೆ. ಅವನನ್ನು ಪ್ರೀತಿಯಿಂದ ಚಂದಮಾಮ ಎಂದೇ ಅನ್ನುವರು. ತಾಯಂದಿರು ಮಕ್ಕಳಿಗೆ ಊಟ ಮಾಡಿಸುವಾಗ ಅವನನ್ನು ತೋರಿಸಿಯೇ ಊಟ ಮಾಡಿಸುತ್ತಾರೆ. ಅಷ್ಟು ಮಕ್ಕಳಿಗೆ ಹತ್ತಿರವಾದವನು ಈ ಚಂದ್ರ ಇಂತಹ ಚಂದ್ರನ ಬಗ್ಗೆ ಸುಜನಾ ಅವರು ಇಡ್ಲಿ ಎಂದು ಕರೆದಿದ್ದಾರೆ.

ಇಂತಹ ಮುದ ನೀಡುವ ಕವನ ಸಂಕಲನಗಳು ಎಲ್ಲರಿಗೂ ಖುಷಿ ಕೊಡುವಂತಹದು. ಎಂತಹ ಬೇಸರ ಇದ್ದರೂ ಸಹ ಈ ಪುಸ್ತಕವನ್ನು ಓದಿದವರೂ ಎಲ್ಲವನ್ನೂ ಮರೆತು ಒಂದು ಕ್ಷಣ ತಮ್ಮ-ತಮ್ಮ ಬಾಲ್ಯದ ದಿನಗಳ ಬಗ್ಗೆ ಮೆಲುಕು ಹಾಕುವುದರಲ್ಲಿ ಸಂದೇಹವೇ ಇಲ್ಲ. ಎಲ್ಲರ ಜೀವನದಲ್ಲಿಯೂ ಬಾಲ್ಯಾವಸ್ಥೆ ಎಂಬುದು ಒಂದು ಸುಂದರ ಅನುಭವಗಳ ಸಾಲು. ಹೆಚ್ಚು ಖುಷಿಯ ದಿನಗಳವು. ಎಲ್ಲರೂ ಮತ್ತೆ ಚಿಕ್ಕವರಾಗಬೇಕು. ಆ ಬಾಲ್ಯ ಜೀವನವು ಮತ್ತೆ ಮರುಕಳಿಸಲಿ ಎಂದು ಈ ಪುಸ್ತಕ ಓದಿದವರಿಗೆ ಅನ್ನಿಸುವುದರಲ್ಲಿ ಎರಡು ಮಾತಿಲ್ಲ.

ಇನ್ನು ನನಗೆ ಈ ಪುಸ್ತಕ ಓದಿದಾಗ ಅನ್ನಿಸಿದ್ದು ಏನೆಂದರೆ ಈ ಪುಸ್ತಕದಲ್ಲಿರುವ ಕವನಗಳನ್ನು ಪ್ರಾಥಮಿಕ ಶಾಲಾ ಪಠ್ಯಗಳಲ್ಲಿ, ಪೂರಕ ಸಾಹಿತ್ಯ ವಿಭಾಗದಲ್ಲಿ ಮಕ್ಕಳ ಹೆಚ್ಚಿನ ಕಲಿಕೆಗೂ ಬಳಸಬಹುದಾಗಿದೆ. ಮಕ್ಕಳ ಕಲಿಕೆಗೆ ಸಹಜವಾಗಿ ಈ ಪದ್ಯಗಳು ರಚನೆಯಾಗಿರುವುದರಿಂದ ಈ ಪದ್ಯಗಳು ಮಕ್ಕಳಿಗೆ ಮುಟ್ಟಿದರೆ ಕವಿಯ ಕಾವ್ಯಕ್ಕೆ ಸಾರ್ಥಕತೆ ದೊರಕುತ್ತದೆ. ಈ ನಿಟ್ಟಿನಲ್ಲಿ ಒಂದೆರಡು ಕವನಗಳನ್ನು ಚಿಲಿಪಿಲಿ ಕವನ ಸಂಕಲನದಲ್ಲಿ ಗಮನಿಸಬಹುದು.

ಅಟ್ಟಕೆ ಮೆಟ್ಟಿಲು ಇರುವಂತೆ
ಬೆಟ್ಟಕೂ ಮೆಟ್ಟಿಲು ಇರುವುದೇ ಅಮ್ಮಾ?
ಚಾಮುಂಡಿಯ ಬೆಟ್ಟಕೆ ಬಸ್ಸುಂಟಂತೆ
ಸ್ವರ್ಗಕ್ಕು ಬಸ್ಸುಗಳುಂಟೇನು?

ಏನಾದರೂ ಭಾರವ ಹೊರಿಸಮ್ಮ
ಬ್ಯಾಗಿನ ಭಾರವು ಸಾಕಮ್ಮ
ಹೊತ್ತು ಶಾಲೆಗೆ ಓಡಲಾರೆ
ಹೊತ್ತು ಹೊತ್ತು ಬಾಗಿತೆ ಕತ್ತು!

ಚಳಿಯೇ ಆಗದೆ ಗೊಮ್ಮಟಗೆ!
ಅಮ್ಮ, ಮಳೆಯಲಿ ನೆಗಡಿಯು ಬರದೆ?
ಉರಿಬಿಸಿಲಿಗೆ ಮೈ ಕೈ ಸುಡದೆ?
ಅವರಮ್ಮನಿಗಿದು ತಿಳಿದಿರದೆ!

ಈ ಕೃತಿಯಲ್ಲಿ ಸುಜನಾ ಅವರಿಗಿರುವ ಮಕ್ಕಳಿನಂಥ ಮುಗ್ಧ ಮನಸ್ಸು ಎದ್ದು ಕಾಣುತ್ತದೆ. ಯಾವುದೇ ವಿಷಯಗಳ ಬಗ್ಗೆ ಸುಮ್ಮನೆ ಕವನವನ್ನು ರಚಿಸುವುದು ಸುಲಭದ ಮಾತಲ್ಲ. ಇಷ್ಟು ಸರಳತೆಯಲ್ಲಿ ಯಾವುದೇ ರೀತಿಯಾದ ಓದುಗರಿಗೆ ಕಷ್ಟವೆನಿಸದೇ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತಹ ಕವನ ರಚಿಸಿವುದು ಒಂದು ಕಲೆ ಎನ್ನಬಹುದು. ಅದರಲ್ಲೂ ಮಕ್ಕಳ ಮುಗ್ಧತೆಯ ಕುರಿತು ಬರೆದಿರುವುದು ಮೆಚ್ಚುವಂತಹದು. ಇದರಿಂದ ಸುಜನಾ ಅವರಲ್ಲಿ ಮಕ್ಕಳ ಬಗ್ಗೆ ಇದ್ದ ಒಲವು ಎಂಥಹದೆಂದು ತೋರುತ್ತದೆ.

– **ಎಸ್.ಎನ್.ಪೂಜಾ,**
ಬಿ.ಎಡ್,ಪ್ರಶಿಕ್ಷಣಾರ್ಥಿ
ಎಸ್.ಎಂ.ಲಿಂಗಪ್ಪ ಮಹಾವಿದ್ಯಾಲಯ
ಕೃಷ್ಣರಾಜಪೇಟೆ.

(2018 ಏಪ್ರಿಲ್ ತಿಂಗಳಂದು ಡಾ.ಸುಜನಾ ಜನ್ಮದಿನ ಆಚರಣೆಯಲ್ಲಿ ಮಂಡಿಸಿದ ಪ್ರಬಂಧ. ಸ್ಥಳ ಎಸ್.ಎಂ. ಲಿಂಗಪ್ಪ ಬಿ.ಎಡ್ ಕಾಲೇಜು, ಕೃಷ್ಣರಾಜಪೇಟೆ)

**"ಬುಗ್ಗೆಯ ನೀರಿಗೆ ಬುಗ್ಗೆಯೇ ತಾಯಿ**
**ಸಗ್ಗದ ಬೇರಿಗೆ ಭೂಮಿಯೇ ಬಾಯಿ"**
**– ಡಾ. ಸುಜನಾ**

## ಚಿಲಿ–ಪಿಲಿ ಮಕ್ಕಳ ಕವನ ಸಂಕಲನಗಳು – ಸುಜನಾ

ಯುಗಸಂಧ್ಯಾ ಮಹಾಕಾವ್ಯ ಬರೆದ ಕವಿ ಸುಜನಾ ಅವರು ಮಕ್ಕಳ ಸಾಹಿತ್ಯದ ಬಗ್ಗೆ ಚಿಲಿ ಪಿಲಿ ಕೃತಿ ನಿಜಕ್ಕೂ ನಮಗೆ ಆನಂದ ನೀಡುತ್ತದೆ. ಆದ್ದರಿಂದ ಚಿಲಿ–ಪಿಲಿ ಭಾಗ 2–3ರಲ್ಲಿ ಆಯ್ದು ಕೆಲವು ಪದ್ಯಗಳನ್ನು ಸಹೃದಯನಾಗಿ ಓದಿಕೊಂಡು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದೇನೆ. ಮಗು ಸದ್ಗುಣ ಸಂಪನ್ನನಾಗಲು, ಇಟ್ಟುಕೊಂಡ ಗುರಿ ತಲುಪಲು, ಲವಲವಿಕೆಯಿಂದ ಜ್ಞಾನದ ಮಹಾಮನೆ ಸೇರಲು ಇಲ್ಲಿನ ಕವನಗಳು ಮಕ್ಕಳಿಗೆ ದಾರಿ ದೀಪವಾಗಿವೆ ಎಂದು ಕವಿ ಹೇಳಿದ್ದಾರೆ. ಆದ್ದರಿಂದ ಅವರ ಕವನಗಳ ಅಂತರಂಗವೂ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಸಹಕಾರಿಯಾಗುತ್ತವೆ. ಕವನಗಳನ್ನು ಓದುತ್ತಾ ಹೋದಂತೆ ಪ್ರಕೃತಿ ವರ್ಣನೆ, ಪ್ರಶ್ನೋತ್ತರ ಮಾಲಿಕೆ, ಸಂಭಾಷಣಾ ಶೈಲಿ, ಕಾವ್ಯದ ವಸ್ತು ವಿಷಯ ಮೂರ್ತ, ಅಮೂರ್ತ ಕಲ್ಪನೆಗಳನ್ನು ವಾಸ್ತವದ ನೆಲಗಟ್ಟಿಗೆ ತಂದು ಕಾವ್ಯವಾಗಿಸುವ ಪರಿ 'ಚಿಲಿ ಪಿಲಿ' ಕವನ ಸಂಕಲನದಲ್ಲಿ ಸಿಗುತ್ತದೆ.

**ಚಿಲಿ–ಪಿಲಿ ಭಾಗ –2 ಮಕ್ಕಳ ಕವನಗಳು**

**ಕೊಳೆ ಧೂಳಾಗಲು ಬಟ್ಟೆಗಳ**
**ಎಸದೇ ಬಿಡುವೆಯ ಹೇಳಮ್ಮ**
**ಮೈಲಿಗೆಯಾದರೆ ಪಾತ್ರೆಗಳ**
**ಬೆಳಗುವುದಿಲ್ಲವೆ ನನ್ನಮ್ಮ? ॥**

ಮಕ್ಕಳ ಬಾಲ್ಯದ ಸೊಗಸಿಗೆ, ಸಹಜ ಕ್ರಿಯೆಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ. ಯಾವುದು ಕೊಳೆ, ಯಾವುದು ಬೇಕು, ಯಾವುದು ಬೇಡ? ಇಂತಹ ಪ್ರಶ್ನೆಗಳಿಗೆ ಮಗುವಿನಲ್ಲಿ ಉತ್ತರವಿಲ್ಲ. ಇದು ತಾನೆ ಮಗುತನ! ಯಾವುದೆ ಬೇಧ–ಭಾವಗಳಿಲ್ಲದ ಮಗುವಿನ ಮನಸ್ಸು ಸುಂದರವಾಗಿ ಕಾಣುತ್ತದೆ.

**ತಿಂಡಿಯ ಕೊಡುವೆ ಗುಬ್ಬಿಮರಿ**
**ನನಗೂ ಹಾರಲು ಕಲಿಸು ಮರಿ ॥**

ಕಲಿಕೆ, ಕುತೂಹಲ, ಆಸಕ್ತಿ ಮಕ್ಕಳಿಗೆ ಬಹುತೇಕ ಪ್ರಕೃತಿಯ ವರದಾನ. ಪ್ರಕೃತಿ ಮತ್ತು ಪರಿಸರ ನಮಗೆ ನೀಡುವ ಸಂದರ್ಭಗಳು ನಮ್ಮ ಕಲಿಕೆಯ ಒತ್ತಾಸೆಯಾಗಿ ನಿಲ್ಲುತ್ತವೆ. ಪ್ರಾಣಿ, ಪಕ್ಷಿ ಪ್ರಿಯರಾದ ಮಕ್ಕಳು ಪುಟ್ಟದಾಗಿ ಇರುವ ಗುಬ್ಬಚ್ಚಿ ಜೊತೆ ಮಾತಾಡುವುದು ಮುಗ್ಧತೆಯಾಗಿ ಕಾಣುತ್ತದೆ.

**ಸೀತಾ ರಾಮರು ಕಾಡೊಳಗಿದ್ದರೆ**

**ಸೊಳ್ಳೆಯ ಮಧ್ಯದಿ ಹೇಗವರಿದ್ದರೆ**
**ಸೊಳ್ಳೆಯ ಪರದೆಯು ಇತ್ತೇನೆ?**
**ಹಾಸಿಗೆ ದಿಂಬನು ಕೊಂಡೊಯ್ದಿದ್ದರೆ?**

ಆರೋಗ್ಯ ಸುರಕ್ಷತೆಯ ಕವಚ.. ಈ ಪದ್ಯಗಳೆಂದೆ ಹೇಳಬೇಕು. ರಾಮ ಸೀತೆ ಬಗ್ಗೆ ಇಷ್ಟೆಲ್ಲ ಕಥೆ ಹೇಳುವ ನಾವು ಮನೆಯ ಪರಿಸರದಲ್ಲಿ ಏನೆಲ್ಲ ವ್ಯವಸ್ಥೆ ಮಾಡಿಕೊಂಡ ಬಗ್ಗೆ ಕಾಳಜಿ ವಹಿಸುತ್ತೇವೆ. ಈ ಬಗ್ಗೆ ಮಾತನಾಡುತ್ತೇವೆ. ಆದರೆ ರಾಮಾಯಣದಲ್ಲಿ ಬರುವ ರಾಮಸೀತೆಯರ ಸುಕ್ಷತೆಯ ಬಗ್ಗೆ ನಾವು ಎಲ್ಲೂ ಚಕಾರ ಎತ್ತುವುದಿಲ್ಲ. ಏಕೆಂದರೆ ಅವರು ದೈವ ಸಂಭೋತರೆಂಬಂತೆ ಕಾಣುತ್ತೇವೆ. ಕಥೆ ಹೇಳುವಾಗ ಇಂತಹ ವೈಜ್ಞಾನಿಕವಾದ ವಿಚಾರಗಳ ಬಗ್ಗೆ ಪ್ರಶ್ನೆ ಎತ್ತಿರುವುದು ಈ ಪದ್ಯದ ವಿಶೇಷವಾಗಿದೆ.

**ನಾನೂ ಪೈಲೆಟ್ ಆಗುವೆನೆ**
**ಮೋಡದ ಮೇಗಡೆ ಹಾರುವೆನೆ**
**ಹಕ್ಕಿಗಳೊಡನೆ ಆಡುವನೆ**
**ವಿಮಾನವೊಂದನು ಕೊಡಿಸಿಕೊಡೆ ॥**

ಹಾರುವ ಹಕ್ಕಿಯ ನೋಡಲು ಚಂದ.. ಹಕ್ಕಿಯ ಹಾಗೆ ಹಾರಲು ಚಂದ.. ಎಂಬ ಮಗುವಿನ ಮನಸನ್ನು ಹೀಗೆ ಎಂದು ಹೇಳಲಾಗದು. ಅವರ ಆಲೋಚನೆಗಳಿಗೆ ಯಾವುದೇ ಇತಿ ಮಿತಿ ಇರುವುದಿಲ್ಲ. ಆಸೆಗಳಿಗೆ ಕಡಿವಾಣ ಹಾಕಿ ಕಲಿಕೆ ಜೊತೆ ಕ್ರಮವಾಗಿ ಎಲ್ಲವನ್ನು ನೀಡಿದಾಗ ಸಾಧನೆ ಎಂಬುದು ಹೆಮ್ಮರವಾಗಿ ಬೆಳೆಯಲು ಸಾಧ್ಯವಲ್ಲವೇ? ವಿಮಾನದ ಪೈಲೆಟ್ ಆಗುವ ಆಸೆ ಈಡೇರಬಹುದಲ್ಲವೇ..

**ಶಾಲೆಯು ಕಂಬದ ತುದಿಯಲ್ಲಿ**
**ಮಾಸ್ತರು ಬಾವುಟ ಹಾರಿಸಲಿ**
**ಕೆಂಪುಕೋಟೆಯ ಕಂಬಕ್ಕೆ**
**ಪ್ರಧಾನಿ ಬಾವುಟ ಏರಿಸಲಿ**

ಭಾರತ ದೇಶದ ಸ್ವಾತಂತ್ರ್ಯ ಮಹೋತ್ಸವ ಆಚರಿಸುವಾಗ ಸ್ವಾತಂತ್ರ್ಯದ ಹೋರಾಟದ ಬಗ್ಗೆ ಮಾಹಿತಿ ನೀಡುತ್ತೇವೆ. ದೇಶದ ಪರವಾಗಿ ಪ್ರಧಾನಮಂತ್ರಿಗಳು ರಾಷ್ಟ್ರಧ್ವಜ ಹಾರಿಸಿದರೆ ಶಾಲಾ ಮಾಸ್ತರು ಶಾಲೆಯಲ್ಲಿ ಹಾರಿಸಲೆಂಬ ಮಗುವಿನ ಹಂಬಲಕ್ಕೇ ನಮ್ಮದೊಂದು ಸೆಲ್ಯೂಟ್... ಹೀಗೆ ಮಕ್ಕಳ ವಿಚಾರ ಶಕ್ತಿಯ ಉತ್ತೇಜನಕ್ಕೇ ಚಿಲಿ–ಪಿಲಿ ಕವನಗಳು ಒತ್ತೊಟ್ಟಾಗಿ ನಿಲ್ಲುತ್ತವೆ. ಓದಿಕೊಳ್ಳುತ್ತಾ.. ಕಾವ್ಯದ ಒಳನೋಟಕ್ಕೇ ಹೊಸ ಕಾವ್ಯಸ್ಪರ್ಶ ನೀಡುತ್ತವೆ.

**ಮಕ್ಕಳ ಮನಸಿನ ಸ್ವರ್ಗದಲಿ**
**ದೇವತೆಗಳು ನಲಿದಾಡುವರು**
**ಚಿಣ್ಣರ ಹೃದಯದ ಗಂಗೆಯಲಿ**
**ಮಿಂದವರೆಲ್ಲರು–ಸುಂದರರು ॥**

ಧರಣಿಯ ಮೇಲೆ ಯಾವುದು ಒಳ್ಳೆಯದೆಂದು ಪ್ರಸ್ತುತ ಯಾರನ್ನಾದರೂ ಕೇಳಿದರೆ ಯಾರು ಸಮರ್ಪಕ ಉತ್ತರ ಹೇಳಲಾರರು! ಓ ನನ್ನ ಚೇತನ ಆಗು ನೀ ಅನಿಕೇತನ ಎಂಬಂತೆ ಹುಟ್ಟಿದ ಮಕ್ಕಳಲ್ಲಿ ಬೆಳೆಯುವ ಮಕ್ಕಳ ಸಿರಿತನದಲ್ಲಿ ಒಳ್ಳೆಯದನ್ನು ಕಾಣಬಹುದು. ಸನ್ಮಾರ್ಗದ ಸರಿದಾರಿ ಖಂಡಿತ ಮನಸಿಲ್ಲಿ ನಿರ್ಮಾಣವಾಗಬೇಕು. ಈ ನಿರ್ಮಾಣ ಪ್ರಕ್ರಿಯೆ ಮಕ್ಕಳಲ್ಲಿ ಇರಲು ಸಾಧ್ಯ. ಓ ಬಿಡ್ಲಾ ಮಕ್ಕಳಲ್ವಾ.. ಎನ್ನುವರು ನಮ್ಮೊಂದಿಗೆ ತುಂಬ ಜನ ಇದ್ದಾರೆ. ವಿಪರ್ಯಾಸ ಎಂದರೆ ಅಂದವರಲ್ಲಿ ಅವರ ಮಗುತನ/ಬಾಲ್ಯ ಇರಲಿಲ್ಲವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸುಂದರ ಬದುಕಿಗೆ ಚಿಣ್ಣರ ಹೃದಯ ಸಾಂತ್ವನ ನೀಡುತ್ತದೆ. ಮಕ್ಕಳನ್ನು ಮಕ್ಕಳಂತೆ ಕಂಡು ಮಾರ್ಗದರ್ಶನ ಮಾಡಿದಾಗ..!

**ಸೋಪಿನ ನೊರೆ ಗುಳ್ಳೆಯ**
**ಊದುವೆನಮ್ಮಾ ಗಾಳಿಯಲಿಸಂತೆ**
**ಬಲೂನಿಗು ತುಂಬ ಹಗುರ**
**ಗುಳ್ಳೆ ಬಲೂನಿಗೆ ಕಾಸೇ ಇಲ್ಲ !**

ಮನೆಯೇ ಮೊದಲ ಪಾಠಶಾಲೆ ಆದರೂ ಕೂಡ ಮನೆಯಲ್ಲಿ ನಡೆಯುವ ರಸಾಯನಿಕ ಶಾಸ್ತ್ರಕ್ಕೆ (ಕೆಮಿಸ್ತ್ರೀ) ಬರವಿಲ್ಲ. ಪ್ರತಿಯೊಬ್ಬರು ಅಡುಗೆ ಮನೆಯಲ್ಲಿ ಆಹಾರ ತಯಾರಿಸುವ ಪ್ರಕ್ರಿಯೆ ಮತ್ತು ಬಟ್ಟೆ ತೊಳೆಯುವ ಇನ್ನು ಇತರ ಸಂಧರ್ಭಗಳನ್ನು ಗಮನಿಸಿದಾಗ ಮಗುವಿಗೆ ಸಹಜ ಕಲಿಕೆಯನ್ನು ಪ್ರಶ್ನೋತ್ತರ ಮಾಲಿಕೆಯಡಿ ಕಲಿಸಲು ಸುಲಭ ಸಾಧ್ಯವಿದೆ. ಇಂತಹ ಸಾಧ್ಯತೆಯ ಪ್ರಶ್ನೆ–ಉತ್ತರವನ್ನು ಈ ಕವನ ನಿರೀಕ್ಷಿಸುತ್ತದೆ.

**ಮಮ್ಮಿ ಎಂದರೆ ಏನಮ್ಮ?**
**ಯಾರೇ ಮಕ್ಕಳ ನೋಡಿದರು**
**ಮಮ್ಮಿ ಡ್ಯಾಡಿ ಎನ್ನುವರೆ !**
**ಏಕಮ್ಮ ಹೀಗೆಲ್ಲರು ನುಡಿಯುವರು !**

ಕನ್ನಡ ನೆಲ ಜಲ ಸಂಸ್ಕೃತಿಯೊಳಗೆ ಅಮ್ಮ–ಅಪ್ಪ ಸಂಸ್ಕೃತಿ ಹೋಗಿ ಮಮ್ಮಿ ಡ್ಯಾಡಿ ಸಂಸ್ಕೃತಿಯ ದಾಳಿಯಾಗಿರುವುದನ್ನು ಕಂಡು ವಿಷಾಧ ತೋಡಕೊಂಡ ಸಂದರ್ಭ ಈ ಪದ್ಯವಾಗಿದೆ.

**ಅಪ್ಪನ ಬೆನ್ನಲಿ ಕೂಸುಮರಿ**
**ಮುಗಿಲಿನ ಬೆನ್ನಲಿ ಮಿಂಚುಮರಿ**
**ಅಮ್ಮನ ಕಂಕುಳ ಪಾಪುಮರಿ**
**ಮೋಡದ ಕಂಕುಳ ಬಿಲ್ಲುಮರಿ ॥**

ಮೊಬೈಲ್ಲುಗಳ ಮಹಾಯುಗದಲ್ಲಿ ಈ ಕೂಸುಮರಿಗಳೂ ಕೂಡ ಮೊಬೈಲು ಮರಿಗಳಾಗಿವೆ. ಪ್ರಕೃತಿ ಕೊಟ್ಟ ದೈವದತ್ತವಾದ ಅವಕಾಶಗಳಿಂದ ದೂರ ಸರಿಯುತ್ತಿರುವ ಮಾನವ ಸಮುದಾಯ ತನ್ನ ಮಣ್ಣಿನ ಗುಣವನ್ನು ಕಳೆದುಕೊಂಡು ಯಂತ್ರ ಯುಗದೊಂದಿಗೆ ಸಾಗಿ ಖಿನ್ನತೆಯ ದಾಸನಾಗುತ್ತಿರುವುದು, ಮುಂದಿನ ಭವಿಷ್ಯಕೆ ಮಾರಕವೆಂಬುದು ಈ ಪದ್ಯದಲ್ಲಿ ಅಡಕವಾಗಿದೆ. ಮಾನವ ಜೀವನದಲ್ಲಿ ಸಹಜತೆ ಕಳಕೊಂಡರೆ ಆತ ಯಾವತ್ತೂ ಬುದ್ಧಿಮಾಂದ್ಯನೆ ಆಗಿರುತ್ತಾನೆ. ಕೂಸುಮರಿ–ಮಿಂಚುಮರಿ–ಪಾಪುಮರಿ–ಬಿಲ್ಲುಮರಿ ಈಗ ಹಲ್ಲು ಮುರಿದುಕೊಂಡ ಮೊಬೈಲ್ಲು ಮರಿಯಾಗುತ್ತಿದ್ದಾನೆ. ಇದನ್ನು ನಾವು ಮೊದಲ್ಗೊಂಡು ತಪ್ಪಿಸಿ ನೆಲಜಲ ಪ್ರೀತಿಯ ಉಕ್ಕಿಸಬೇಕಾಗಿದೆ.

**ನಿದ್ದೆಯು ಬಂದರೆ ಹಾಸಿಗೆ ಬೇಕೆ?**
**ನಿನ್ನಯ ತೊಡೆಯೆ ಸಾಕಮ್ಮ**
**ಓದಲು ಕಲಿಯಲು ಶಾಲೆಯು ಏಕೆ?**
**ನಿನ್ನಯ ಕತೆಯೆ ಸಾಕಮ್ಮ**

ಮಗು ಮತ್ತು ತಾಯಿಯ ಭಾಂಧವ್ಯಕ್ಕೆ, ವಾತ್ಸಲ್ಯಕ್ಕೆ, ಸ್ನೇಹ ಪ್ರೀತಿ ವಿಶ್ವಾಸಕ್ಕೆ, ಅಂತರಂಗದ ತಾಯ್ತನದ ಧ್ವನಿಗೆ ತಾಯಿಗೆ ತಾಯಿಯೆ ಸರಿಸಾಟಿ. ಮಗುವಿಗೆ ನಿದ್ರೆ ಬಂದರೆ ತಾಯಿಯ ತೊಡೆಗಿಂತ ಬೇರೆ ಹಾಸಿಗೆ ಬೇಕೆ?

ಬೇಡ, ಹೆತ್ತ–ಹೊತ್ತ–ಪಾಲನೆ ಪೋಷಣೆಗೈದ ಅಮ್ಮನ ತೊಡೆಯೇ ನನ್ನ ನಿದ್ರೆಗೆ ಶ್ರೇಷ್ಠ ಹಾಸಿಗೆ ಎಂಬ ಮಗುವಿನ ಪ್ರಶ್ನೆಯ ನಿಲುವು ನಿಜಕ್ಕೂ ತಾಯಿಯ ಮಹತ್ವವನ್ನು ಗೌರವಿಸುವುದರ ಜೊತೆಗೆ ಪ್ರಸ್ತುತಕ್ಕೇ ಸ್ಫೂರ್ತಿಯೂ ಹೌದು.

**ಎತ್ತರ ಬೆಳೆಯುವ ತೆಂಗಿನಮರದ**
**ಮೇಲಕೆ ನೀರು ಹೋಗುವುದೆಂತೆ?**

ಈ ಕವನದ ಸಾಲು ಮಗುವಿನ ಪ್ರಶ್ನೆ ಮಾಡುವ ಮನೋಭಾವನೆಗೆ ಕೈಗನ್ನಡಿಯಾಗಿದೆ. ಎಲ್ಲವನ್ನೂ ತರಗತಿ ಕೋಣೆಯಲ್ಲೇ ಕಲಿಸಲಾಗದು. ಪರಿಸರದಲ್ಲೂ, ಪ್ರಕೃತಿಯಲ್ಲೂ ಕಲಿಸಲು ಸಾಕಷ್ಟು ಅವಕಾಶಗಳಿವೆ. ಅಕರ ಜ್ಞಾನದ ಜೊತೆ ಗಣಿತ, ವಿಜ್ಞಾನ ವೈಜ್ಞಾನಿಕ

ಮನೋಭಾವನೆಗಳ ಕಲಿಕೆ ಯಾರು ಅವರ ವಲಯದಲ್ಲಿ ಅವಕಾಶ ಕಲ್ಪಿಸುತ್ತಾರೋ ಆತ ಅಥವಾ ಆ ತಾಯಿ ಜಗತ್ತಿನ ಮಹಾ ಬೋಧಕರೆಂದರೆ ತಪ್ಪಾಗಲಾರದು.

**ಕಚ್ಚುವುದೇಕೆ ಹಾವಮ್ಮ**
**ಕಚ್ಚಿದರೇಕೆ ಸಾವಮ್ಮ?**
**ಅಮ್ಮ ಪಟಾಕಿಯ ಸುಟ್ಟರೆ ನನಗೆ**
**ದುಡ್ಡನೆ ಸುಟ್ಟಂತೆನಿಸುವುದು ॥**

ಎಲ್ಲ ಸಂದರ್ಭಗಳಲ್ಲೂ ಕೆಟ್ಟ ಶಬ್ಧ ಮಾಡುವ ಪಟಾಕಿಗಳ ಬಗ್ಗೆ, ಅದರಿಂದಾಗುವ ಅನಾಹುತಗಳ ಬಗ್ಗೆ ಮಕ್ಕಳನ್ನು ಎಚ್ಚರಿಸುವ ಜಾಗೃತ ಮನೋಗುಣ ಹೆತ್ತವರಲ್ಲಿ ಇರಬೇಕು. ವಿಷ ತುಂಬಿದ ಹಾವುಗಳ ಬಗ್ಗೆ ಅರಿವಿನ ಪಾಠ ಹೇಳದೆ ಹೋದರೆ ಮಗುವಿನ ಅವುಗಳ ಬಗ್ಗೆ ಸಾಮಾನ್ಯ ಅರಿವಿನ ಪಾಠ ಹೇಳದೆ ಹೋದರೆ ಮಗುವಿಗೆ ಅವುಗಳ ಬಗ್ಗೆ ಸಾಮಾನ್ಯ ಜ್ಞಾನವೂ ಇರದೆ ತೊಂದರೆ ಮಾಡಿಕೊಳ್ಳುವ ಸಂಭವ ಇರುತ್ತದೆ. ಪಟಾಕಿ ಸುಡುವುದರಿಂದ ಆಗುವ ಪರಿಸರ ಮಾಲಿನ್ಯದ ಬಗ್ಗೆ, ಪ್ರಾಣಿ ಪಕ್ಷಿಗಳ ಭಯ ಮಿಶ್ರಿತ ಆತಂಕದ ಬಗ್ಗೆ, ವಯ್ಯಸ್ಸಾದವರ ಸುರಕ್ಷತೆಯ ಬಗ್ಗೆ ಅರಿವು ನೀಡದಿದ್ದರೆ.. ಹೇಗೆ?

ಇಂತಹ ಚರ್ಚೆ ಮಾಡುವ ಹತ್ತು ಹಲವು ಕವನಗಳು ಸುಜನಾ ಅವರ ಕೃತಿಗಳ ಸಿಗುತ್ತವೆ. ಮಹಾಕಾವ್ಯ ಬರೆದ ಕವಿ ಕೈ ಮಕ್ಕಳ ಸಾಹಿತ್ಯವನ್ನು ಹೇಗೆ ಸೃಜಿಸಿದೆ ಎಂಬ ಕುತೂಹಲಕ್ಕೇ ಚಿಲಿಪಿಲಿ ಕೃತಿಗಳನ್ನು ಓದಿದೆ.

ಓದಿದ್ದಷ್ಟೇ.. ಈ ಲೇಖನ ಬರೆಯುವ ಸ್ಫೂರ್ತಿಗೆ ಕಾರಣವಾಯಿತು. ಆದ್ದರಿಂದ ಚಿಲಿ–ಪಿಲಿ ಕವನ ಸಂಕಲನದ ಭಾಗ 2 ಮತ್ತು 3 ರ ಆಯ್ದ ಈ ಪದ್ಯಭಾಗಗಳನ್ನು ಗಮನಿಸಿದಾಗ ವೈಜ್ಞಾನಿಕವಾದ ಮನೋಭಾವನೆ, ಪ್ರಶ್ನೆ ಮಾಡುವ, ಆಸಕ್ತಿ ಕೆರಳುವ, ಕುತೂಹ; ಭರಿತವಾದ, ಕಾವ್ಯದ ಹಿತ ಮಿತ ಅಪ್ಪುಗೆ ಮಕ್ಕಳ ಈ ಕವನಗಳಲ್ಲಿ ನಮಗೆ ದರ್ಶನವಾಗುತ್ತದೆ.

**–ಮಾರೇನಹಳ್ಳಿ ಲೋಕೇಶ್**
**ಅಧ್ಯಕ್ಷರು, ಅತ್ತಿಗುಪ್ಪೆ ಸಾಹಿತ್ಯ ಬಳಗ**
**ಕೆ.ಆರ್.ಪೇಟೆ.**

**ಮೊ.ಸಂಖ್ಯೆ : 9902612999**

# ಯುಗಸಂಧ್ಯಾ : ಒಂದು ಚಿಂತನೆ

ಪ್ರೊ. ಸುಜನಾರವರ ರಚಿಸಿರುವ ಸಾಹಿತ್ಯಗಳಲ್ಲಿ ಬಹು ಶ್ರೇಷ್ಠ ಕೃತಿ ಎನಿಸಿರುವ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿಯಾದ " ಯುಗಸಂಧ್ಯಾ" ಕೃತಿಯು ಕನ್ನಡ ಸಾಹಿತ್ಯದಲ್ಲಿ ಸಂಚಲನ ಮೂಡಿಸಿದೆ. ದ್ವಾಪರಯುಗದ ಅಂತ್ಯ ಮತ್ತು ಕಲಿಯುಗಗಳ ಆರಂಭದ ಕಥೆಯನ್ನು ಎಣೆಯಲಾಗಿದೆ. ಬಹು ಮುಖ್ಯವಾಗಿ ದ್ವಾಪರ ಯುಗದಲ್ಲಿ ನಡೆದಿರುವ ತಪ್ಪುಗಳು ಮರುಕಳಿಸಿದರೆ ಭಯಂಕರ ಸರ್ವನಾಶ ಕಟ್ಟಿಟ್ಟ ಬುತ್ತಿಯಾಗಿದೆ ಎಂಬ ಎಚ್ಚರಿಕೆಯ ಸಂದೇಶವನ್ನು ರವಾನಿಸಲಾಗಿದೆ. ಈ ಕೃತಿಯಲ್ಲಿ ಕಂಡು ಬರುವ ಪ್ರಮುಖ ಅಂಶಗಳೆಂದರೆ ಎಲ್ಲಾ ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ ಮತ್ತು ಗಾಂಧಾರಿಯರ ದುಖಃ ಮುಗಿಲು ಮುಟ್ಟಿದ ಆಕ್ರಂದನವಾಗಿ ಕಂಡು ಬರುತ್ತದೆ. ಪುತ್ರ ಮಾಡುತ್ತಿದ್ದ ಎಲ್ಲಾ ಕೃತಿಮಗಳು ಗಮನಕ್ಕೆ ಬಂದರೂ ಕುರುಡು ಪುತ್ರ ವ್ಯಾಮೋಹ ಪರೋಕ್ಷವಾಗಿ ಪ್ರಚೋದನೆಗೊಳಿಸಿ ಸರ್ವನಾಶಕ್ಕೆ ಕಾರಣವಾದ ಬಗ್ಗೆ ಪಶ್ಚತ್ತಾಪ ಎದ್ದು ಕಾಣುತ್ತದೆ. 99 ಮಕ್ಕಳು ಅಳಿದರೂ ಚಿಂತೆಯಿಲ್ಲ ಆದರೆ ದುರ್ಯೋಧನ ಉಳಿದಿದ್ದರೆ ಸಾಕಾಗಿತ್ತು ಎಂಬ ಆತನ ಮನದಾಳದ ಮಾತು ಪಾಂಡವರ ಮೇಲಿನ ದ್ವೇಷ ದೂರವಾಗಿಲ್ಲವೆಂಬುದನ್ನು ಖಾತ್ರಿ ಪಡಿಸುತ್ತದೆ. ಸಾಮ್ರಾಟತನದ ವ್ಯಾಮೋಹ ರಕ್ತ ಸಂಬಂಧವನ್ನು ದೂರವಿರಿಸಿ ಆಳುವ ಮನಸ್ಥಿತಿ ಸದಾ ಎದ್ದು ಕಾಣುತ್ತದೆ. ಮತ್ತು ಗಾಂಧಾರಿಯು ಕಣ್ಣಿದ್ದು ಪ್ರತಿವ್ರತೆತನಕ್ಕಾಗಿ ಕಣ್ಣಿಗೆ ಬಟ್ಟೆ ಕಟ್ಟಿ ಕುಳಿತುಕೊಳ್ಳುವ ಪ್ರಸಂಗ ಇಂದಿನ ಪೋಷಕರಿಗೆ ಮಕ್ಕಳನ್ನು ಉತ್ತಮ ರೀತಿಯಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಿ ಪೋಷಿಸದಿದ್ದರೆ ಎಲ್ಲಾ ದುರ್ಯೋಧನಾದಿಗಳೇ ಸೃಷ್ಠಿಯಾಗುತ್ತಾರೆ ಎಂಬ ಸತ್ಯವನ್ನು ಅನಾವರಣಗೊಳಿಸಿದೆ. ಮಕ್ಕಳನ್ನು ತಿದ್ದುವ ಅವಕಾಶವಿದ್ದರು ಕಣ್ಮುಚ್ಚಿ ಕುಳಿತರೆ ಮನೆಯೊಳಗೆ ನಿರೀಕ್ಷಿಸದ ಅನಾಹುತಗಳು ಹೆಚ್ಚುತ್ತವೆ ಎಂಬ ಸಂದೇಶ ರವಾನೆಯಾಗಿದೆ.

20 ಮತ್ತು 21ನೇ ಶತಮಾನದ ಕೊಂಡಿಯಾಗಿದ್ದ ಪ್ರೊ.ಸುಜನಾರವರು ದ್ವಾಪರಯುಗದೊಂದಿಗೆ ಕಲಿಯುಗದ ಪ್ರಚಲಿತ ವಿದ್ಯಾಮಾನಗಳನ್ನು ಸಂಯೋಜನೆ ಮಾಡಿ ಕಥೆಯನ್ನು ಎಣೆಯಲಾಗಿದೆ. ಘೋಷಕರ ಜವಾಬ್ದಾರಿ ಹೇಗಿರಬೇಕು, ಮಕ್ಕಳನ್ನು ಬೇಳೆಸುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳು, ಮಕ್ಕಳ ಮೇಲಿಟ್ಟಿರುವ ಪ್ರೀತಿಯಲ್ಲಿ ಅತಿಯಾದ ಕಾಳಜಿಯ ಅನರ್ಥ ಜೀವನದ ಸೋಲಿಗೆ ಕಾರಣವಾಗುತ್ತದೆ. ದಾಯಾದಿ ಮತ್ಸರ ಯುದ್ಧದ ಭೀಕರ ಪರಿಣಾಮಗಳು ಅಂತಿಮವಾಗಿ ದೈವದ ಅನುಗ್ರಹವಿದ್ದರೆ ಸರ್ವವು ಯಶಸ್ಸು ಎಂಬ ದೈವಶಕ್ತಿ ಕೃಷ್ಣ ಮಾನವತಾರಿಯಾಗಿ ಕೆಲಸ ಮಾಡಿರುವುದು ಕಂಡು ಬರುತ್ತದೆ.

ಹೊಸ ಮನ್ವಂತರಕ್ಕೆ ದಿಕ್ಸೂಚಿಯಾಗಿರುವ ಈ ಕೃತಿಯು ವಿಶಿಷ್ಟವಾದ ಸ್ಥಾನಕ್ಕೇರಿದೆ. ಮೂಲ ವ್ಯಾಸ ಭಾರತ, ಪಂಪ ಭಾರತ ಮತ್ತು ಕುಮಾರ ವ್ಯಾಸ ಭಾರತದ ಕಥೆಗಳನ್ನು ಆಧಾರವಾಗಿರಿಸಿಕೊಂಡು ಪ್ರಸ್ತುತ ಕಾಲಘಟ್ಟಕ್ಕನುಗುಣವಾಗಿ ರಚಿಸಿದ್ದಾರೆ. ಪಾಂಡವರು ಮತ್ತು ಕೌರವರ ಜನನ, ಬೆಳವಣಿಗೆ, ವಿದ್ಯಾಭ್ಯಾಸ, ಶಾಸ್ತ್ರ ವಿದ್ಯೆಮತ್ತು ಶಸ್ತ್ರ ವಿದ್ಯೆಯ ಸಂದರ್ಭದಲ್ಲಿ ಕೌರವರು ಬೆಳೆಸಿಕೊಂಡ ವೈಮನಸ್ಸಿನ ಬಗ್ಗೆ ಪ್ರಸ್ತುತ ಸಾಮಾಜಿಕತೆಯಲ್ಲಿ ನಡೆಯುತ್ತಿರುವ ಘಟನೆಗಳನ್ನು ಸಂಯೋಜಿಸಿ ಸಂಭವಿಸಬಹುದಾದ ಅನಾಹುತಗಳ ಬಗ್ಗೆ ಮಾರ್ಮಿಕವಾಗಿ ಸತ್ಯವನ್ನು ಬಿಚ್ಚಿಟ್ಟಿದ್ದಾರೆ. ಈ ಕೃತಿಯು ಯುದ್ಧೋತ್ತರ ಘಟನೆಗಳನ್ನು ಪಾತ್ರಗಳ ಮೂಲಕ ಅಭಿವ್ಯಕ್ತಿಸುವ ಕೆಲಸ ಮಾಡಿದೆ. ಯುದ್ಧದ ಬದಲು ಯುದ್ಧವೇ ಬರದಂತೆ ಎಚ್ಚರ ವಹಿಸುವ ನೀತಿಯನ್ನು ತಿಳಿಸುತ್ತದೆ. ದ್ವಾಪರಯುಗದ ರಾಜಕೀಯ ಸ್ಥಿತ್ಯಂತರವನ್ನು ಇಂದಿನ ರಾಜಕೀಯದ ಜೊತೆ ಸಮೀಕರಿಸುವ ಮೂಲಕ ಸಾಮಾಜಿಕ ಅರಾಜಕತೆಯನ್ನು ಎತ್ತಿ ಹಿಡಿದ್ದಾರೆ. ಈ ಕೃತಿಯಲ್ಲಿ ಕೃಷ್ಣನ ಪಾತ್ರ ದೈವ ಮಾನವನಾಗಿರುವುದಕ್ಕಿಂತ ಸಾಮಾನ್ಯ ಮಾನವನ ಸಹಜ ವರ್ತನೆ ಪ್ರತಿಮೆಯಾಗಿ ಕಂಡು ಬರುತ್ತದೆ.

ಪ್ರೊ.ಸುಜನಾರವರು ತಮ್ಮ ಗುರುಗಳಾದ ಕುವೆಂಪುರವರ ಅಂತರಂಗದ ಶಿಷ್ಯರಾಗಿದ್ದರು."ಯುಗ ಸಂಧ್ಯಾ" ಕೃತಿಯು ತಮ್ಮ ಗುರುಗಳು ಬರೆದ ಮಹಾಕಾವ್ಯ "ಶ್ರೀ ರಾಮಾಯಣ ದರ್ಶನಂ" ಕೃತಿಯಂತೆ ಸರಳ ರಗಳೆಯಲ್ಲಿದೆ ಮತ್ತು ಮಹಾ ಛಂದಸ್ಸಿನ ದಾಟಿಯನ್ನು ಒಳಗೊಂಡಿದೆ. ಕೃತಿಯಲ್ಲಿ ಯುದ್ಧೋತ್ತರದ ಮಹಾಭಾರತದ ಕಥಾ ಹಿನ್ನಲೆಯಿದ್ದರು ಪ್ರಸ್ತುತ ಸಾರ್ವಜನಿಕ ಮತ್ತು ಸಾರ್ವತ್ರಿಕ ಜೀವನದ ಹಿನ್ನಲೆಯನ್ನು ಮೇಳೈಸಿದ್ದಾರೆ. ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ ಮತ್ತು ಗಾಂಧಾರಿಯರ ಪಾತ್ರಗಳಿಗೆ ಅರಿವಾಗಿ ಪಾಂಡವರ ಜೊತೆ ತಮ್ಮ ಅಂತಿಮ ದಿನಗಳನ್ನು ಕಳೆಯಲು ಬಯಸುವುದನ್ನು ಸೋದಾಹರಣವಾಗಿ ಚಿತ್ರಿಸಿದ್ದಾರೆ. ಇಲ್ಲಿ ಕುಂತಿಯು ಕೂಡ ತನ್ನ ಮಕ್ಕಳಿಗೆ 12 ವರ್ಷ ವನವಾಸ ಮತ್ತು 1 ವರ್ಷ ಅಜ್ಞಾತವಾಸವನ್ನು ಅನುಭವಿಸಲು, ಜೂಜಿನಲ್ಲಿ ಮೋಸದಿಂದ ಸರ್ವಸ್ವವನ್ನು ಕಳೆದುಕೊಂಡು ಮತ್ತು ಮಗಳ ಸಮಾನಳಾದ ದ್ರೌಪದಿಯ ವಸ್ತ್ರಾಪಹರಣಕ್ಕೆ ಹಿನ್ನಲೆಗೆ ಕಾರಣರಾದ ಧೃತರಾಷ್ಟ್ರ ಮತ್ತು ಗಾಂಧಾರಿಯನ್ನು ಬಹಳ ಪ್ರೀತಿಯಿಂದ ಆತಿಥ್ಯ ಮತ್ತು ಆಶ್ರಯ ನೀಡುವ ಮೂಲಕ ಇದುವರೆಗೂ ಏನು ನಡೆದಿಲ್ಲವೆಂಬಂತೆ ನಡೆದುಕೊಂಡು ಹೋಗುವ ಔದಾರ್ಯ ಈ ಕೃತಿಯಲ್ಲಿ ಧ್ವನಿತವಾಗಿದೆ.

ಈ "ಯುಗ ಸಂಧ್ಯಾ" ಕೃತಿಯು ಎಲ್ಲಾ ವರ್ಗದ ಜನತೆಗೂ ಹಿತವೆನಿಸುವ ಶುದ್ಧವಾದ ಬದುಕನ್ನು ನಿರ್ವಹಿಸಲು ಸೂಕ್ತ ಮಾರ್ಗದರ್ಶನ ನೀಡುವಂತಿದೆ. ಇಲ್ಲಿ ಕೃಷ್ಣನ ಪಾತ್ರ ದೇವರಾಗುವುದಕ್ಕಿಂತ ಸಾಮಾನ್ಯರಲ್ಲಿ ಸಾಮಾನ್ಯನಾಗಿ ನಡೆದುಕೊಳ್ಳುವ ಬಗೆ ವಿಶೇಷವಾಗಿದೆ. ಯುದ್ಧಾನಂತರ ಪ್ರತಿ ಪಾತ್ರಗಳ ಪಾಪ–ಪುಣ್ಯಗಳನ್ನು ಲೆಕ್ಕಚಾರ ಮಾಡಿಸುವುದಷ್ಟೇ ಅಲ್ಲ ಅವುಗಳ ವ್ಯಕ್ತಿತ್ವದ ತೌಲನಿಕ ಆತ್ಮವಲೋಕನವನ್ನು ಮಾಡಿಸಿದ್ದಾರೆ. ಅಳಿದುಳಿದ ಪಾತ್ರಗಳ ಬಾಯಲ್ಲಿ ತಾವು ಮತ್ತು ತಮ್ಮ ಕುಟುಂಬದವರು ಮಾಡಿದ ದುರಾಚಾರಗಳ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ. ಪ್ರತಿಯೊಬ್ಬರ ಕರ್ಮಫಲಗಳ ಮೇಲೆ

ಸಾವು–ನೋವುಗಳು ಎದರಾಗುತ್ತವೆ ಎಂಬುದನ್ನು ಖಚಿತ ಪಡಿಸಿದಂತಿದೆ.

ಯುಗ ಸಂಧ್ಯಾ ಕೃತಿಯು ಹೊಸ ಮನ್ವಂತರಕ್ಕೆ ಭಾಷ್ಯ ಬರೆಯುವುದರ ಜೊತೆಗೆ ಕಲಿಯುಗದ ನಡೆಯ ಬಗ್ಗೆಯು ಮಾರ್ಗದರ್ಶನವಿದೆ. ಈ ಕಾವ್ಯದಲ್ಲಿ ಬರುವ ಧೃತರಾಷ್ಟ್ರಮತ್ತು ಗಾಂಧಾರಿಯರ ಪ್ರಲಾಪ ಎಲ್ಲಾ ಪೋಷಕರಿಗೂ ಎಚ್ಚರಿಕೆಯ ಘಂಟೆಯಾಗಿದೆ. ನಾವು ಮಕ್ಕಳನ್ನು ಬೆಳೆಸುವಲ್ಲಿ ಎಚ್ಚರ ತಪ್ಪಿ ಹಾಳಾಗಿದ್ದೇವೆ ಮತ್ತು ಕುರುಡು ಪುತ್ರ ವ್ಯಾಮೋಹವು ಪೋಷಕರಿಗೆ ದುರ್ಗತಿ ತರುತ್ತದೆ ಎಂಬುದನ್ನ ಆ ಪಾತ್ರಗಳ ಮೂಲಕವೇ ಪ್ರಸ್ತಾಪಿಸಿ ಹೇಳಿಸಲಗಿದೆ. ಕಣ್ಣಿದ್ದು ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳುವ ಮೂಲಕ ಮಕ್ಕಳನ್ನು ತಿದ್ದುವಲ್ಲಿ ವಿಫಲವಾಗಿರುವ ಬಗ್ಗೆ ತನ್ನ ಬಗ್ಗೆ ತಾನೇ ಅಸಹ್ಯ ಪಟ್ಟುಕೊಂಡು ಅನೀತಿ ಅನುಸರಿಸಿದ್ದರ ಬಗ್ಗೆ ಜಗತ್ತಿಗೆ ತಾಯಿಯ ಜವಬ್ದಾರಿಯನ್ನು ಎಚ್ಚರಿಸಿದೆ. ಅದೇ ರೀತಿ ತಂದೆಯ ಪಾತ್ರವು ಮುಖ್ಯವಾಗಿದೆ. ಅರಗಿನ ಮನೆಯಲ್ಲಿ ಪಾಂಡವರನ್ನು ಸುಡುವ ಕುತಂತ್ರದ ಬಗ್ಗೆ ತಂದೆಯ ಬಳಿ ಹೇಳಲು ಬಂದು ಹೊರ ಬಾಗಿಲಿನಿಂದಲೇ  ಹಿಂತಿರುಗುತ್ತಿದ್ದ ದುರ್ಯೋಧನನು ಏಕಾಂತವಾಗಿ ತಂದೆಯ ಬಳಿ ಯಾರು ಇಲ್ಲದ ಸಮಯದಲ್ಲಿ ಬಂದು ತನ್ನ ಕುತಂತ್ರವನ್ನು ತಿಳಿಸುತ್ತಾನೆ. ದುರ್ಯೋಧನನನ್ನು ಕುರಿತು ಧೃತರಾಷ್ಟ್ರ ಈಗಾಗಲೇ ನಾಲ್ಕೈದು ಬಾರಿ ಒಳಗೆ ಬರಲು ಪ್ರಯತ್ನಸಿ ಏಕೆ ವಾಪಸ್ಸಾದೆ ಎಂದು ಕೇಳುತ್ತಾನೆ  ಅದಕ್ಕೆ ದುರ್ಯೋಧನನು ನಿಮ್ಮ ಬಳಿ ಸತ್ಯಸಂಧ ವಿಧುರ ಇದ್ದುದ್ದರಿಂದ ಕುತಂತ್ರದ ಬಗ್ಗೆ ಹೇಳಲು ಮನಸ್ಸಾಗಲಿಲ್ಲ ಎಂದು ಹೇಳುತ್ತಾನೆ. ಇದನ್ನು ಗಮನಿಸಿದಾಗ ಸತ್ಯಕ್ಕೆ ತಲೆ ಬಾಗುತ್ತಿದ್ದ ರೀತಿ ತಿಳಿದು ಬರುತ್ತದೆ. ಇಲ್ಲಿ ಕುರುಡು ತಂದೆಗೆ ಮಗ ಬಂದು ಹೋಗಿರುವ ಸಂಗತಿ  ಒಳ ಮನಸ್ಸಿನಿಂದ ತಿಳಿದು ಪ್ರಶ್ನಿಸುವ ಕಲೆಗಾರಿಕೆ ಬಗ್ಗೆ ಲೇಖಕರು ಸೂಕ್ಷ್ಮವಾಗಿ ಉಲ್ಲೇಖಿಸಿದ್ದಾರೆ. ಮಗ ತಪ್ಪು ಮಾಡುತ್ತಿದ್ದಾನೆ ಎಂಬುದು ತಿಳಿದರು ಅದನ್ನು ವಿರೋಧಿಸದೆ ಮೌನವಾಗುತ್ತಾನೆ. ಇದು ದುರ್ಯೋಧನನ ದುಷ್ಟ ಕೆಲಸಕ್ಕೆ ಕುಮ್ಮಕ್ಕು ನೀಡಿದಂತಾಗಿದೆ. ಮಕ್ಕಳನ್ನು ಬೆಳೆಸುವಾಗ ತಂದೆ ತಾಯಿಯರ ಪಾತ್ರ ಸಮಾನವಾಗಿರುತ್ತದೆ ಎಂಬುನ್ನ ಒತ್ತಿ ಹೇಳಿದ್ದಾರೆ. ಬಾಲ್ಯದಲ್ಲಿಯೇ ಮಕ್ಕಳನ್ನು ಸನ್ಮಾರ್ಗ ಮತ್ತು ಸಂಸ್ಕಾರಗಳನ್ನು ಕಲಿಸದಿದ್ದರೆ ಮುಂದೊಂದು ದಿನ ನಮ್ಮಂತೆ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಪೋಷಕರಿಗೆ ಎಚ್ಚರಿಸಿದ್ದಾರೆ. ಧರ್ಮರಾಯನ ಪಟ್ಟಾಭಿಷೇಕವಾದ ಮೇಲೆ ಎಲ್ಲಾ ಪಾಂಡವರು ಧೃತರಾಷ್ಟ್ರ ಮತ್ತು ಗಾಂಧಾರಿಯನ್ನು ಪ್ರೀತಿಯಿಂದ ಕಾಣುವ ಬಗೆ ಅತ್ಯಂತ ವಿನಮ್ರವಾಗಿ ಕಂಡು ಬರುತ್ತದೆ. ಕೃಷ್ಣನಿಗೂ ಮಾನವನಂತೆ ಸಾವು ಸಂಭವಿಸುವ ಮೂಲಕ ದ್ವಾಪರಯುಗದ ಅಂತ್ಯಕ್ಕೆ ಸಾಕ್ಷಿಯಾಗಿದೆ. ಮನೋವಿಕಾರಗಳು ದೂರ ಸರಿಯದ ಹೊರತು ಸನ್ಮಾರ್ಗ ಸಾಧ್ಯವಿಲ್ಲವೆಂಬುದುಕೃತಿಯಲ್ಲಿ ಘನೀಕೃತವಾಗಿದೆ. ಯುಗ ಸಂಧ್ಯಾ ಕೃತಿಗಿಂತ ಮುನ್ನ ರಚಿತವಾದ ಎಲ್ಲಾ ಮಹಾಭಾರತ ಕಥೆಗಳು ಕುರುಕ್ಷೇತ್ರದ ನಂತರ ವಿಶೇಷವಾಗಿ ಗಮನ ಸೆಳೆದಂತೆ ಕಾಣುವುದಿಲ್ಲ. ಆದರೆ ಈ ಕೃತಿಯು ಮಹಾಭಾರತದ ಮತ್ತೊಂದು ದಿವ್ಯ ದರ್ಶನವನ್ನು ನೀಡುತ್ತದೆ. ಧರ್ಮರಾಯನನ್ನು ಬಿಟ್ಟು ಉಳಿದ ಪಾಂಡವರ ಭೀಕರ ಅಂತ್ಯವನ್ನು ತಿಳಿಸಿದ್ದಾರೆ.

ಮನಸ್ಸಿನ ದ್ವೇಷ ಎಲ್ಲರನ್ನು ನಾಶ ಮಾಡುವ ಜೊತೆಗೆ ದ್ವೇಷಿಸುವವರನ್ನು ಭೀಕರವಾಗಿ ನಾಶಗೊಳಿಸುತ್ತದೆ ಎಂಬುದನ್ನು ಸಾರಿದೆ. ಈ ಕೃತಿಯಲ್ಲಿ ಪ್ರತಿ ಪಾತ್ರದ ಆತ್ಮಾವಲೋಕನವನ್ನು ಆಯಾಯ ಪಾತ್ರಗಳ ಮೂಲಕ ಮಾಡಿಸಿ ನಾವು ಇಂತಹ ತಪ್ಪನ್ನು ಮಾಡಿ ಅನಾಹುತವನ್ನು ಹೆದರಿಸಿದ್ದೇವೆ ನಮ್ಮ ಜೊತೆ ನಮ್ಮ ಕುಟುಂಬದವರನ್ನು ಸಂಕಷ್ಟಕ್ಕೆ ತಳ್ಳಿದ್ದೇವೆ ಎಂದು ವಿನಮ್ರವಾಗಿ ಹೇಳುವ ನಡೆಯನ್ನು ಇಲ್ಲಿ ಕಾಣುತ್ತೇವೆ. ನಮ್ಮ ದುರ್ಗತಿಗೆ ನಾವೇ ಕಾರಣರು. ನಮ್ಮ ಆಲೋಚನೆ, ನಮ್ಮ ಬೆಳೆಯುವ ಪರಿಸರ ಪ್ರಭಾವ, ಪೋಷಕರ ಸೂಕ್ತ ಮಾರ್ಗದರ್ಶನದ ಕೊರತೆ ಮತ್ತು ಸಹವಾಸ ದೋಷ ಇವು ತಳಹದಿಯಾಗಿ ಕೆಲಸ ಮಾಡುತ್ತವೆ. ದುರ್ಯೋಧನನ ಪೋಷಕರಿಗೆ ತಮ್ಮ ತಪ್ಪಿನ ಅರಿವಾಗುವ ವೇಳೆಗೆ ಊಹಿಸಲಾಗದ ಅನಾಹುತಗಳು ನಡೆದೇ ಹೋಗಿದ್ದವು. ಈ ಕೃತಿಯಲ್ಲಿ ಯುದ್ಧಾನಂತರದ ಘಟನೆಗಳನ್ನು ಹೇಳುವ ಜೊತೆಗೆ ಎಲ್ಲಾ ಪಾತ್ರಗಳ ಅವಲೋಕನ ಮತ್ತು ಸಮ್ಮಿಲನ ಪರ್ವವೇ ಕಂಡು ಬರುತ್ತದೆ. ಒಟ್ಟಾರೆ ಕನ್ನಡ ಸಾಹಿತ್ಯ ಲೋಕದ ಅಪರೂಪದ ಕಾವ್ಯಗಳಲ್ಲಿ ಯುಗಸಂಧ್ಯಾ ಉತ್ಕೃಷ್ಟ ಕಾವ್ಯಗಳಲ್ಲಿ ಒಂದಾಗಿದೆ. ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕೆಂಬ ಆಶಯವನ್ನು ತಿಳಿಸಿದೆ. ಇಪ್ಪನೇ ಶತಮಾನಗಳಲ್ಲಿ ನಡೆದ ಜಾಗತಿಕ ಮಟ್ಟದ ಮಹಾಯದ್ದಗಳ ದುಷ್ಪರಿಣಾಮ ಮತ್ತು ದೇಶಗಳ ನಡುವೆ ನಡೆಯುತ್ತಿದ್ದ ಅನೇಕ ಯುದ್ಧಗಳ ಅವಾಂತರಗಳನ್ನು ಕಾಲಗಟ್ಟದ ದೃಷ್ಟಿಯಲ್ಲಿ ಎಚ್ಚೆತ್ತುಕೊಳ್ಳಬೇಂಬುದು ಈ ಕಾವ್ಯದ ಮೂಲಕ ತಿಳಿಸಲಾಗಿದೆ. ಅಂತಹ ಕುರುಕ್ಷೇತ್ರದಿಂದ ನಡೆದ ದುಷ್ಪರಿಣಾಮದಿಂದ ಮಾನವ ಕುಲಕೋಟಿ ಸಾತ್ವಿಕ ಮತ್ತು ಶಾಂತಿ ಸಹಬಾಳ್ವೆಯ ಬದುಕನ್ನು ರೂಪಿಸಿಕೊಳ್ಳುವಲ್ಲಿ ಮುಂದಾಗಬೇಕೆಂಬ ಸಂದೇಶ ವ್ಯಕ್ತವಾಗಿದೆ.

**ಡಾ.ಬಿ.ಸಿ.ವಿಜಯಕುಮಾರ್**

ಬಲ್ಲೇನಹಳ್ಳಿ

ಮೊ : 9008879719

**ಬಿ.ಸಿ.ವಿಜಯಕುಮಾರ್, ಬಲ್ಲೇನಹಳ್ಳಿ ಅವರು ಸುಜನಾ ಅವರ ಕುರಿತು ಮಂಡಿಸಿರುವ ಪ್ರಬಂಧ ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣ ಸಾಹಿತ್ಯ ಮಾಲಿಕೆ – 1 'ಸಾಹಿತ್ಯ ಸಂಭ್ರಮ' ಕೃತಿಯಲ್ಲಿ ಪ್ರಕಟವಾಗಿರುವ ಲೇಖನ.**

# ಮೇರುಕವಿ ಸುಜನಾ

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಸಾಹಿತ್ಯ ಪರಂಪರೆ ಬಹಳ ಮಹತ್ವವುಳ್ಳದ್ದು. ಈ ನೆಲ ಹಲವು ಮಹಾನ್ ಸಾಹಿತಿಗಳ ತವರೂರಾಗಿದೆ. ಕನ್ನಡ ಸಾಹಿತ್ಯದ ನವೋದಯ ಕಾಲಘಟ್ಟದ ಪ್ರಮುಖರೆನಿಸಿರುವ ವೈಚಾರಿಕ ಸಾಹಿತಿ ಎ.ಎನ್ ಮೂರ್ತಿರಾಯರು, ಪ್ರೇಮಕವಿ ಕೆ.ಎಸ್ ನರಸಿಂಹಸ್ವಾಮಿಯವರು ಇದೇ ತಾಲ್ಲೂಕಿನವರು ಎಂಬುದು ಹೆಮ್ಮೆಯ ಸಂಗತಿ. ಇವರಷ್ಟೇ ಪ್ರಮುಖ ಸ್ಥಾನವನ್ನು ಹೊಂದಿರುವವರು ನಾಡಿನ ಖ್ಯಾತ ವಿಮರ್ಶಕ, ಕವಿ ಪ್ರೊ ಸುಜನಾ ಅವರು. ತಾಲೂಕಿನ ಹೊಸಹೊಳಲು ಗ್ರಾಮದಲ್ಲಿ ಜನಿಸಿ ಮೈಸೂರನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿಸಿಕೊಂಡವರು ಇವರು. ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯಾಸಕ್ತಿ ಮೈಗೂಡಿಸಿಕೊಂಡು ಮುಂದೆ ಸಾಹಿತ್ಯ ಬೋಧನೆಯನ್ನೇ ಪ್ರೀತಿಯಿಂದ ಅಪ್ಪಿಕೊಂಡು, ಅದನ್ನೇ ಬದುಕಿನ ಆರಾಧನೆ–ಯನ್ನಾಗಿಸಿಕೊಂಡು, ಅಪಾರ ಶಿಷ್ಯ ಬಳಗದ ನೆಚ್ಚಿನ ಗುರುವಾಗಿ ಬಾಳಿದ ಅಪರೂಪದ ಆದರ್ಶ ಶಿಕ್ಷಕರಿವರು. ತರಗತಿ ಬೋಧನೆಯ ಅನೇಕ ಸಂದರ್ಭಗಳಲ್ಲಿ ಭಾವಪರವಶರಾಗಿ ಗದ್ಯ ಪದ್ಯಗಳನ್ನು ವಿವರಿಸುತ್ತಿದ್ದ ಅವರ ಶೈಲಿಯು ಇಂದಿಗೂ ಅವರ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಇದಲ್ಲದೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅವರ ಹೆಸರನ್ನು ಇಂದಿಗೂ ಚಿರಸ್ಥಾಯಿಯಾಗಿ ಉಳಿಸಿರುವುದು ಅವರ ಸಾಹಿತ್ಯ ಕೃತಿಗಳು. ಮಹಾಭಾರತೋತ್ತರದ ಸನ್ನಿವೇಶವನ್ನು ತಮ್ಮ 'ಯುಗಸಂಧ್ಯಾ' ಕೃತಿಯಲ್ಲಿ ಅದ್ಭುತವಾಗಿ ಕಂಡರಿಸುವ ಮೂಲಕ ಮಹಾಕಾವ್ಯ ಸೃಷ್ಟಿಸಿದ ನಾಡಿನ ಪ್ರಮುಖರ ಪಂಕ್ತಿಗೆ ಸೇರ್ಪಡೆ ಹೊಂದಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೂ ಭಾಜನರಾಗಿ, ತಾಲೂಕಿನ ಕೀರ್ತಿ ಪತಾಕೆಯನ್ನು ಹಾರಿಸಿದ ಮಹಾನ್ ಕವಿ ಸುಜನಾ ಅವರು.

ಶ್ರೀಯುತರಿಗೆ 75 ವಸಂತಗಳು ತುಂಬಿದಾಗ ಅವರಿಗೆ ಹುಟ್ಟೂರಿನಲ್ಲಿ ಗೌರವ ಸಮರ್ಪಣೆ ಮಾಡಬೇಕೆಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಶ್ರೀಯುತ ಕೆ.ಎಸ್. ಸೋಮಶೇಖರ್ ಅವರ ಮುಂದಾಳತ್ವದಲ್ಲಿ ಕಾರ್ಯಕ್ರಮ ಆಯೋಜನೆಯಾಗಿತ್ತು. ಕವಿಯ ಒಪ್ಪಿಗೆ ಪಡೆದು 2005ರ ಮೇ 7 ರಂದು ಕಾರ್ಯಕ್ರಮವನ್ನು ನಿಗದಿಪಡಿಸಲಾಯಿತು. ತಮ್ಮೂರಿನ ಹೆಮ್ಮೆಯ ಪುತ್ರನ ಸ್ವಾಗತಕ್ಕೆ, ಸನ್ಮಾನಕ್ಕೆ ಸಮಸ್ತ ಹೊಸಹೊಳಲು ಗ್ರಾಮಸ್ಥರು ಟೊಂಕಕಟ್ಟಿ ನಿಂತಿದ್ದರು. ಗ್ರಾಮದ ಪ್ರಮುಖ ಬೀದಿಗಳು ತಳಿರು ತೋರಣ, ಹೂವಿನ ಅಲಂಕಾರಗಳೊಂದಿಗೆ ನವ ವಧುವಿನಂತೆ ಸಿಂಗಾರ–ಗೊಂಡಿದ್ದವು. ಪ್ರತಿ ಮನೆಯ ಮುಂಭಾಗದಲ್ಲಿ ಹೆಂಗಳೆಯರು ಬಿಡಿಸಿದ್ದ ಬಣ್ಣ ಬಣ್ಣದ, ಸುಂದರ ಚಿತ್ತಾರದ ರಂಗೋಲಿಗಳು ಕಂಗೊಳಿಸುತ್ತಿದ್ದವು. ಇಡೀ ಗ್ರಾಮದಲ್ಲಿ ಹಬ್ಬದ

ವಾತಾವರಣ ಮನೆ ಮಾಡಿತ್ತು. ಗ್ರಾಮದ ಹೊಯ್ಸಳ ವಾಸ್ತುಶಿಲ್ಪ ವೈಭವದ ಶ್ರೀ ಲಕ್ಷ್ಮಿ ನಾರಾಯಣ ಸ್ವಾಮಿದೇವಾಲಯದಿಂದ ಕಾರ್ಯಕ್ರಮದ ಸ್ಥಳಕ್ಕೆ ಅಲಂಕೃತ ವಾಹನದಲ್ಲಿ ಸುಜನಾ ದಂಪತಿಯನ್ನು ಮೆರವಣಿಗೆಯ ಮೂಲಕ ಕರೆತರಲಾಯಿತು. ದಾರಿಯುದ್ದಕ್ಕೂ ಹೆಂಗಳೆಯರು ಆರತಿ ಎತ್ತಿ, ಯುವಕರು ಜಯಕಾರ ಕೂಗಿ ಸಂಭ್ರಮಿಸಿದರು. ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪ್ರೊ.ಚಂದ್ರಶೇಖರ ಪಾಟೀಲ, ಜಿಲ್ಲಾ ಕಸಾಪ ಅಧ್ಯಕ್ಷರಾಗಿದ್ದ ಶ್ರೀ ಹೆಚ್.ವಿ. ಜಯರಾಂ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಸಮ್ಮುಖದಲ್ಲಿ ಉದ್ಘಾಟನಾ ಸಮಾರಂಭವು ನೆರವೇರಿತು. ನಂತರ ಕಾರ್ಯಕ್ರಮದ ಭಾಗವಾಗಿ ಆಯೋಜಿಸಲಾಗಿದ್ದ ಸುಜನಾ ಸಾಹಿತ್ಯ ವಿಚಾರ ಗೋಷ್ಠಿಯು ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಸಿ.ಪಿ.ನಾಗರಾಜ ಅವರ ಅಧ್ಯಕ್ಷತೆಯಲ್ಲಿ (ಯುಗಸಂಧ್ಯಾದಲ್ಲಿ ಸಾಮಾಜಿಕ ಪ್ರಜ್ಞೆ) ಅರ್ಥಪೂರ್ಣವಾಗಿ ಜರುಗಿತು. ವಿದ್ವಾಂಸರಾದ ಎ.ಎಂ.ಶಿವಸ್ವಾಮಿ (ಸುಜನಾ ವಿಮರ್ಶಾ ನೋಟ), ಮ.ರಾಮಕೃಷ್ಣ (ಮೂಲ ಮಹಾಭಾರತ ಮತ್ತು ಯುಗಸಂಧ್ಯಾ), ಮೈಸೂರು ಕೃಷ್ಣಮೂರ್ತಿ (ಯುಗಸಂಧ್ಯಾ ರೂಪಕಗಳು) ಹಾಗೂ ಕೆ.ಎಂ.ವೀರೇಶ್ (ಸುಜನಾ ಸಾಹಿತ್ಯ: ಒಂದು ಅವಲೋಕನ) ಮಂಡಿಸಿದ ವಿದ್ವತ್ಪೂರ್ಣ ವಿಚಾರಗಳಿಗೆ ಸಾಹಿತ್ಯಾಸಕ್ತರು ತಲೆದೂಗಿದರು.

ಅಂದಿನ ವಿಧಾನಸಭೆಯ ಗೌರವಾನ್ವಿತ ಸ್ಪೀಕರ್ ಹಾಗೂ ಸ್ಥಳೀಯ ಶಾಸಕರಾಗಿದ್ದ ಶ್ರೀಮಾನ್ ಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಸುಜನಾ ದಂಪತಿಯನ್ನು ಪ್ರೀತಿಯಿಂದ ಗೌರವಿಸಲಾಯಿತು. ವಿಶ್ರಾಂತ ಕುಲಪತಿ ಡಾ.ದೇಜಗೌ, ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಮತ್ತಿತರ ಗಣ್ಯರು ಈ ಸಂದರ್ಭವನ್ನು ಸಾಕ್ಷೀಕರಿಸಿದರು. ತವರಿನ ಸನ್ಮಾನವನ್ನು ಸ್ವೀಕರಿಸಿದ ಸುಜನಾ ಅಕ್ಷರಶಃ ಪುಳಕಗೊಂಡರು. ಯಾವೊಬ್ಬ ಸಾಧಕನಿಗೂ ಬೇರೆಡೆ ದೊರಕಿರುವ ಯಾವುದೇ ಉನ್ನತ ಗೌರವಕ್ಕಿಂತ ಅವರ ಜನ್ಮಸ್ಥಳದಲ್ಲಿ ಸಲ್ಲುವ ತವರಿನ ಗೌರವ ದೊಡ್ಡದಾಗಿರುತ್ತದೆ ಎಂಬ ಮಾತು ಇವರಿಗೂ ಅನ್ವಯಿಸುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳೊಂದಿಗೆ ಗ್ರಾಮಸ್ಥರು ಹಾಗೂ ಸನ್ಮಾನ್ಯರ ಬಂಧುಗಳು ಸೇರಿ ಇಡೀ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ, ಅಚ್ಚುಕಟ್ಟಾಗಿ ನಡೆಸಿದ್ದಲ್ಲದೆ, ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡಿದರು. ಈ ಕಾರ್ಯಕ್ರಮವು ನಿಜಕ್ಕೂ ಇಂದಿಗೂ ತಾಲ್ಲೂಕಿನ ಸಾಹಿತ್ಯ ಪ್ರೇಮಿಗಳ ಮನದಲ್ಲಿ ಚಿರಸ್ಥಾಯಿಯಾಗಿ ಉಳಿದಿದೆ.

ಕಾರ್ಯಕ್ರಮದ ಸಂದರ್ಭದಲ್ಲಿ ನಡೆದಒಂದು ಪ್ರಮುಖ ಘಟನೆಯನ್ನು ಇಲ್ಲಿ ದಾಖಲಿಸಬೇಕಾಗಿದೆ. ತಮ್ಮ ತವರೂರಿನ ಸನ್ಮಾನ ಕಾರ್ಯಕ್ರಮಕ್ಕೆ ಆಯೋಜಕರ ಬಲವಂತಕ್ಕೆ ಮಣಿದು ಆರಂಭದಲ್ಲಿ ಒಪ್ಪಿಗೆ ನೀಡಿದ್ದ ಸುಜನಾ ಅವರು ಕಾರ್ಯಕ್ರಮದ ದಿನಾಂಕ ಹತ್ತಿರ ಬರುತ್ತಿದ್ದಂತೆ ತಮ್ಮ ನಿರ್ಧಾರದಿಂದ ಹಿಂದೆ ಸರಿಯಲು ಯೋಚಿಸಿದ್ದರಂತೆ!

ಸ್ವಭಾವತಃ ಹಿಂಜರಿಕೆ ಹೊಂದಿದ್ದ ಅವರು ವೇದಿಕೆ ಕಾರ್ಯಕ್ರಮದಿಂದ ತಪ್ಪಿಸಿಕೊಳ್ಳಲು ಮುಂದಾಗಿದ್ದರಂತೆ! ಕವಿ ದಂಪತಿಯನ್ನು ಕಾರ್ಯಕ್ರಮಕ್ಕೆ ಕರೆತರಲು ಕಾರಿನಲ್ಲಿ ಹೋಗಿದ್ದ ಹಿರಿಯ ಮಿತ್ರ ಶ್ರೀಯುತ ಎನ್.ಎಂ.ಶಿವಪ್ರಕಾಶ್ ಅವರೊಂದಿಗೆ, ಸ್ವತಃ ಸುಜನಾ ಅವರೇ ಕಾರ್ಯಕ್ರಮ ಮುಗಿದ ನಂತರ ಈ ಮಾತುಗಳನ್ನು ಹೇಳಿದ್ದರು. ಕಾರ್ಯಕ್ರಮದ ದಿನ ಹೊಸಹೊಳಲಿಗೆ ಬರುವುದರ ಬದಲಿಗೆ ಯಾರಿಗೂ ತಿಳಿಯದಂತೆ ಒಂದೆರಡು ದಿನ ಬೇರೆಲ್ಲಾದರೂ ಪುಣ್ಯಕ್ಷೇತ್ರಕ್ಕೆ ಹೋಗಿ ಬಿಡಲು ಕವಿ ದಂಪತಿ ನಿರ್ಧರಿಸಿದ್ದರಂತೆ. ಆ ಮೂಲಕ ಸನ್ಮಾನದ ಮುಜುಗರವನ್ನು ತಪ್ಪಿಸಿಕೊಳ್ಳಬೇಕೆಂದು ಅವರು ಯೋಚಿಸಿದ್ದರಂತೆ! ಬಹುಶಃ ಕೆಲವು ನಿಮಿಷ ತಡವಾಗಿ ಶಿವಪ್ರಕಾಶ್ ಅಂದು ಸುಜನಾ ಮನೆಗೆ ಹೋಗಿದ್ದರೂ ಕವಿಯ ಭೇಟಿಯು ಸಾಧ್ಯವೇ ಆಗುತ್ತಿರಲಿಲ್ಲ. ಇದು ಈಡೇರಿದ್ದರೆ ಅಂದಿನ ಕಾರ್ಯಕ್ರಮವು ನಡೆಯುತ್ತಲೇ ಇರಲಿಲ್ಲ! ಆದರೆ ಈ ಕಾರ್ಯಕ್ರಮದ ಸಂದರ್ಭದಲ್ಲಿ ತುಸು ಅನಾರೋಗ್ಯಕ್ಕೆ ಈಡಾಗಿದ್ದ ಕವಿವರ್ಯರು, ಕಾರ್ಯಕ್ರಮದ ನಂತರ ಮತ್ತಷ್ಟು ಕಾಲ ಲವಲವಿಕೆಯಿಂದ ಇದ್ದದ್ದಲ್ಲದೆ, ಈ ಕಾರ್ಯಕ್ರಮದಿಂದ ನನ್ನಲ್ಲಿ ನವಚೈತನ್ಯ ಮೂಡಿದ್ದು, ಇದರ ನೆನಪಿನಲ್ಲಿ ಇನ್ನೂ ಒಂದಷ್ಟು ಕಾಲ ಚೆನ್ನಾಗಿರುತ್ತೇನೆ ಎಂದು ಹೇಳಿದ್ದು ಸಹ ಸುಳ್ಳಲ್ಲ!

ಸಾಹಿತ್ಯ ಕೃತಿಗಳ, ಧಾರ್ಮಿಕ ಗ್ರಂಥಗಳ ಅಧ್ಯಯನದ ಜೊತೆಗೆ ಅಧ್ಯಾಪನದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಕವಿ ಸುಜನಾ ಅವರು ಉತ್ತಮ ಆಡಳಿತಗಾರರಾಗಿಯೂ ಗಮನ ಸೆಳೆದಿದ್ದಾರೆ. ಸಾಹಿತ್ಯ ಕ್ಷೇತ್ರದ ಹಿರಿಯರ, ದಿಗ್ಗಜರ ಸಂಸರ್ಗದಲ್ಲಿ ಅವರು ಓರ್ವ ಶ್ರೇಷ್ಠ ಕವಿಯಾಗಿ, ವಿಮರ್ಶಕರಾಗಿಯೂ ರೂಪುಗೊಂಡಿದ್ದಾರೆ. ಉತ್ಕೃಷ್ಟ ಸಾಹಿತ್ಯ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆ ನೀಡುವ ಮೂಲಕ ಸಾಹಿತ್ಯಾಸಕ್ತರ ಮನದಲ್ಲಿ ಎಂದೆಂದಿಗೂ ನೆಲೆಸಿರುತ್ತಾರೆ.

**– ಡಾ.ಶ್ಯಾಮೇಶ್‌ಅತ್ತಿಗುಪ್ಪೆ, ಮೈಸೂರು**
**# 58, ನಂಮ ಮನೆ, ಮೂರನೇಕ್ರಾಸ್,**
**ಗ್ರೀನ್ ಹೋಂಸ್ ಲೇಔಟ್, ಮರಟಿಕ್ಯಾತನಹಳ್ಳಿ ಗೇಟ್,**
**ಗದ್ದಿಗೆ ರಸ್ತೆ, ಮೈಸೂರು. ಮೋ–9964242434**

**"ನಾಣ್ಯಯಾತ್ರೆಗೆ ಮಿಗಿಲು ಜೀವ ಜೀವನಯಾತ್ರೆ,**
**ಬಂದೆವೆಲ್ಲಿಂದಲೊ, ಇದ್ದೆವೆಷ್ಟುದಿನವೆಂತೆಂತೊ, ನಡೆವೆವೆಲ್ಲೆಲ್ಲಿಗೊ,**
**ತಿಳಿಯದೀ ಜನನ ಜೀವನ ಮರಣ ಲಯ ವಿನ್ಯಾಸ"**
**– ಡಾ. ಸುಜನಾ**

# ಸುಜನಾ ಅವರೊಡನೆ ಒಂದೆರಡು ಮಾತು

**ಪ್ರಿಯ ಗುರುಗಳೇ,**

ಮಹಾರಾಜ ಕಾಲೇಜಿನಲ್ಲಿ ಮೊದಲ ಮಹಡಿಯ ಮೂಲೆ ಕೊಠಡಿಯಲ್ಲಿ ಬೇಂದ್ರೆ ಅವರ ಬೆಳುದಿಂಗಳ ನೋಡಾ' ಎಂಬ ಕವಿತೆಯನ್ನು ಪಾಠ ಮಾಡುವಾಗ ಮಟಮಟ ಮಧ್ಯಾಹ್ನ ಹನ್ನೊಂದೊ, ಹನ್ನೆರಡೊ ಗಂಟೆಯಿರಬೇಕು. ಆ ನಡು ಮಧ್ಯಾಹ್ನದಲ್ಲಿ ನೀವು–

**ಬೆಳುದಿಂಗಳ ನೋಡ**

**ಬೆಳುದಿಂಗಳ ನೋಡು**

ಎಂದು ನಮ್ಮದೇ ಆದ ವಿಶಿಷ್ಟ ದಾಟಿಯಲ್ಲಿ ಓದುತ್ತಾ, ಜೊತೆಗೆ ವಿಮರ್ಶಿಸುತ್ತಾ–

**ಇದು ಪಾಲುಗಡಲಿನ ಸೀಮಿ**

**ಚಂದ್ರಮನೆ ಸ್ವಾಮಿ**

**ಏನೆಂಥ ಹಂದರದ ಈಡ**

**ಬೆಳುದಿಂಗಳ ನೋಡ**

ಎಂದು ನಮಗೆಲ್ಲ ಬೇಂದ್ರೆ ಕಂಡ ಬೆಳುದಿಂಗಳಿನ ಶ್ರೀಮಂತಿಕೆಯನ್ನೆಲ್ಲ ಮೊಗೆಮೊಗೆದು ಎದೆಯೊಳಗೆ ಸುರಿದಿದ್ದು ಮತ್ತು ಕುಮಾರವ್ಯಾಸನ ಜೋಡುಕವಚವ ತೊಟ್ಟ ಉತ್ತರಕುಮಾರನು ಕೌರವನ ಮನವೀಸಾಡಲಾರದ ಬಲು ಸೈನ್ಯವನ್ನು ಕಂಡು ಹೆದರಿ ಅಪ್ಪಳಿಸಿ, ಮುಂಜೆರಗ ಸಂವರಿಸಿ, ಬಂದು ಮೆಲ್ಲಗೆ ರಥದ ಹಿಂದಕೆ ನಿಂದು ಧುಮ್ಮಿಕ್ಕಿ ಬದುಕಿದೆನೆಂದು ನಿಟ್ಟೋಟದಲ್ಲಿ ಬಿಟ್ಟಮಂಡೆಯಲಿ ಹಾಯ್ದುದನ್ನು ನಮ್ಮ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದನ್ನು ಹೇಗೆ ಮರೆಯಲು ಸಾಧ್ಯ? ನೀವು ನಮಗೆ ಬೇಂದ್ರೆ, ಕುಮಾರವ್ಯಾಸ, ಪಂಪ, ಕುವೆಂಪು, ಅಡಿಗ ಮೊದಲಾದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಕವಿಗಳ ಕಾವ್ಯ ಓದುವುದನ್ನು ಮಾತ್ರ ಕಲಿಸಲಿಲ್ಲ; ಆದರೊಳಗಿರುವ ರಸ, ಧ್ವನಿಗಳನ್ನು ಗ್ರಹಿಸುವ ಸೂಕ್ಷ್ಮಗಳನ್ನೆಲ್ಲ ಹೇಳಿಕೊಟ್ಟಿರಿ. ನಿಮ್ಮಿಂದ ಕಲಿತ ಅನೇಕ ಶಿಷ್ಯರೇ ಇಂದು ಕನ್ನಡದ ದೊಡ್ಡ ವಿಮರ್ಶಕರು, ಕವಿಗಳು ಆಗಿದ್ದಾರೆ, ನೀವು ನಿಜಕ್ಕೂ ಗುರುಗಳಿಗೆ ಗುರುವಾಗಿದ್ದವರು,

ನಿಮ್ಮ ಮೊದಲ ತರಗತಿಗೆ ಮುನ್ನ "ಈ ಪಿರಿಯಡ್ ಸುಜನಾ ಅವರದು" ಎಂದು ಯಾರೋ ಹೇಳಿದಾಗ ನನಗೆ ಇದೆಂಥ ಹೆಸರು, ಹೀಗೂ ಹೆಸರು ಇಟ್ಟುಕೊಳ್ಳುತ್ತಾರೆಯೊ ಎನಿಸಿದ್ದು ನಿಜ. ಆಮೇಲೆ ಗೊತ್ತಾಯಿತು, ಮೈಸೂರಿನಲ್ಲಿ ಎಸ್. ನಾರಾಯಣಶೆಟ್ಟಿ ಎಂಬ ಹೆಸರಿಗಿಂತ ಹೆಚ್ಚು ಜನಪ್ರಿಯವಾದದ್ದು 'ಸುಜನಾ' ಎಂದು. ಹೇಳಿ, ನಿಮ್ಮ ತಂದೆಯವರು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಹೊಸಹೊಳಲಿನ ಸುಬ್ಬಶೆಟ್ಟರು ತಾನೆ 'ಸು' ಎಂದರೆ ಅವರ ಹೆಸರಿನ ಮೊದಲಕ್ಷರ, ನಿಮಗಿಟ್ಟ ಹೆಸರು ನಾರಾಯಣಶೆಟ್ಟಿ. 'ನಾ'

ಎಂಬುದು ನಿಮ್ಮ ಹೆಸರಿನ ಮೊದಲಕ್ಷರ, ಈ ಮೊದಲ 'ಸು' ಮತ್ತು ಕೊನೆಯ 'ನಾ' ಅಕ್ಷರಗಳ ನಡುವೆ ಇರುವ 'ಜ' ಎಂಬುದು ಯಾರ ಹೆಸರು? ನನಗೆ ಗೊತ್ತು ಅದು ನಿಮ್ಮ ಮೇಲೆ ಗಾಢ ಪ್ರಭಾವ ಬೀರಿದ, ಮಹಾನ್ ಚಿಂತಕ, ಮಾನವತಾವಾದಿ ಜಯಪ್ರಕಾಶ್ ನಾರಾಯಣರ ಹೆಸರಿನ ಮೊದಲಕ್ಷರ ತಾನೆ! ನಿಮ್ಮ ಕಾವ್ಯನಾಮಕ್ಕೆ ಮಾತ್ರ ಕಥೆಯಿದೆ ಎಂದು ನನಗನ್ನಿಸದು, ನಿಮ್ಮನ್ನು ಕುರಿತೇ ಅಂದು ಬಹಳಷ್ಟು ಕಥೆಗಳಿದ್ದವು. ನೀವು ಮೂಡಿ ಅಂತೆ.... ಹೆಚ್ಚು ಬೆರೆಯುವವರಲ್ಲವಂತೆ.... ಇತ್ಯಾದಿ, ಆದರೆ ನನಗೆ ಹಾಗನ್ನಿಸದು.

ಬಳಿಗೆ ಬಂದವರನ್ನು ನೀವು ಮಾತನಾಡಿಸುವಾಗ ತೋರುತ್ತಿದ್ದ ಆತ್ಮೀಯತೆ, ವಿದ್ಯಾರ್ಥಿಗಳನ್ನು 'ಅಣ್ಣಾ' ಎಂದು ಸಂಭೋದಿಸುತ್ತಿದ್ದ ರೀತಿ, ನಿಮಿಷಗಳಲ್ಲ, ಗಂಟೆಗಳು ಉರುಳಿದರೂ ಅದರ ಪರಿವೆ ಇಲ್ಲದೆ ಕಾವ್ಯ, ವಿಜ್ಞಾನ, ಸಂಗೀತ, ಪ್ರಾಣಿಪಕ್ಷಿ, ಬದುಕಿನ ಬಗ್ಗೆ ಮಾತನಾಡುತ್ತಿದ್ದುದೆಲ್ಲ ಈಗಲೂ ನೆನಪಿಗೆ ಬರುತ್ತಿದೆ. ಅರ್ಥವಾಗದಷ್ಟು ಸಂಕೀರ್ಣ ವ್ಯಕ್ತಿ ಏನಲ್ಲ ನೀವು, ನಾವೇ ನಿಮ್ಮನ್ನು ಸರಿಯಾಗಿ ಗ್ರಹಿಸಲಾಗಲಿಲ್ಲವೇನೋ ಎಂದು ಒಮ್ಮೊಮ್ಮೆ ಅನ್ನಿಸುವುದುಂಟು.

ನಾನು ನಿಮ್ಮನ್ನು ಕಂಡಾಗಲಿಂದ ಮೊನ್ನೆ ನೀವು ಕಣ್ಮುಚ್ಚುವವರೆಗೆ ನಿಮ್ಮ ಮೈಮೇಲೆ ಧರಿಸಿದ್ದು ಬಿಳಿಯ ಬಣ್ಣದ ಜುಬ್ಬ ಮತ್ತು ಪೈಜಾಮವನ್ನು. ನೀವು ವೇಷವನ್ನು ಬದಲಿಸಲಿಲ್ಲ... ಅಂತ ನಿಮ್ಮ ಸ್ಕೂಟರನ್ನು (ಲ್ಯಾಂಬ್ರೆಟ್ರಾ) ಕೂಡ. ನಿಮ್ಮ ಜುಬ್ಬ ಪೈಜಾಮದ ಮೇಲೆ ಮಹಾಕವಿ ಕುವೆಂಪು ಅವರ ಪ್ರಭಾವ ಇದ್ದಿರಬೇಕು ಎನಿಸುತ್ತದೆ. ಕುವೆಂಪು ಕೇವಲ ನಿಮ್ಮ ಹೊರಮೈಯ ಅರಿವೆಯ ಮೇಲಷ್ಟೇ ಪ್ರಭಾವ ಬೀರಲಿಲ್ಲ: ನಿಮ್ಮ ಒಳ ಅರಿವಿನ ಮೇಲೆ ಅವರು ಬೀರಿದ ಪ್ರಭಾವ ಗಾಢವಾದುದು. ನಿಮ್ಮೆಲ್ಲ ಬರಹಗಳಲ್ಲಿ, ಭಾಷಣಗಳಲ್ಲಿ ಅದನ್ನು ನಾಡಿನ ಜನತೆ ಕಂಡಿದೆ. ಕುವೆಂಪು ಎಂದರೆ ನಿಮಗೆ ಅದೆಂಥಾ ಭಕ್ತಿ, ಗೌರವ! ನೀವು ನಾಸ್ತಿಕರೊ ಆಸ್ತಿಕರೊ ನನಗೆ ಗೊತ್ತಿಲ್ಲ. ಆದರೆ ನಿಮಗೆ ಕುವೆಂಪು ಅವರೇ ಗುರುವಾಗಿದ್ದರು. ಒಂದರ್ಥದಲ್ಲಿ ದೈವವಾಗಿದ್ದರು. "ಮಹಾಕವಿ ಕುವೆಂಪು ಅವರು ನಡೆದಾಡುವ ರಸ್ತೆಯಲ್ಲಿ ನನಗೆ ಉಗುಳುವುದಕ್ಕೂ ಭಯ. ಹಾಗೆ ಮಾಡಿದರೆ ಆ ಚೇತನಕ್ಕೆ ಅಪಚಾರ ಮಾಡಿದ ಭಾವ ನನ್ನನ್ನು ಕಾಡುತ್ತದೆ" ಎಂದು ಸಭೆಯೊಂದರಲ್ಲಿ ನೀವು ಭಾವುಕರಾಗಿ ಹೇಳಿದ್ದನ್ನು ನಾನು ಕೇಳಿದ್ದೆ. ಕುವೆಂಪು ನಿಮ್ಮ ಹೃದಯದಲ್ಲಿ ಬೇರೂರಿದ್ದರು. ಗುರುಭಕ್ತಿಗೆ ಇನ್ನೊಂದು ಉದಾಹರಣೆ ನೀವೆಂದರೆ ಅದು ಸುಳ್ಳಾಗಲಾರದು.

ಪುತಿನ ಕೂಡ ನಿಮ್ಮ ಪ್ರೀತಿಯ ಕವಿ ಎಂದು ನನಗೆ ಗೊತ್ತು. ನಿಮ್ಮ ಬಗ್ಗೆ ನಿಮ್ಮ ಕಾವ್ಯದ ಬಗ್ಗೆ ಪುತಿನ ಬರೆದಿರುವುದನ್ನು ನಾನು ಓದಿದ್ದೇನೆ. "ಸುಜನಾ ಅವರು ಕೋಮಲ ಮನಸ್ಕರು, ಸೂಕ್ಷ್ಮ ಸಂವೇದಿಗಳು, ಚಿಂತನ ಶೀಲರು, ನಿಷ್ಕಪಟ ಸರಳ ಮನುಷ್ಯರು, ಬಹುಶ್ರುತರು, ಪ್ರವಚನ ಪಟು, ಕಾವ್ಯಗಳ ಗುಣ ವಿಮರ್ಶೆಯಲ್ಲಿ ಇವರದು ನಿಕಷಪ್ರಜ್ಞೆ ಇವರ ಅಧ್ಯಾಪನವನ್ನು ಮೆಚ್ಚದ ವಿದ್ಯಾರ್ಥಿಗಳು ಇಲ್ಲ" ಎಂದು ಪುತಿನ ಅವರೇ ಹೇಳಿದ್ದಾರೆ. ನಿಜ, ಪುತಿನ ಅವರ ಈ ಮಾತುಗಳಲ್ಲಿ ಯಾವುದೂ ಸುಳ್ಳಲ್ಲ, ಉತ್ಪ್ರೇಕ್ಷೆಯೂ ಅಲ್ಲ. ನಿಮ್ಮ ಅಂತರಂಗ, ಬಹಿರಂಗ ಗುಣಗಳೆರಡಕ್ಕೂ ಪುತಿನ ಇಲ್ಲಿ ಕನ್ನಡಿ ಹಿಡಿದಿದ್ದಾರೆ.

ಎಪತ್ತರ ದಶಕದಲ್ಲಿ ನೀವು ಪ್ರಶ್ನಾತೀತ ಹಾಗೂ ಬೇಡಿಕೆಯ ಭಾಷಣಕಾರರಾಗಿದ್ದಿರಿ, ನಿಮ್ಮ ಮಾತುಗಳನ್ನು ಕೇಳಿದವರು ನಿಮ್ಮ ಶೈಲಿಗೆ, ರೂಪಕಮಯ ಅಭಿವ್ಯಕ್ತಿಗೆ, ಅದರಲ್ಲಿನ ವೈಚಾರಿಕತೆಗೆ, ವಿಷಯದ ಬಹುಶ್ರುತಗುಣಕ್ಕೆ ಬೆರಗಾಗುತ್ತಿದ್ದರು. ತರಗತಿಯ ಪಾಠವಾಗಲಿ, ಸಾರ್ವಜನಿಕ ಭಾಷಣವಾಗಲಿ, ವಿಚಾರಗೋಷ್ಠಿಯೇ ಆಗಲಿ ನೀವು ಅರ್ಥಪೂರ್ಣ ರೂಪಕದ ಮೂಲಕ ಮಾತು ಪ್ರಾರಂಭಿಸುತ್ತಿದ್ದುದು ನಿಮ್ಮ ವಿಶೇಷ. ನಿಮ್ಮ ರೂಪಕಗಳು ನಿಮ್ಮವು ಅವು ಯಾರಿಂದಲೂ ಕಡ ತಂದವಲ್ಲ. ನಿಮಗೆ ರೂಪಕ ಬಳಕೆಯಲ್ಲಿ ಕುಮಾರವ್ಯಾಸ ಗುರು ತಾನೆ! ನೀವು ಕುಮಾರವ್ಯಾಸನ ಭಾವ ಸಹೋದರರು, ಕುಮಾರವ್ಯಾಸ ರೂಪಕ ಸಾಮ್ರಾಜ್ಯದ ಚಕ್ರವರ್ತಿಯಾದರೆ ನೀವು ಅದರ ದಂಡಾಧಿಪತಿ, ಮಹಾಮಂತ್ರಿ. ನಿಮ್ಮ ಮಾತೆಂದರೆ ಅದು ಸೋಪಜ್ಞತೆ, ಚಿಂತನೆ, ಕವಿತ್ವದ ಮುಪ್ಪುರಿ? ಅದೊಂದು ಮಿಂಚು, ಮಾರ್ಗದರ್ಶಕ ಬೆಳಕು. ಅದನ್ನು ಕೇಳಿದ ಮೇಲೆ ಬಹಳಷ್ಟು ಹೊತ್ತು ಮನಸ್ಸು ಅದನ್ನೇ ಕುರಿತು ಯೋಚಿಸುತ್ತದೆ. ಯಾವುದೋ ಒಂದು ಪರಿಮಳ ಕೇಳುಗರನ್ನು ಆವರಿಸಿಕೊಂಡಂತೆ ಅದೇ ಗುಂಗಿನಲ್ಲಿ ಉಳಿಸಿ ಬಿಡುತ್ತದೆ. ಅಷ್ಟೇ ಅಲ್ಲ, ನಿಮ್ಮ ಮಾತು, ಉಪನ್ಯಾಸ ಹಲವು ಜ್ಞಾನಗಳ ಸಂಗಮ, ಸಾಹಿತ್ಯ, ಸಂಗೀತ, ವಿಜ್ಞಾನ, ಅಧ್ಯಾತ್ಮ ಹೀಗೆ ಹಲವು ಭಿನ್ನ ಭಿನ್ನ ಕ್ಷೇತ್ರದ ವಿಷಯಗಳು ಅಲ್ಲಿ ಕೈಕೈ ಹಿಡಿದು ಜೊತೆಗೆ ಬರುವುದೇ ಅದರ ವಿಶೇಷ. ಅದನ್ನು ಕೇಳುವುದೇ ಒಂದು ಪುಣ್ಯ. ಅದು ಸಂತೋಷವನ್ನೂ ಕೊಡುತ್ತಿತ್ತು, ಅರಿವಿನ ಪರಧಿಯನ್ನೂ ವಿಸ್ತರಿಸುತ್ತಿತ್ತು.

ಆತ್ಮಾವಲೋಕನ, ಸಾಮಾಜಿಕ ಚಿಂತನೆ, ನಾರಾಯಣನನ್ನು ಕುರಿತ ಧ್ಯಾನ ಇವು ನಿಮ್ಮ ಕಾವ್ಯದ ಮುಖ್ಯ ನೆಲೆಗಳು; ವಿಷಾದ ನಿಮ್ಮೆಲ್ಲಾ ಕಾವ್ಯದ ಸ್ಥಾಯಿ ಭಾವವಾಗಿದೆ. 'ಒಂದೆ ಸೂರಡಿಯಲ್ಲಿ' ಎಂಬ ಕವನ ಸಂಕಲನ ನಿಮ್ಮ ಕವಿತೆಗಳ ಪ್ರಾತಿನಿಧಿಕ ಸಂಕಲನವೂ ಹೌದು. ನಿಮ್ಮದು ಮೂಲತಃ ಕವಿ ಹೃದಯ, ನಿಮ್ಮನ್ನು ವಿಮರ್ಶಕರೆಂದೇ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗುರುತಿಸಲಾಗಿದೆ. 'ಹೃದಯ ಸಂವಾದ' ನಿಜಕ್ಕೂ ಕನ್ನಡದ ದಾರ್ಶನಿಕ ವಿಮರ್ಶಾ ಕೃತಿ. ಕುವೆಂಪು ಅವರ ದಾರ್ಶನಿಕ ವಿಮರ್ಶಾ ಪರಂಪರೆಯನ್ನು ನೀವು ಸಮರ್ಥವಾಗಿ ಮುಂದುವರಿಸಿದಿರಿ. ಕಾಳಿದಾಸ, ಪಂಪ, ಕುಮಾರವ್ಯಾಸ ಕುವೆಂಪು, ಪುತಿನ ಮೊದಲಾದವರ ಕೃತಿಗಳ ಹೃದಯವನ್ನೇ ತೆರೆದು ತೋರಿಸಿದ ನಿಮ್ಮ ವಿಮರ್ಶೆಯನ್ನು ಮರೆಯುವುದುಂಟೆ? ಆದರೆ ನಿಮ್ಮನ್ನು ಬಲ್ಲವರಿಗೆ, ಶಿಷ್ಯರಿಗೆ ನಿಮ್ಮ ಮೇಲೆ ಈಗಲೂ ಕೋಪವಿದೆ, ಏಕೆ ಗೊತ್ತೇ? ನೀವು ಬರೆಯಬೇಕಾದಷ್ಟು ಬರೆಯಲಿಲ್ಲವಲ್ಲ ಎಂದು.

ಗುರುಗಳೆ, ನಿಮ್ಮದು 'ಸುದ್ದಿ'ಯಾಗುವ ಸ್ವಭಾವವಲ್ಲ. ನೀವೇ ಒಂದು ಪದ್ಯದಲ್ಲಿ ಸುದ್ದಿಯನ್ನು ಕುರಿತು "ಕಣೆ ಹಂದಿ ಅದು, ಬರಿದೆ ಎದುರಾಗಬೇಡ, ಅಂತೆ ನೀನದಕೆ ಮೈಯೊಡ್ಡಬೇಡ" ಎಂದು ಎಚ್ಚರಿಕೆ ನೀಡಿದ್ದೀರಿ. ಕೀರ್ತಿಕಾಮಿಯಲ್ಲದ ನಿಮಗೆ ಬರಬೇಕಾದಷ್ಟು ಕೀರ್ತಿ, ಪ್ರಶಸ್ತಿ ಬರಲಿಲ್ಲ ಎಂದೇ ಎಲ್ಲರೂ ಹೇಳುತ್ತಾರೆ. ಹೂವಾಗದೆ, ಹಣ್ಣಾಗದೆ, ಮರುಗ ಪಚ್ಚೆತೆನೆಯಾಗದೆ 'ಹಳ್ಳಿ ಜಾತ್ರೆಯ ಜವನ'ವಾದವರು ನೀವು.

ಆದರೂ ಕೆಲವು ಪ್ರಶಸ್ತಿಗಳು ನಿಮ್ಮನ್ನು ಹುಡುಕಿ ಬಂದವು. 1986 ರಲ್ಲಿ 'ಸಾಹಿತ್ಯ ಅಕಾಡೆಮಿ ಪ್ರಶಸ್ತಿ' 1994 ರಲ್ಲಿ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ', 1998 ರಲ್ಲಿ 'ಶ್ರೀ ದೇವರಾಜ ಅರಸು ಪ್ರಶಸ್ತಿ', 1999 ರಲ್ಲಿ 'ವಿಶ್ವಮಾನವ ಪ್ರಶಸ್ತಿ', 2009 ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 'ಗೌರವ ಡಾಕ್ಟರೇಟ್ ಪದವಿ' ಇವೆಲ್ಲ ನಿಮಗೆ ಸಂದ ಗೌರವಗಳು. ನಿಮ್ಮ ಕಾವ್ಯ, ವಿಮರ್ಶೆಯ ಔನ್ನತ್ಯಕ್ಕೆ ಸಾಕ್ಷಿಗಳು.

ಇಂದು ಕೀರ್ತಿಯ ಜೊತೆಗೆ ಹಣವೂ ಬರುವುದರಿಂದ ಹಲವರು ಪ್ರಶಸ್ತಿಗಾಗಿ ಹಪಹಪಿಸುತ್ತಾರೆ. ಆದರೆ ನಿಮ್ಮ ಸ್ವಭಾವವೇ ಬೇರೆ. ನಿಮಗೆ 'ಶ್ರೀ ದೇವರಾಜ ಅರಸು ಪ್ರಶಸ್ತಿ' ಬಂದಾಗ, ಅದರ ಜೊತೆಗೆ ಬಂದ ಒಂದು ಲಕ್ಷ ರೂಪಾಯಿಯಲ್ಲಿ ಒಂದು ಪೈಸೆಯನ್ನೂ ಸ್ವಂತಕ್ಕೆ ಬಳಸದೆ, ನಿಮ್ಮ ಹುಟ್ಟೂರು ಹೊಸಹೊಳಲಿನ ಸರಕಾರಿ ಶಾಲೆಯಲ್ಲಿ ಒಂದು ದತ್ತಿ ಸ್ಥಾಪಿಸಿ ಹಿಂದುಳಿದ ವರ್ಗದ ಬಡ ಮಕ್ಕಳ ಓದಿಗೆ ಅನುಕೂಲವಾಗುವಂತೆ 'ವಿದ್ಯಾರ್ಥಿ ವೇತನ' ನೀಡಲು ಆ ಹಣವನ್ನು ಇಡುಗಂಟಾಗಿ ಇಟ್ಟಿದ್ದನ್ನು ಕೇಳಿದಾಗ ನಿಮ್ಮ ಬಗ್ಗೆ ಇದ್ದ ಗೌರವ ಇಮ್ಮಡಿಸಿತು. ಬಡ ಮಕ್ಕಳ ಬಗ್ಗೆ, ಅವರ ಶಿಕ್ಷಣದ ಬಗ್ಗೆ ನಿಮಗಿರುವ ಕಾಳಜಿಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?

'ಪಾರ್ಕಿನ್ಸನ್' (ಅದುರು ವಾಯು) ಖಾಯಿಲೆಯಿಂದ ನಿಮ್ಮ ಶರೀರ ಸ್ವಾಧೀನ ಕಳೆದುಕೊಂಡು, ನಡುಗಲು ಆರಂಭಿಸಿದ್ದು ನಿಜಕ್ಕೂ ನೋವುಂಟು ಮಾಡಿದ ಸಂಗತಿ. ದೇಹ ದುರ್ಬಲವಾದದ್ದು ನಿಜ. ಆದರೆ ನಿಮ್ಮ ಮನಸ್ಸು, ಕಾರಯಿತ್ರಿ ಪ್ರತಿಭೆ ಮಾತ್ರ ಸ್ವಲ್ಪವೂ ಕುಂದಲಿಲ್ಲ. ನಿಜ ಹೇಳಬೇಕೆಂದರೆ ಅದು ತೊಂಬತ್ತರ ದಶಕದಲ್ಲಿ ಹೆಚ್ಚು ಕ್ರಿಯಾಶೀಲವಾಗಿತ್ತು. ಸೋಪಜ್ಞ ಭಾವಗಳು, ಕಲ್ಪನೆಗಳು, ಚಿಂತನೆಗಳು ಮೇಲಿಂದ ಮೇಲೆ ಚಿಮ್ಮಿ ಬಂದಾಗ ವ್ಯಾಸರಿಗೆ ಗಣಪತಿ ನೆರವಾದಂತೆ ನಿಮಗೆ ಮಗಳು ಶುಚಿಸ್ಮಿತ ಲಿಪಿಕಾರ್ತಿಯಾದರು. ಮಡದಿ ಮಹಾಮಾತೆ ಲಕ್ಷ್ಮಿಯವರು ನೀಡಿದ ಪ್ರೀತಿ, ಸ್ಫೂರ್ತಿಯನ್ನು ಮರೆಯಲಾದೀತೆ!

ಪಂಪ ಕುಮಾರವ್ಯಾಸ ಕುವೆಂಪು ನಂತರ ನಿಮ್ಮ ರೂಪೇ ನನಗೆ ಕಾಣುತ್ತಿರುವುದು. ನಿಮ್ಮ ಗುರುಗಳಾದ ಕುವೆಂಪು ಅವರು ಆಧುನಿಕ ಕನ್ನಡಕ್ಕೆ ಮೊದಲ ಮಹಾಕಾವ್ಯ ನೀಡಿದರು. ಅವರು ರಾಮಾಯಣದ ಕಥೆಯನ್ನು ವಸ್ತುವಾಗಿ ಸ್ವೀಕರಿಸಿ 'ಶ್ರೀ ರಾಮಾಯಣ ದರ್ಶನಂ'ವನ್ನು ನೀಡಿದರು. ನೀವು ಕುವೆಂಪು ಪರಂಪರೆಯನ್ನು ಮುಂದುವರಿಸಿದಿರಿ. ಮಹಾಭಾರತ ಕಥೆಯನ್ನು ವಸ್ತುವಾಗಿ ತೆಗೆದುಕೊಂಡು 'ಯುಗ ಸಂಧ್ಯಾ' (1999) ಕಾವ್ಯವನ್ನು ನೀಡಿದಿರಿ. ಇಪ್ಪತ್ತನೆಯ ಶತಮಾನದ ಕೊನೆಯ ಮಹಾಕಾವ್ಯ ನಿಮ್ಮದು. ಪಂಪ ಕುಮಾರವ್ಯಾಸರು ವ್ಯಾಸಭಾರತದ 10 ಪರ್ವವನ್ನಷ್ಟೇ ನಮಗೆ ನೀಡಿ ಕೊರತೆ ಉಳಿಸಿದ್ದರು. ನಿಮ್ಮಿಂದ ಉಳಿದ 08 ಪರ್ವಗಳ ಭಾರತ ಕಥೆ ರಸವತ್ತಾಗಿ ಮೂಡಿಬಂದು ಆ ಕೊರತೆ ನೀಗಿತು.

2002 ರಲ್ಲಿ ನಿಮ್ಮ 'ಯುಗಸಂಧ್ಯಾ' ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಕವಿತೆ ಬರೆದಿರಿ, ಚುಟುಕ ಬರೆದಿರಿ, ವಚನ ಬರೆದಿರಿ, ಶಿಶುಕಾವ್ಯದಿಂದ

ಮಹಾಕಾವ್ಯದವರೆಗೆ ನಿಮ್ಮ ಕಾವ್ಯಯಾನ ಸಾಗಿತು, ಕವಿತೆ, ವಚನ, ಚುಟುಕಗಳೆಂಬ ಸಾಹಿತ್ಯದ ಹಳ್ಳಗಳಲ್ಲಿ ಮೊದಲಿಗೆ ಈಜಲಾರಂಭಿಸಿದ ನೀವು ಕೊನೆಗೆ ಮಹಾಭಾರತ ವಾರ್ಧಿಯನ್ನು ಈಜಿ ಗೆದ್ದಿರಿ. ಅದು ನಿಜಕ್ಕೂ ಅದ್ಭುತ. ಹೇಳಿ, ಅಲ್ಲಿ ಮೇಲೆ ಮಹಾಕವಿಗಳಿಗೆಲ್ಲ ನಿಮ್ಮ ಗುರು ಶ್ರೀ ಕುವೆಂಪು ಅವರು ನಿಮ್ಮನ್ನು ಪರಿಚಯಿಸುತ್ತಿದ್ದಾರಲ್ಲವೆ! ಗುರುವಿನ ಕರೆಗೆ ಓಗೊಟ್ಟು ನಿಮ್ಮ ಶಿಷ್ಯರನ್ನೆಲ್ಲ ಬಿಟ್ಟು ಹೋದಿರೇನೊ ಎಂದು ನನಗಿನ್ನಿಸುತ್ತಿದೆ. ಗುರು–ಶಿಷ್ಯರನ್ನು ಒಂದುಗೂಡಿಸಿದ ಆ 'ಕಾಲ' ಮಿತ್ರನೋ, ಶತ್ರುವೋ ತಿಳಿಯುತ್ತಿಲ್ಲ.

(ಪ್ರೊ.ಸುಜನಾ ತೀರಿಕೊಂಡಾಗ ಮೈಸೂರಿನ 'ಪ್ರಜಾನುಡಿ' ಪತ್ರಿಕೆಯಲ್ಲಿ ಪ್ರಕಟವಾದ ವ್ಯಕ್ತಿಚಿತ್ರ ಬರಹ)

– **ಡಾ.ಮ.ರಾಮಕೃಷ್ಣ**

ನಿವೃತ್ತ ಪ್ರಾಧ್ಯಾಪಕರು

# 827, ನಿಧಿನಿಲಯ

22ನೇ ಅಡ್ಡರಸ್ತೆ, ಕಲ್ಲಹಳ್ಳಿ ಬಡಾವಣೆ

ವಿ.ವಿ.ನಗರ, ಮಂಡ್ಯ–571401

ಮೋ.9880132282

**"ಕಡಲು ಕಡೆಯುವ ಮೊದಲು**
**ಮನೆಯೊಳಗೆ ಗಡಿಗೆ ಮಜ್ಜಿಗೆಯ ಕಡೆದು**
**ಸಮಹಂಚಿ ತರಪೇತ ಪಡೆದು ಬನ್ನಿ"**
**– ಡಾ. ಸುಜನಾ**

# ಸೊನ್ನೆ ಎರಡರ ನಡುವೆ ಸದಾ ಉಳಿಯುವ ಅಪೂರ್ವ ಚೇತನ "ಯುಗ ಸಂಧ್ಯಾ" ಸುಜನಾ

ಸುಜನಾ ಅಂದಕೂಡಲೇ ಯಾಕೋ ಏನೋ ನನ್ನೊಳಗೆ ಒಂಥರಾ ಪುಳಕ, ಸಾಹಿತ್ಯ ಸಿಂಚನ ಮೈಮನ ರೋಮಾಂಚನಗೊಳ್ಳುತ್ತದೆ. ಸುಜನಾ ನಮ್ಮ ತಾಲ್ಲೂಕಿನವರು ನಮ್ಮ ಸಂಬಂಧಿಗಳು ನಮ್ಮ ಸಮುದಾಯದವರು ಅಥವಾ ಕನ್ನಡ ಸಾಹಿತ್ಯದ ಮಹಾಚೇತನ ಎಂಬ ಹಲವು ಕಾರಣಗಳಿಂದಾಗಿ ನಮ್ಮ ಮತ್ತು ಅವರ ನಡುವಿನ ಅಕ್ಕರೆ ಹಾಗೂ ಅಭಿಮಾನ ಉಕ್ಕಿ ಹರಿಯುತ್ತದೆ.

ದಿನಾಂಕ 13ರ ಏಪ್ರಿಲ್ ತಿಂಗಳು ಸುಜನಾ ಅವರ ಹುಟ್ಟುಹಬ್ಬದ ಅಂಗವಾಗಿ ಕೆ.ಆರ್.ಪೇಟೆಯಲ್ಲಿ ಸಾಹಿತ್ಯ ಸಹೃದಯಿಗಳು ಕನ್ನಡದ ಮನಸ್ಸುಗಳು ಮತ್ತು ಸುಜನಾ ಅಭಿಮಾನಿಗಳು ಜೊತೆಗೂಡಿ ಸುಜನಾ ಸಂಸ್ಮರಣೆ ಹಾಗೂ ಸವಿನೆನಪುಗಳು ಪುಸ್ತಕವನ್ನು ಹೊರತರುತ್ತಿರುವುದು ಸುಜನಾರ ಸಾಹಿತ್ಯ ರಸದ ಔತಣವನ್ನು ಸವಿದಷ್ಟು ಆನಂದವನ್ನು ಉಂಟು ಮಾಡಿದೆ.

## ಹತ್ತು ವರ್ಷಗಳ ಮಹಾ ತಪಸ್ಸು ಯುಗಸಂಧ್ಯಾ

ಮನೆಯ ಬಾಗಿಲ ಮುಂಭಾಗದಲ್ಲಿ ಮನೆಯ ನಾಯಿ ಗಲೀಜು ಮಾಡಿತ್ತು, ಇದನ್ನು ಸ್ವಚ್ಛಗೊಳಿಸಲು ನೀರು ಹಾಕಲಾಗಿತ್ತು. ಹೊರಗಿಂದ ಬಂದ ಸುಜನಾ ಅವರು ಬಾಗಿಲ ಬಳಿ ಬಂದಾಗ ಕಾಲುಜಾರಿ ಬಿದ್ದರು. ಇದರ ಪರಿಣಾಮ ಕುತ್ತಿಗೆಯ ಬಲಭಾಗ ಮೂಳೆ ಮುರಿದು ಬಲಗೈ ತೋಳು ನಿಶ್ಯಕ್ತವಾಯಿತು. ಇದರಿಂದಾಗಿ ಅವರ ಕೈ ಬರಹದ ಕಾರ್ಯವು ನಿಂತಿತು. ಆದರೆ ಅವರ ಮನಸ್ಸಿನೊಳಗೆ ಗೂಡುಗಟ್ಟಿದ ಯುಗಸಂಧ್ಯಾ ಮಹಾಕಾವ್ಯದ ಬರಹವು ನಿಲ್ಲಲಿಲ್ಲ. ನಿತ್ಯಹರಿದ್ವರ್ಣದ ನದಿಯಂತೆ ಹರಿಯುತ್ತಲೇ ಇತ್ತು. ಮನದೊಳಗೆ ಹರಿಯುತ್ತಿದ್ದ ಈ ಸಾಹಿತ್ಯ ಧಾರೆಯನ್ನು ಅಕ್ಷರ ರೂಪದಲ್ಲಿ ಬರೆದುಕೊಡಲು ಮಗಳು ಶುಚಿಸ್ಮಿತಾ ಸಹಾಯಕ್ಕೆ ನಿಂತರು. 1988 ರಲ್ಲಿ ಯುಗಸಂಧ್ಯಾ ಬರೆಯಲು ಪ್ರಾರಂಭಿಸಿದರು. ಈ ಮಹಾಕಾವ್ಯದ ರಚನೆಯು 1998 ರಲ್ಲಿ ಪೂರ್ಣಗೊಂಡಿತು. ಒಟ್ಟು ಹತ್ತು ವರ್ಷಗಳ ಸುಧೀರ್ಘ ತಪಸ್ಸು ಫಲಿಸಿ 2002ರಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಪುರಸ್ಕಾರವನ್ನು ಕನ್ನಡ ತಾಯಿಗೆ ತಂದುಕೊಟ್ಟಿತು ಈ ಸಂತೋಷ ಸಂಭ್ರಮದ ಕ್ಷಣದಲ್ಲಿ ಮಗಳು ಶುಚಿಸ್ಮಿತಾರ ತ್ಯಾಗ, ಪರಿಶ್ರಮ, ಸಹನೆ, ಪ್ರೇರಣೆ ಹಾಗೂ ಕಾರ್ಯ ಬದ್ದತೆಯ ನಿಷ್ಠೆಯನ್ನು ಸುಜನಾ ಅವರು ತಮ್ಮ ಜೀವನದುದ್ದಕ್ಕೂ ಸ್ಮರಿಸುತ್ತಿದ್ದರು. ನನ್ನ ಮಹಾಕಾವ್ಯದ ರಚನೆಗಾಗಿ ಸರಸ್ವತಿಯ ರೂಪದಲ್ಲಿ ನನ್ನ ಮಗಳಾಗಿ ನನಗೆ ನಿಂತಳು ಎಂಬುದಾಗಿ ಎಷ್ಟೋ ಬಾರಿ

ಹೇಳಿಕೊಂಡಿದ್ದಾರೆ. ಈ ಸಂಗತಿಯನ್ನು ತಮ್ಮ ಯುಗಸಂಧ್ಯಾ ಅರಿಕೆಯಲ್ಲಿ ದಾಖಲಿಸಿದ್ದಾರೆ.

## ಸುಜನಾ ಕಾವ್ಯನಾಮವೇ ಕಾವ್ಯಮಯ

ನವೋದಯ ಕವಿಗಳ ಕಾವ್ಯನಾಮಗಳು ಹೆಚ್ಚು ಸರಳ ಹಾಗೂ ಆಕರ್ಷಕವಾಗಿ ಇರುತ್ತಿದ್ದವು ಇಂತಹ ಕಾವ್ಯನಾಮಗಳಲ್ಲಿ ಬಹಳ ವೈಶಿಷ್ಟ್ಯ ಪೂರ್ಣ ಹಾಗೂ ಹೆಚ್ಚು ಅತ್ಯಾಕರ್ಷಕವಾದಂತಹ ಕುವೆಂಪು ಅವರ ಕಾವ್ಯನಾಮ. ಇದನ್ನು ಕೇಳಿದ ತಕ್ಷಣ ಕವಿ ಹೃದಯಕ್ಕೆ, ಸಹೃದಯಿ ಕವಿಗೆ ಏನೋ ಕಂಪು, ಇಂಪು. ಒಂಥರಾ ಕಾವ್ಯ ಕಂಪನ ನೀಡುವಂತೆ ಪರಮ ಆಪ್ತರಾದ ಸುಜನಾ ಅವರ ಕಾವ್ಯನಾಮವು ಅಷ್ಟೇ ಸುಗುಣ, ಸೌಜನ್ಯ, ಸರಳ, ಸುಂದರವಾದ ಕಾವ್ಯ ಸೌಂದರ್ಯ ಪ್ರಜ್ಞೆಯ ರೂಪಕದಂತೆ ಧ್ವನಿಸುತ್ತದೆ. ಇಂತಹ ಜನಜನಿತ ರೂಪಕದ ನಾಮಗಳು ಬಹು ಬೇಗ ವ್ಯಕ್ತಿತ್ವದ ಚಿತ್ರವನ್ನು ಕಟ್ಟಿಕೊಡುತ್ತದೆ. ಆಳವಾಗಿ ಸಹೃದಯಿಯ ಮನ ಮುಟ್ಟುತ್ತದೆ. ಹಾಗೂ ಅಭಿಮಾನದ ಕದ ತಟ್ಟುತ್ತದೆ ಇದನ್ನು ಗಂಭೀರವಾಗಿ ಗಮನಿಸಿದಾಗ ನನಗೆ ಅನಿಸುತ್ತದೆ ಕಾವ್ಯನಾಮಗಳಲ್ಲಿ ಗುರುಶಿಷ್ಯರ ಇಬ್ಬರಲ್ಲಿ ಕಾವ್ಯಮಯದ ಆಪ್ತ ಸಾಮ್ಯತೆ ಹಾಗೂ ಸೌಂದರ್ಯ ಹೊಳವುಗಳು ಎದ್ದು ಕಾಣುತ್ತವೆ.

## ಕುವೆಂಪು ಹಾಗೂ ಪು.ತಿ.ನ. ರಿಗೆ ಹೊಳವುಗಳ ದರ್ಶನ

ಕುವೆಂಪು ಅವರಿಗೆ ಅತ್ಯಂತ ಆಪ್ತ ಶಿಷ್ಯರು ಸುಜನಾ ಆಗಿದ್ದರು. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಬರೆಯುವಾಗ ಕುವೆಂಪು ಅವರಿಗೆ ಎಷ್ಟೋ ಹೊಳವುಗಳನ್ನು ಹೇಳುತ್ತಿದ್ದರಂತೆ. ಅಷ್ಟೂ ಆಪ್ತ ಹಾಗೂ ಏಕಾಂತದ ಪ್ರಿಯ ಸಮಾಲೋಚಕರಾಗಿದ್ದವರು. ಪು.ತಿ.ನ ಅವರಿಗೂ ಬಹಳ ಪ್ರಿಯವಾಗಿದ್ದರು ಹೊಳವುಗಳನ್ನು ನೀಡುತ್ತಿದ್ದರಂತೆ ಸುಜನಾ. ಕುವೆಂಪುರವರು ವಿವರಿಸಿದ ದರ್ಶನ ವಿಮರ್ಶೆಯ ವಿಧಾನವನ್ನನುಸರಿಸಿ ಸಾಹಿತ್ಯ ವಿಮರ್ಶೆಯ ಹೊಸ ವಿಧಾನವನ್ನೇ ರೂಪಿಸಿ ಬೆಳೆಸಿದ ಕೀರ್ತಿ ಸುಜನಾ ಅವರದು. ಕುವೆಂಪು ಅಭಿಮಾನಿ ಮತ್ತು ಕುವೆಂಪು ಸಾಹಿತ್ಯದ ಒಳನೋಟದ ವಿಮರ್ಶಕ ಆಗಿಯೂ ಕುವೆಂಪು ಹೆಸರನ್ನು ಸ್ವಂತ ಪ್ರಯೋಜನಕ್ಕೆ ಎಂದಿಗೂ ಬಳಸಿಕೊಳ್ಳದ ಅನುಭಾವಿ ಸುಜನಾ.

## ನವೋದಯ ಮೃದು ಮನಸಿನ ಕವಿ

ನವೋದಯ, ನವ್ಯ, ದಲಿತ, ಬಂಡಾಯ, ಹೀಗೆ ಹಲವು ಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯನ್ನು ನೋಡಬಹುದಾಗಿ ಇವುಗಳಲ್ಲಿ ಸುಜನಾ ನವೋದಯ ಕವಿಗಳ ಸಾಲಿಗೆ ನಿಲ್ಲುವಂತವರು. ನವ್ಯದ ಬಗ್ಗೆ ಅಷ್ಟು ಆಸಕ್ತಿಯು

ಇರಲಿಲ್ಲ. ಅವರುಗಳ ಬಗ್ಗೆ ಸೈದ್ಧಾಂತಿಕ ಹಾಗೂ ತಾತ್ವಿಕ ವಿರೋಧ ಇತ್ತು. ಆದರೆ ದಲಿತ ಹಾಗೂ ಬಂಡಾಯದ ಬಗ್ಗೆ ಅವರಿಗೆ ಒಲವಿತ್ತು. ಏಕೆಂದರೆ ಹಸಿವು, ಬಡತನ, ಸಿಟ್ಟು, ನೋವು–ನಲಿವನ್ನು ಹತ್ತಿರದಿಂದ ನೋಡಿದವರಾಗಿದ್ದರು. ಆದರೆ ನೇರವಾಗಿ ಎಲ್ಲಿಯೂ ಎಡ, ಬಲ ಪಂಥಕ್ಕೆ ಅಂಟಿಕೊಂಡವರಲ್ಲ. ತಮ್ಮ ಕಾವ್ಯ ಮತ್ತು ಸಾಹಿತ್ಯ ವಿಮರ್ಶೆಗಳ ಮೂಲಕ ಬಹಳ ಸೂಕ್ಷ್ಮವಾಗಿ ಏನು ಹೇಳಬೇಕೋ ಅಷ್ಟನ್ನು ಸ್ಪಷ್ಟವಾಗಿ ಹೇಳಿ ಬಿಡುತ್ತಿದ್ದರು. ಉದಾಹರಣೆಗೆ ಗಂಜಿ ಎಂಬ ಕವಿತೆಯಲ್ಲಿ ನೇಕಾರರಿಗೆ ಮತ್ತು ನೇಕಾರಿಕೆ ಸಮುದಾಯದ ತಲ್ಲಣಗಳು ಏನು, ಅಂದಿನ ಹಾಗೂ ಇಂದಿನ ಸ್ಥಿತಿಗಳು ಏನಾಗಿವೆ ಆಳುವ ವರ್ಗದ ನೀತಿಗಳು ಏನಾಗಿವೆ ಅ ಗಂಜಿಯ ವಾಸನೆ ಅಂಟು ನಂಟುಗಳ ಹಿಂದಿನ ನೋವು ನಲಿವುಗಳ ಸಂಬಂಧಗಳನ್ನು ನೂಲಿನ ಎಳೆ ಎಳೆಯಾಗಿ ಬಿಡಿಸಿ ಇಡುತ್ತಾರೆ. ಕವಿತೆ ಬಂಡಾಯವು ಹೌದು, ಹಿಂದುಳಿದ ವರ್ಗಗಳ ಶೋಷಣೆಯ ಚಿತ್ರಣವು ಹೌದು. ಇದನ್ನು ಯಾವ ಕಾವ್ಯ ಪ್ರಕಾರಗಳಿಗೆ ಸೇರಿಸಬೇಕು. ಇದ್ದು ಇಲ್ಲದ ಹಾಗೆ ಎಲ್ಲದರಲ್ಲೂ ಇದ್ದ ಹಾಗೆ ಬರೆಯುವುದೇ! ಅದೇ ಸುಜನಾ ಕಾವ್ಯದ ವೈಶಿಷ್ಟ್ಯಗಳನ್ನೊಳಗೊಂಡ ರೂಪಕ ಶೈಲಿಯಾಗಿದೆ ಎಂದರೆ ತಪ್ಪಾಗಲಾರದು.

### ಸದಾ ಉಳಿಯುವ ಅಪೂರ್ವ ಚೇತನ

ಸುಜನಾ ಅವರು ಮೈಸೂರು ಮಹಾರಾಜ ಕಾಲೇಜು ಯುವರಾಜ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಆದರೆ ಎಲ್ಲಿಯೂ ಅಧಿಕಾರ ಲಾಭಿ ಹಾಗೂ ರಾಜಕೀಯ ಲಾಭಗಳಿಗೆ ಒಳಗಾಗಲಿಲ್ಲ. ಇವರ ಬಗ್ಗೆ ಹತ್ತಿರದಿಂದ ಬಲ್ಲ ನಾಡಿನ ಖ್ಯಾತ ವಿಮರ್ಶಕರಲ್ಲಿ ಒಬ್ಬರಾದ ಬಿ.ಎ.ವಿವೇಕರೈ ಹೇಳುವಂತೆ: "ಸುಜನಾ ಅವರು ಸಾಹಿತ್ಯ, ರಾಜಕೀಯ ಪಂಥ, ಜಾತಿ, ಗುಂಪು, ಅಧಿಕಾರ, ಹಣ ಯಾವುದು ಇಲ್ಲದ ಸುಜನಾ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಮತ್ತು ಕರ್ನಾಟಕ ಸಂಸ್ಕೃತಿಯ ಲೋಕದ ಹಾಗೂ ಕಾವ್ಯ ಪರಂಪರೆಯ ಹೃದಯ ಸಂವಾದದಲ್ಲಿ ಸೊನ್ನೆ ಎರಡರ ನಡುವೆ ಸದಾ ಉಳಿಯುವ ಅಪೂರ್ವ ಚೇತನವಾಗಿ ಕನ್ನಡದ ಸಾಹಿತ್ಯ ಚರಿತ್ರೆಯಲ್ಲಿ ನಿಲ್ಲುತ್ತಾರೆ. ಸುಜನಾರ ಹೃದಯ ಕಮಲಕ್ಕೆ ನನ್ನ ಅಕ್ಷರ ನುಡಿಯ ಅಭಿನಂದನೆಗಳ ಸಮರ್ಪಣೆ.

**ಜೇನುಗೂಡು ಮಹೇಶ್ ಊಗಿನಹಳ್ಳಿ**
ಕಿಕ್ಕೇರಿ ಹೋಬಳಿ,
ಕೃಷ್ಣರಾಜಪೇಟೆ ತಾಲ್ಲೂಕು
ಮೊ. : 9844536379

# ಸುಜನಾ : ನೇಕಾರರ ಕವಿ ಸಾಹಿತಿ

ಕುರುಹಿನ ಶೆಟ್ಟಿ ಜನಾಂಗದ ಸಾಹಿತಿಯಾದ ಸುಜನಾ ಬಗ್ಗೆ ನಾ ತಿಳಿದಿರುವುದು. ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಹೊಸಹೊಳಲು ಗ್ರಾಮದಲ್ಲಿ ದಿನಾಂಕ 13-04-1930ರಲ್ಲಿ ಜನಿಸಿದರು. ತಂದೆ ಸುಬ್ಬಶೆಟ್ಟಿ, ತಾಯಿ ಗೌರಮ್ಮ ಎಲ್ಲ ಕವಿ ಮಹಾನೀಯರಂತೆ ಇವರಿಗೆ ಪ್ರಚಾರ ಸಿಗಲಿಲ್ಲ. ಸುಜನಾರವರು ವ್ಯಾಸಂಗದ ಜೊತೆ ಸಾಹಿತ್ಯದತ್ತ ಆಸಕ್ತಿ ಹೊಂದಿದ್ದರು. ಅಂತೆಯೇ ಹಿರಿಯ ಬರಹಗಾರರಾದ ಕುವೆಂಪು, ದ.ರಾ.ಬೇಂದ್ರೆ, ಅ.ನ.ಕೃ., ಪು.ತಿ.ನ. ರವರ ಬರಹಗಳನ್ನು ಓದುವುದರ ಜೊತೆಗೆ ತಮ್ಮದೇ ಕೃತಿಗಳನ್ನು ರಚಿಸುವುದರಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದರು.

ಕನ್ನಡ ಭಾಷೆಯಲ್ಲಿ ಎಂ.ಎ., ಮಾಡಿ ಮೈಸೂರಿನ ಯುವರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದರು. ನಂತರ ಮಹಾರಾಜ ಕಾಲೇಜಿನಲ್ಲಿ ಸೀನಿಯರ್ ಪ್ರೋಫೆಸರ್ ಆಗಿ ಕಾಲೇಜಿನಲ್ಲಿ ಕೆಲಸ ಮಾಡಿದ್ದು ಅವರ ಅದೃಷ್ಟವೇ ಅನಿಸುತ್ತೆ. ನಂತರ ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರರ್ ಆಗಿ ನೇಮಕಗೊಂಡರು. ವೃತ್ತಿಯ ಜೊತೆ ಕವನ ಸಾಹಿತ್ಯ ರಚನೆಗಳನ್ನು ಮುಂದುವರೆಸಿದರು. "ಮಂಗಳಾರತಿ" "ಉಡಿದಾರ", "ಇಬ್ಬನಿ ಆರತಿ" ಒಂದೇ ಸೂರಿನಡಿಯಲ್ಲಿ "ಬಾಲಕಾಂಡ" "ಚಿಲಿಪಿಲಿ" ಭಾಗ 1,2,3 ಹೀಗೆ ಹಲವು ಬರಹಗಳನ್ನು ನೋಡಬಹುದು.

ಇವರ ಸಾಹಿತ್ಯವನ್ನು ಗುರುತಿಸಿ 1982ರಲ್ಲಿ "ವರ್ಧಮಾನ" ಪ್ರಶಸ್ತಿ, 1989ರಲ್ಲಿ ಕರ್ನಾಟಕ ಸಾಹಿತ್ಯ ಆಕಾಡೆಮಿ ಪ್ರಶಸ್ತಿ, 1994ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1998 ಡಿ.ದೇವರಾಜು ಅರಸು ಪ್ರಶಸ್ತಿ, 1999ರಲ್ಲಿ ವಿಶ್ವಮಾನವ ಪ್ರಶಸ್ತಿ ಹಾಗೂ ಅವರ "ಯುಗ ಸಂಧ್ಯಾ" ಕೃತಿಗೆ 2002ರಲ್ಲಿ "ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ" ಮತ್ತು 2008ರಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಲಾಯಿತು.

ಇಷ್ಟೆಲ್ಲಾ ಪ್ರಶಸ್ತಿ ಸಿಕ್ಕಿದರೂ ಅವರು ಪ್ರಚಾರಕ್ಕೆ ಸಿಕ್ಕದೇ ಎಲೆಮರೆಕಾಯಂತೆ ಉಳಿದರು. ಅವರು ಕೊಡುಗೈ ದಾನಿಯಾಗಿದ್ದರು ಅಷ್ಟೇ ಸ್ವಾಭಿಮಾನಿಯೂ ಹೌದು.

ಉಡುಗೆಯಲ್ಲಿ ನಡೆ ನುಡಿಯಲ್ಲಿ ಸರಳ ಸಜ್ಜನ ಧೀಮಂತ ವ್ಯಕ್ತಿಯೆಂದು ಹೇಳುವಾಗ ಅವರಿಂದ ನಾನು ಕೇಳಿದ ಕೊನೆಯ ನುಡಿ ಎಚ್ಚರವಾಗಿರು.... ಎಚ್ಚರವಾಗಿರು.... ಎಚ್ಚರವಾಗಿರು.... ಏ ಮನವೇ ಮತ್ತು ನಾರಾಯಣ... ನಾರಾಯಣ... ಎಂಬ ಮಂತ್ರ ಸ್ಮರಣೆಯನ್ನು; ಅವರ ಆಶೀರ್ವಾದ ನನಗಿರಲಿ.

**– ಭಾರತಿ ಭಾಸ್ಕರ್ ಬೆಂಗಳೂರು –73**

## ಸುಜನಾ ಅವರಿಗೆ

• ಸಿ.ಪಿ.ಕೆ.

'ನವನವೋನ್ಮೇಷಶಾಲಿನಿಯಾದ ಚೇತನವೆ:
ಮತ್ತೊಂದು ಹೆಸರೆ ಸ್ವೋಪಜ್ಞತೆಗೆ, ಗುರುವರ್ಯ?
ಯಾರಿಂದ ಏನನೂ ಕೊಳ್ಳೆನೆನ್ನುವ ವೀರ
ವ್ರತಧಾರಿ! ಮಾತೆಲ್ಲ ಜೋತಿ, ಅಂತೆಯೆ ಬರಹ
ವಿದ್ಯುಲ್ಲತಾ ವಿಲಸಿತದ ರೀತಿ; ವಶ್ಯವಾಕ್;
'ಪದವಿಟ್ಟಳುಪದಗ್ಗಳಿಕೆ'! ಒಂದು ಕಡೆ ವ್ಯಾಸ,
ಮತ್ತೊಂದು ಕಡೆ ಕುಮಾರವ್ಯಾಸ, ಮಗುದೊಂದು ಕಡೆ
ಕುವೆಂಪು ಸುರಧೇನು ಸ್ತನ್ಯವ ಹೀರಿ ಧನ್ಯ ಸಂ –
ಪುಷ್ಟರಾದಿರಿ. ನನಗೆ, ನಿಮಗೆ ಋಣಸಂಬಂಧ
ಯಾವುದೋ! ನನಗು ಆ ಕ್ಷೀರದಲ್ಲಿ ಅಷ್ಟಿಷ್ಟು
ಕೊಟ್ಟೆನ್ನ ಚೇತನವನು ಬೆಳೆಸಿದಿರಿ. ಒಂದು ದಿನ
ಹೇಳಿದಿರಿ, "ನಿಮ್ಮ ಸಾಮರ್ಥ್ಯಕ್ಕೆ ಈಗುಂಟು
ನನ್ನ ಸಮ್ಮತಿ!" ಎಂದು. ನೀವಲ್ಲ ಪಾಂಡಿತ್ಯ
ಮೂಟೆ; ಅನವರತ ಉಕ್ಕುವ ಊಟೆ ನಿಮ್ಮ ಪರಿ.
ನಿಮಗಾರು ಸರಿ? ಶಿಷ್ಯರನು ಸೃಷ್ಟಿಸುವನು ಗುರು;
ಅಂತೆ ಗುರುವನು ಸೃಜಿಸಬಹುದು ಒಂದರ್ಥದಲಿ
ಶಿಷ್ಯ: ನೀವು ಕುವೆಂಪು ಶಿಷ್ಯರಲಿ ಮುಡಿಯ ಮಣಿ;
ಗಣಿ. 'ಉದಯ' ದ್ರಷ್ಟಾರ ಆಚಾರ್ಯ; 'ಸಂಧ್ಯಾ' ಕಾಣ್ಕೆ
ಶಿಷ್ಯನದು! ದಕ್ಷಿಣೇಶ್ವರ ವರಿಷ್ಠಾವತಾ –
ರ ತ್ರೀತರೇ, ಅದೊ ಗದಾಧರ ಶುಚಿಸ್ಮಿತ್ಸ!

CPK
#2265/19, ಭಾರತಿ
6ನೇ ಕ್ರಾಸ್. ವಿನಾಯಕ ನಗರ
ಮೈಸೂರು-12.

# ಸುಜನಾ : ಯುಗಸಂಧ್ಯಾದ ಜೀವಸೆಲೆ

"ಯುದ್ಧದಿಂದ ಸಿಗುವುದಾದರೂ ಏನು? ಬೂದಿ ಮತ್ತು ಕಣ್ಣೀರು..!" ಯುದ್ಧದಲ್ಲಿ ಗೆದ್ದವನಾಗಲಿ, ಸೋತವನಾಗಲಿ.. ಇಬ್ಬರೂ ದುಖಿಗಳೇ! ಇಬ್ಬರೂ ತಮ್ಮ ಬಂಧು-ಬಳಗ, ಗೆಳಯ-ಗೆಳತಿ, ಸಂಪತ್ತು-ಐಶ್ವರ್ಯ ಕಳೆದುಕೊಂಡವರೇ! ಹಾಗಾಗಿ ಯುದ್ಧಾ ನಂತರದ ನೋವು-ಸಂಕಟ, ದುಃಖ, ದುಮ್ಮಾನಗಳನ್ನು ಅಕ್ಷರಗಳಲ್ಲಿ ಸೆರೆಹಿಡಿಯಲು ಆಗುವುದಿಲ್ಲ. ಅಂತಹ ಪ್ರಯತ್ನ ಮಾಡಬೇಕೆಂದರೆ ದುಃಖಗಳನ್ನು ಗೆದ್ದು, ನಿರ್ವಿಕಾರ ಭಾವನೆಗಳನ್ನು ಹೊಂದಿ ಸಮಚಿತ್ತದಿಂದ ವಿಶ್ಲೇಷಣೆ ಮಾಡುವವರಾಗಿರಬೇಕು. ಅಂತಹ ಪ್ರಯತ್ನ ಕವಿ 'ಸುಜನಾ'ರಿಂದ ನಡೆದಿದೆ ಎಂದು ಹೇಳಿಕೊಳ್ಳುವುದೇ ಒಂದು ಹೆಮ್ಮೆಯ ವಿಚಾರ.

'ಮಹಾಭಾರತದ ಕತೆ ಎಲ್ಲರಿಗೂ ಗೊತ್ತು. ಆದರೆ ಯುದ್ಧಾ ನಂತರ ಏನೇನಾಯಿತು? ಎಂದು ಕೇಳಿ, ಉತ್ತರ ಅಸ್ಪಷ್ಟ! ಈ ಅಸ್ಪಷ್ಟತೆಯನ್ನು ಹೋಗಲಾಡಿಸಿ, ಮಹಾಭಾರತದ ಯುದ್ಧ ಗೆದ್ದವರು ಮತ್ತು ಸೋತವರು ಏನಾದರು, ಹೇಗಿದ್ದರು, ಅವರ 'ಅವಸ್ಥೆ' ಹೇಗಿತ್ತು, ಅವರ ಅಂತ್ಯ ಯಾವ ರೀತಿಯಲ್ಲಾಯಿತು.. ಎಂಬ ಬಗ್ಗೆ ಸವಿವರವಾಗಿ ದಾಖಲಿಸಿರುವ ಕತೆ, ಕಾವ್ಯ ಕನ್ನಡ ಸಾಹಿತ್ಯದಲ್ಲಿ ಬಂದಿರಲಿಲ್ಲ, ಅದರಲ್ಲೂ ಮಹಾಕಾವ್ಯವಂತೂ ಇಲ್ಲವೇ ಇಲ್ಲ! ಈ ಕೊರತೆಯನ್ನು ನೀಗಿಸಿದವರು 'ಸುಜನಾ' ಎಂಬ 'ಕಾವ್ಯನಾಮ' ದಿಂದ ಹೆಸರಾದ ಎಸ್.ಜೆ.ನಾರಾಯಣಶೆಟ್ಟರು.

1999ರಲ್ಲಿ ಪ್ರಕಟವಾದ 'ಯುಗಸಂಧ್ಯಾ' ಮಹಾಕಾವ್ಯ ಕನ್ನಡ ಸಾಹಿತ್ಯವನ್ನು ಸಂಪದ್ಭರಿತಗೊಳಿಸಿದ ಕೃತಿ. ಹಳಗನ್ನಡದಲ್ಲಾಗಲಿ ಹೊಸಗನ್ನಡದಲ್ಲಾಗಲಿ ಮಹಾಭಾರತದ ಯುದ್ಧೋತ್ತರ ಕಥಾ ವಸ್ತುವಿನ ಕಾವ್ಯವಿರಲಿಲ್ಲ. ಕುಮಾರವ್ಯಾಸರ ಕಾವ್ಯ ಯುದ್ದಕ್ಕೆ ಅಂತ್ಯಗೊಂಡರೆ, ಲಕ್ಷ್ಮೀಶನ ಜೈಮಿನಿ ಭಾರತ ಅಶ್ವಮೇಧ ಯಾಗಕ್ಕೆ ಮುಕ್ತಾಯಗೊಂಡಿತ್ತು. ಯುಗ ಸಂಧ್ಯಾ ಈ ಎರಡರ ಕೊರತೆ ನಿವಾರಿಸಿ ಮಹಾಯುದ್ಧದ ನಂತರದ ವಾಸ್ತವತೆಯನ್ನು ತೆರೆದಿಟ್ಟ ಮಹಾಕಾವ್ಯ..! ಭಾರತೀಯ ಸಾಹಿತ್ಯದಲ್ಲಿ ವಿಶಿಷ್ಟವಾದ ಈ ಕೃತಿ 2002ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವವನ್ನು ಪಡೆದುಕೊಂಡಿದೆ.

ಇಂತಹ 'ಮಹಾನ್ ಕಾವ್ಯ'ವನ್ನು ಬರೆದವರು ಬೇರ್‍ಯಾರೂ ಅಲ್ಲ. ಗಂಡು ಮೆಟ್ಟಿನ ನೆಲ ಎಂದೇ ಖ್ಯಾತವಾದ ನಮ್ಮ ಮಂಡ್ಯ ಜಿಲ್ಲೆಯವರು. ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದವರಾದ ಸುಜನಾ ಇವರು ಕನ್ನಡ ಸಾಹಿತ್ಯ ಲೋಕಕ್ಕೆ ಮರೆಯಲಾಗದ ಕೊಡುಗೆ ನೀಡುವ ಮೂಲಕ ಹೆಸರಾಗಿದ್ದಾರೆ.

**ಜನನ–ಶಿಕ್ಷಣ:**

ಕೆ.ಆರ್.ಪೇಟೆಗೆ ಸಮೀಪದ ಹೊಸಹೊಳಲು ಗ್ರಾಮದಲ್ಲಿ 1930 ಏಪ್ರಿಲ್ 13ರಂದು ಜನಿಸಿದ ಇವರು ಚಿಕ್ಕಂದಿನಿಂದಲೂ ಕಾವ್ಯಾಕರ್ಷಣೆ ಇದ್ದ ಬಾಲಕ. ಇವರ ತಂದೆ ಮೂಲೆ ಮನೆ ಸುಬ್ಬಶೆಟ್ಟರು ಎಂದೇ ಹೆಸರಾದ ಸುಬ್ಬಶೆಟ್ಟರು. ತಾಯಿ ಗೌರಮ್ಮ. ಸುಜನಾರವರ ಬಾಲ್ಯ ಶಿಕ್ಷಣ ಸ್ವಗ್ರಾಮದಲ್ಲಿ ಹೊಸಹೊಳಲು ಗ್ರಾಮದಲ್ಲಿ ನಡೆಯಿತು. ನಂತರ ಕೆ.ಆರ್.ಪೇಟೆ, ಹೊಳೆನರಸೀಪುರ ಗ್ರಾಮದಲ್ಲಿ ನಡೆಯಿತು. ಬೆಂಗಳೂರು ವಿ.ವಿ.ಯಲ್ಲಿ ಪದವಿ ಪಡೆದ ಅವರು ಸ್ನಾತಕೋತ್ತರ ಶಿಕ್ಷಣವನ್ನು ಮೈಸೂರು ವಿ.ವಿ.ಯಲ್ಲಿ ಪೂರೈಸಿದರು. ರಾಷ್ಟ್ರಕವಿ ಕುವೆಂಪುರವರ ನೆಚ್ಚಿನ ಶಿಷ್ಯರಾಗಿದ್ದ ಅವರು 1954ರಲ್ಲಿ ಮೈಸೂರಿನ ಯುವರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯ ಆರಂಭಿಸಿದರು.

**ವೃತ್ತಿ – ಬದುಕಿನಲ್ಲಿ ಏರಿಳಿತ :**

ವೃತ್ತಿ ಬದುಕಿನಲ್ಲಿ ಏರಿಳಿತಗಳನ್ನು ಅನುಭವಿಸಿದ 'ಸುಜನಾ'ರವರು, ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ಹುದ್ದೆ ಕುಲಸಚಿವರಾಗಿ (ರಿಜಿಸ್ಟ್ರಾರ್) ಕಾರ್ಯ ನಿರ್ವಹಿಸಿ ಮನ್ನಣೆಗಳಿದ್ದಕ್ಕಿಂತ ಅಧ್ಯಾಪಕನಾಗಿ, ಪ್ರಾಂಶುಪಾಲನಾಗಿ ಗಳಿಸಿದ ಯಶಸ್ಸೇ ದೊಡ್ಡದು! ಇವತ್ತಿಗೂ ಯುವರಾಜ ಕಾಲೇಜು. 'ಸುಜನಾ' ರಂತಹ ಅಹಂ ರಹಿತ ಪ್ರಾಂಶುಪಾಲರನ್ನು ಕಂಡಿಲ್ಲ, ಕಾಣುವುದೂ ಇಲ್ಲ. ಪಾರದರ್ಶಕ ನಡೆ, ನುಡಿಯ, ಶುದ್ಧ ಹಸ್ತದ 'ಸುಜನಾ' ಮೈಸೂರು ವಿ.ವಿ.ಗೆ ಘನತೆ ತಂದುಕೊಟ್ಟವರು. ತಮ್ಮ ಗುರು ರಾಷ್ಟ್ರಕವಿ ಕುವೆಂಪುರವರ ಜೀವನ ತತ್ವ, ಆದರ್ಶಗಳಿಗೆ ಜೋತುಬಿದ್ದು, ಅದರಂತೆ ನಡೆದುಕೊಂಡವರು. ವೈಜ್ಞಾನಿಕ, ಮನೋಧರ್ಮವನ್ನು ರೂಪಿಸಿಕೊಂಡ ಅವರು ವೈಚಾರಿಕತೆಯ ಬೆನ್ನು ಹತ್ತಿ ಸಾಹಿತ್ಯಕ್ಕೆ ಹೊಸ ಶಕ್ತಿ ತಂದುಕೊಟ್ಟರು. ತಮಗೆ ವಹಿಸಿಕೊಟ್ಟ ವೃತ್ತಿಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿ ವಿದ್ಯಾರ್ಥಿಗಳ ಮೆಚ್ಚುಗೆ ಗಳಿಸಿದವರು. ವೃತ್ತಿಯಲ್ಲಿ – ಬದುಕಿನಲ್ಲಿ ಎಂತಹದೇ ಸಂಕಟ, ಏರು ಪೇರು ಬಂದರೂ ಧೃತಿಗೆಡದೆ ಮುಂದುವರಿದವರು.

**ಸಾಹಿತ್ಯದೊಂದಿಗೆ ನಿತ್ಯ ನಂಟು:**

ಸುಪ್ತ ಲೋಕದ ಸಾಹಿತ್ಯದ ಜೊತೆಗೆ, ನಿತ್ಯ ಸಂಗಾತಿಗಾಗಿ ಬಂದ ಸದ್ಯದ ಸಂಗತಿಗಳೊಂದಿಗೆ ಸೆಣಸಾಟ ನೆಡೆಸಿದ ಅವರು ಹೊಸ ಕಾವ್ಯ ಪರಂಪರೆಗೆ ನಾಂದಿಯಾದರು. ಅವರ ಸಾಹಿತ್ಯ ಯಾತ್ರೆ ಅತ್ಯಗತ್ಯ. ಕವನ ಕ್ಷೇತ್ರ ಅವರ ಮೆಚ್ಚಿನ ಕ್ಷೇತ್ರ 'ಮಂಗಳಾರತಿ' ಇವರ ಮೊದಲ ಕವನ ಸಂಕಲನ, 'ನಾಣ್ಯಯಾತ್ರೆ' ನಂತರದ್ದು. ಆನಂತರ ಹರಿದು ಬಂದವು 'ಚಿಲಿಪಿಲಿ', ಸೊನ್ನೆಯೆರಡರ ನಡುವೆ, ಉಡಿದಾರ, ಇಬ್ಬನಿ ಆರತಿ, ಕಣಗಳು.. ಎಂಬ ಕವನ ಸಂಕಲನಗಳು. ರಾಮಾಯಣ ಬಾಲಕಾಂಡ, ಹೃದಯ ಸಂವಾದ, ಪರಂಪರೆ ಮತ್ತು ಕುವೆಂಪು, ಪುತಿನ ಸಾಹಿತ್ಯದ ಹೊಳಹುಗಳು.. ಇತ್ಯಾದಿ.

ಅನುವಾದಿತ ಕೃತಿಯಾದ 'ಏಜಾಕ್ಸ್' ಹೆಸರು ತಂದುಕೊಟ್ಟರೆ ಸಂಪಾದಿತ 'ಕರ್ನಾಟಕ ಭಾರತ ಕಥಾ ಮಂಜರಿ' ಪ್ರಸಿದ್ಧತೆಗೆ ಕಾರಣವಾಯಿತು. ನಂತರ ಅವರ ಮಹಾನ್ ಕಾವ್ಯ 'ಯುಗಸಂಧ್ಯಾ' ಪ್ರಮುಖ ಸಾಹಿತಿಗಳ ಪಟ್ಟಿಯಲ್ಲಿ ಅವರ ಹೆಸರನ್ನು ಅಜರಾಮರಗೊಳಿಸಿತು.

**ಹತ್ತು ವರ್ಷಗಳಲ್ಲಿ ಹರಿದು ಬಂದ ಮಹಾಧಾರೆ :**

'ಯುಗಸಂಧ್ಯಾ' ಮಹಾಕಾವ್ಯ ಹತ್ತು ವರ್ಷಗಳಲ್ಲಿ ಹರಿದು ಬಂದ ಮಹಾಧಾರೆ 425 ಪುಟಗಳ ಈ ಕೃತಿ ಸರಳ ರಗಳೆಯ ಛಂದಸ್ಸನ್ನು ಬಳಸಿಕೊಂಡಿದೆ. ಇದರ ಕಾವ್ಯ ಇಳಿಜಾರಿನಲ್ಲಿ ಸಾಗುವ ನದಿಯ ಗಾಂಭೀರ್ಯ, ಭೋರ್ಗತೆ, ತಿಳಿನೀರಿನ ಸಾರ..ವನ್ನು ಅಡಕಗೊಂಡಿದೆ. ಸಲೀಸಾದ ಓಟ ಕಾವ್ಯದಲ್ಲಿದೆ, ಭಾಷೆ ಕ್ಲಿಷ್ಟವೆನಿಸದೆ, ಓದುವವರ ಮನಸ್ಸು ಗೆಲ್ಲುತ್ತದೆ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ 2003ರಲ್ಲಿ ಬಂದಾಗ, ಇಡೀ ನಾಡಿನ ಸಾಹಿತ್ಯಾಸಕ್ತರು ಸಂತಸಪಟ್ಟರು. 1999ರಲ್ಲಿ ಪ್ರಕಟವಾದ ಈ ಕೃತಿ ಯುದ್ಧೋತ್ತರ ಮಹಾಭಾರತದ ಚಿತ್ರಣವನ್ನು ಕಣ್ಣಿಗೆ ಕಟ್ಟಿಕೊಡುತ್ತದೆ. ರಚನೆಗೆ ಒಂದು ದಶಕ ತೆಗೆದುಕೊಂಡ ಈ ಕೃತಿಯು ತಡವಾಗಲು ಮುಖ್ಯವಾಗಿ ಸುಜನಾರವರಿಗೆ ಪಾರ್ಕಿಸನ್ ಬೇನೆ. ಮಗಳು ಶುಚಿಸ್ಮಿತಾ ತಂದೆ ಹೇಳಿದ್ದನ್ನು ಬರೆದು ಮಹಾಕಾವ್ಯ ಹೊರಬರಲು ಕಾರಣರಾದರು. ಹೀಗಾಗಿ ಸುಜನಾ ತಮ್ಮ ಮಹಾಕಾವ್ಯದಲ್ಲಿ

"ವ್ಯಾಸ ಕಥಾ ತರಂಗಣಿಯ ಸಲಿಲ ಪ್ರವಹಣಕೆ
ಒದಗಿ ಬಂದಳು ಸುತೆ ಶುಚಿಸ್ಮಿತೆ ಪ್ರಣಾಳ ಕೃಪೆಯಾಗಿ
ಗುರುಕೃಪಾ ರೂಪದಲಿ, ನಮಿಸುವೆನು ದೈವದಿಮ್ಮೊಗದ ಕೃಪೆಗೆ" (ಪುಟ: 424)

ಎಂದು ಬರೆಯುವ ಮೂಲಕ ಮಗಳ ಕೊಡುಗೆಯನ್ನು ದಾಖಲಿಸಿದ್ದಾರೆ. ಯುಗಸಂಧ್ಯಾ ಮಹಾಕಾವ್ಯ ರಸವತ್ತಾಗಿದೆ. ಕಾವ್ಯವು ಕಥೆ ಹೇಳುವ ರೀತಿ ಆಕರ್ಷಕವಾಗಿದೆ. ಭಾಷೆ ಕನ್ನಡವಾದರೂ ಹಳೆ ಕನ್ನಡ ಕಾವ್ಯಗಳ ಜೊತೆ ತನ್ನ ಸಾನಿಧ್ಯವನ್ನು ಇಟ್ಟುಕೊಂಡರು.

ಯುದ್ಧೋತ್ತರ ಕತೆಯಾದ ಯುಗಸಂಧ್ಯಾ ಪಾಂಡವರ ಗೆಲುವಿನಿಂದ ಆರಂಭವಾಗುತ್ತದೆ. ಆದರೆ ಆ ಗೆಲುವು ಸಂತಸವಾಗಿರಲಿಲ್ಲ. ಸಾವಿನ ಬೇಗೆ ಗೆದ್ದವರನ್ನು ಸೋತವರನ್ನು ಸಮಾನವಾಗಿ ಕಾಡುತ್ತದೆ. ಈ ಕಾವ್ಯ ವ್ಯಾಸಭಾರತದಲ್ಲಿ ಹರಡಿಕೊಂಡಿರುವ ಚಿತ್ರಣಗಳನ್ನು ಮತ್ತೆ ಮತ್ತೆ ಬಳಸಿಕೊಂಡಿದೆ.

ಪರೀಕ್ಷಿತರಾಜ ಸರ್ಪದಿಂದ ಸತ್ತ ನಂತರ ಆತನ ಮಗ ರಾಜ ಜನಮೇಜಯನಿಗೆ ಪಟ್ಟಾಭಿಷೇಕವಾಗುತ್ತದೆ. ತನ್ನ ತಂದೆಯ ಸಾವಿಗೆ ಕಾರಣವಾದ ಇಡೀ ನಾಗ(ಸರ್ಪ) ಕುಲವನ್ನೇ ನಾಶಮಾಡಲು ಜನಮೇಜಯ ಮಹಾರಾಜ ಸರ್ಪಯಜ್ಞ ಮಾಡುತ್ತಾನೆ. ಆನಂತರ ಆದ ಪರಿಣಾಮ ಭೀಕರ, ಪರಿಸರ ಅಸಮತೋಲನವಾಗಿ ದುಷ್ಪರಿಣಾಮಗಳು ಆರಂಭವಾಗುತ್ತದೆ. ಕವಿ ಸುಜನಾ ಇದನ್ನು ಸೊಗಸಾಗಿ ಕಾವ್ಯದಲ್ಲಿ ಹೀಗೆ ಹೇಳಿದ್ದಾರೆ.

ಸರ್ವಯಜ್ಞದ ಹರ್ಷದಲಿ ನೀ ಕೊಲೆಸೆ ನಾಗಕುಲವೆಲ್ಲವನು
ಮೂಷಕಕುಲ ವಿಜೃಂಬಿಸಿತು.
ಧೂಳುಗೆಡುವಿತು ಜನದ ಜೀವನವ ಸಕಲವನು
ಕಡೆಗೆ ಸತ್ತರು ದುರ್ನಾತವಾದರು..!!

ಎಂದು ತಿಳಿಸುವ ಮೂಲಕ ಪರಿಸರ ಅಸಮತೋಲನಕೆ ನಾಗಯಜ್ಞ ಕಾರಣವಾಯಿತು. ಪರಿಣಾಮ ಮೂಷಕ ಕುಲದಿಂದ ಆಹಾರ ದವಸಧಾನ್ಯ ಹಾಳಾಯಿತು. ಆನರು ಮೂಷಕಗಳ ಮಾರಣ ಹೋಮಕೆ ಇಳೀದರು. ನಾನಾ ಕಾಯಿಲೆಗಳು ಬಂದು ಜನ–ಜಾನುವಾರು ದುರ್ನಾತವಾದರು ಎಂದು ತಿಳಿಸುವ ಮೂಲಕ ಆದ ಪರಿಣಾಮ, ತಿಳಿಸಿ ಪರಿಸರ ಸಂರಕ್ಷಣೆ ಅತೀ ಮುಖ್ಯ ಎಂಬುದನ್ನು ಪುರಾತನವಾದ ವಿಚಾರವನ್ನು ನವನಾವಿನ್ಯತೆಯಿಂದ ಹೇಳುವ ಮೂಲಕ ಪರಿಸರ ಪಾಠವನ್ನು ಕವಿ ಮಾಡಿದ್ದಾರೆ.

ಯುದ್ಧಾನಂತರ ಅಳಿದುಳಿದಿರುವ ಅಶ್ವತ್ಥಾಮ, ಗಾಂಧಾರಿ, ವಿಧುರ, ಧೃತರಾಷ್ಟ್ರ, ಭೀಷ್ಮ, ಪಂಚ ಪಾಂಡವರು, ದ್ರೌಪದಿ, ಸುಭದ್ರೆ, ವ್ಯಾಸರು.. ಇತರರುಗಳ ಆತ್ಮಾವಲೋಕನ, ಸುಭಾಷಣೆಗಳು ಹಲವು ಮುಖಗಳನ್ನು ಸಂಚಯಿಸುತ್ತವೆ. ಚಿತ್ರಾಂಗಧೆಯ ಕತೆ, ಅಶ್ವಮೇಧ ಕತೆ, ಜಯದ್ರಥನ ಮಗನ ಕತೆ.. ಹೀಗೆ ಹಲವು ಉಪಕತೆಗಳು ಬಂದು ಹೋಗುತ್ತವೆ.

ಯುಗಸಂಧ್ಯಾ ಮಹಾಕಾವ್ಯದಲ್ಲಿ ಒಟ್ಟು 48 ಅಧ್ಯಾಯಗಳಿದ್ದು. ಸರ್ಪಯಜ್ಞದಿಂದ ಆರಂಭವಾಗಿ, ಅಶ್ವತ್ಥಾಮ ಗರ್ವಭಂಗ, ಶ್ರೀ ಕೃಷ್ಣ ಗಾಂಧಾರಿಯರ ಭೇಟಿ. ವಿಧುರ ದೃತರಾಷ್ಟ್ರ, ವ್ಯಾಸ–ಅಶ್ವತ್ಥಾಮರ ಭೇಟಿ, ಭೀಷ್ಮ–ಅರ್ಜುನ. ಕೃಷ್ಣ–ಕುಂತಿ, ಕೃಷ್ಣ–ಯುದಿಷ್ಟಿರ ಮಾತುಕತೆ ಪರೀಕ್ಷತನ ಜನನ, ಬಬ್ರುವಾಹನ ಪ್ರಸಂಗ, ಚಾರ್ವಕನ ಕತೆ, ಭೀಮಾರ್ಜುನರ ವಾಗ್ವಾಧ, ಅಭಿಮನ್ಯುವಿನ ಶಿಶು, ವಾನಪ್ರಸ್ಥಾಶ್ರಮ ದುರಂತ, ಸ್ವರ್ಗಾರೋಹಣ ಮುಂತಾದ ಅಧ್ಯಾಯದೊಂದಿಗೆ ಮುಕ್ತಾಯವಾಗುತ್ತದೆ. ಯುಗಸಂಧ್ಯಾ ಮಹಾಕಾವ್ಯವು ಯುದ್ಧದ ಘೋರಗಳನ್ನು ತಿಳಿಸುತ್ತದೆಯಲ್ಲದೆ, ಯುದ್ಧ ವಿರೋಧಿ ಧ್ವನಿಯೂ ಅಲ್ಲಿ ಎದ್ದು ಕಾಣುತ್ತದೆ.

ಕವಿ ಹೇಳುವ “ಮರೆಯದಿರು ಯಜ್ಞವಿದು ಸ್ನೇಹಮರ್ಧಕವೆಂಬುದನು” ಎಂಬ ಮಾತು ಅಶ್ವಮೇಧ ಯಾಗ ಅಧ್ಯಾಯಕ್ಕೆ ಮೆರುಗು ತಂದಿದ್ದರೆ

ಯುದ್ಧ ಮುಗಿದರೂ ಕುರುಕ್ಷೇತ್ರದಲ್ಲಿ
ಹಳ್ಳಿಯಲಿ ಹೊತ್ತಿದ ಉರಿ ಆರಿಲ್ಲ.
ಊರೂರು ಕುರುಭೂಮಿಯಾಗಿದೆ!

ಎಂಬ ಮಾತು ಸಮಕಾಲೀನ ಪ್ರಪಂಚಕ್ಕೂ ಅನ್ವಯಸುತ್ತದೆಂಬುದು ಗಮನಾರ್ಹವಾದುದು

ಈ ಕಾವ್ಯ ವ್ಯಾಸಭಾರತದ ಹಲವೆಡೆ ಹರಡಿಕೊಂಡಿರುವ ಚಿತ್ರಣಗಳನ್ನು ಬಳಸಿಕೊಳ್ಳುತ್ತದೆ. ಕೆಲ ದೃಷ್ಯಗಳನ್ನು ಮಾರ್ಪಾಡುಗೊಳಿಸಲಾಗಿದೆ. ಇನ್ನು ಕೆಲವು ಹೊಸದಾಗಿ ಸೇರಿವೆ.

ಮನೆಗಿಚ್ಚು ನಾಡ ತಬ್ಬಿತ್ತು ಬುದ್ಧಿ
ಬುದ್ಧ ಹೇಳುವ ಜನರೆ
ರುಂಡ ಬೆಂಡಾಡಿದರು!

ಎಂಬ ಶ್ರೀ ಸಾಮಾನ್ಯನ ಮಾತು ಈ ಹೊತ್ತಿಗೂ ಅನ್ವಯಿಸುವಂತಹದ್ದೇ ಆಗಿದೆ. ದೇಶ ಆಳುವವರೆ ಸ್ವಾರ್ಥ ಇಡೀ ಜನ ಸಮುದಾಯವನ್ನೇ ಹೇಗೆ ಸಂಕಷ್ಟಕ್ಕೆ ಸಿಲುಕುವಂತೆ ಮಾಡುತ್ತದೆಂಬುದನ್ನು 'ಯುಗಸಂಧ್ಯಾ' ನಿರೂಪಿಸುತ್ತದೆ. ಕಾವ್ಯದಲ್ಲಿ ಬರುವ ಮದ್ಯದ ಅಮಲು, ಯಾದವರ ಪತನ, ದ್ವಾರಕೆಯ ಮುಳುಗಡೆ ಪ್ರಸಂಗ 'ಸ್ವರ್ಣಮಯಿ ಸ್ವಪ್ನನಿದ್ರೆ'.. ಪ್ರಸಂಗಗಳು ದುರಂತವನ್ನು ತೆರೆದಿರಿಸುತ್ತವೆ. "ಕೊಂದರೊಬ್ಬನನು ನಂದಿ ಹೋಗದ ಸತ್ಯ, ನಡೆದ ತೀರಬೇಕು ಅವರವರ ದಾರಿಗಳವರೆಗೆ.. ಎಂಬ ಸಾಲುಗಳ ಮಹತ್ವವನ್ನು ತಿಳಿಯಬೇಕಾದರೆ ಮಹಾಕಾವ್ಯ ಓದಿದಾಗಲೇ ಅರ್ಥವಾಗುವುದು.

ಮನುಷ್ಯ ಕಷ್ಟಕಾಲದಲ್ಲಿದ್ದಾಗ ಸಂಯಮಿಯಾಗಿರುತ್ತಾನೆ. ಗೆಲುವು ಪಡೆಯಲು ಹೆಣಗುತ್ತಾನೆ. ಸುಖ ಬಂದ ಮೇಲೆ ಮನುಷ್ಯ ಅಂಕೆ ತಪ್ಪಿ ಬಾಳಿನ ಹಾದಿಯಲ್ಲಿ ಮುಗ್ಗರಿಸತ್ತಾನೆಂಬ ಸಂದೇಶ ಈ ಕಾವ್ಯದಲ್ಲಿದೆ, ವ್ಯಾಸರ ಮಹಾಭಾರತವನ್ನು ಸೊಗಸಾಗಿ ವಿಮರ್ಶಿಸಿರುವ ಸುಜನಾರವರು "ಅವರು ಯಾರೂ ಕಾಯಲಿಲ್ಲ" ಎಂಬ ವಿಮರ್ಶೆಯ ಮಾತನ್ನು ಅಲ್ಲಲ್ಲಿ ಬಳಸುತ್ತಾರೆ. ಕಾಲವೂ ಅಷ್ಟೆ ಯಾರನ್ನೂ ಕಾಯುವುದಿಲ್ಲ. ಮಹಾಭಾರತದ ಪಾತ್ರಗಳು ಕಾಯುವ ತಾಳ್ಮೆ ತೋರಿದ್ದಾರೆ 'ಜಯ ಭಾರತದ' ದಿಕ್ಕು ಬದಲಾಗುತ್ತಿತ್ತೇನೋ!

"ನೂರು ನಾಲಿಗೆಯುಂಟು ಎದೆಗೆ ಮೌನದಲಿ
ಕೋಟಿ ಕಣ್ಣುಗಳುಂಟು ನಭಗೆ ಇರುಳಿನಲಿ!"

ಎಂದಿದ್ದ ಸುಜನಾರವರು ಇರುಳಿನಲ್ಲಿದ್ದ ಯುದ್ಧೋತ್ತರ ಮಹಾಭಾರತದ ಕತೆಯನ್ನು ನಾಡಿನ ಜನತೆಗೆ ನೀಡುವ ಮೂಲಕ ಮತ್ತೊಂದು ಕಣ್ಣು ತೆರೆಸಿದವರು.

'ಸುಜನಾ'ರವರ ಸಾಹಿತ್ಯ ಸಾಧನೆಗಳು ಅವರಿಗೆ ಹತ್ತು ಹಲವು ಪ್ರಶಸ್ತಿ ತಂದುಕೊಟ್ಟಿದೆ. 'ಹೃದಯ ಸಂವಾದ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಬಂದಿದೆ. ವರ್ಧಮಾನ ಪ್ರಶಸ್ತಿ, ವಿಶ್ವಮಾನ ಪ್ರಶಸ್ತಿ, ದೇವರಾಜು ಅರಸು ಪ್ರಶಸ್ತಿ, ಬಿ.ಎಂ.ಶ್ರೀ ಪ್ರಶಸ್ತಿ ರಾಜ್ಯೋತ್ಸವ ಪ್ರಶಸ್ತಿ, ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಗೌರವ (ಪಾಂಡವರಪರದಲ್ಲಿ ಜರುಗಿದ 5ನೇ ಸಮ್ಮೇಳನ). ಹೀಗೆ ಅವರಿಗೆ ಪ್ರಶಸ್ತಿ ಗೌರವ ಸನ್ಮಾನ ಅವರನ್ನು ಹುಡುಕಿಕೊಂಡು ಬಂದಿವೆ. ಹೀಗೆ ಸಮಕಾಲಿನ ಸಾಹಿತ್ಯ ಕ್ಷೇತ್ರದಲ್ಲಿ 'ಸುಜನಾ' ಧೃವತಾರೆಯಂತೆ ಕಂಗೊಳಿಸುತ್ತಾರೆ. ಮಂಡ್ಯ ಜಿಲ್ಲೆಯ ಸಜ್ಜನಿತೆಯ ಕವಿಗಳಾದ ಪು.ತಿ.ನ, "ತಬ್ಬಲಿ ಮಗುವಿನ ಮುಂದೆ ನಿನ್ನ ಮಗುವನ್ನು ಮುದ್ದಿಸಬೇಡ.. ಎಂಬ ಮಾತಿಗೆ ಕಟ್ಟು ಬಿದ್ದ 'ಸುಜನಾ' ಕೆ.ಆರ್.ಪೇಟೆ ತಾಲ್ಲೂಕಿನ ಜನತೆಯ ಬಾವನೆಗಳ ಬಿಂಬವಾಗಿದ್ದಾರೆಂದರೆ

ತಪ್ಪಾಗಲಾರದು. ಯಾವುದೇ ಕವಿಯ ಕಾವ್ಯವನ್ನು ತೆಗೆದುಕೊಂಡರೂ ಅದನ್ನು ತಲಸ್ಪರ್ಶಿಯಾಗಿ ವಿವೇಚಿಸುವುದು ಅವರ ಓದಿನ ಗುರಿಯಾಗಿತ್ತು. ಹಾಗಾಗಿ ಸುಜನಾ ಅವರದು ತಣ್ಣನೆಯ ಬರವಣಿಗೆ, ಬಡಿದಬ್ಬಿಸುವಂತಹದಲ್ಲ. ಓದುತ್ತಿದ್ದರೆ ಮತ್ತೊಮ್ಮೆ ಓದಬೇಕೆನಸುವ ತೀರ್ವತೆ ಇರುವ ಬರವಣಿಗೆ. ಹಾಗೂ ಅವರ ಕವನಗಳು ವಿಮರ್ಶೆಗಳು, ಲೇಖನಗಳು ಸದಾ ಕಾಡುವಂತಹವುಗಳಾಗಿವೆ. ಅವರೇ ಹೇಳಿದಂತೆ

ನನ್ನ ಗತಿ ಬೇರೆ ನಿನ್ನ ಗತಿ ಬೇರೆ
ಅಂತೆ ಮತಿ ಬೇರೆ ಬೇರೆ
ಆದರೂ ಯಾವುದೋ ಗಂಟು
ಕಟ್ಟಿಹುವುದು ನಮ್ಮನು ಮೂಲದಲಿ!

ಎಂಬ ಮಾತು 'ಸುಜನಾ' ಅವರೊಳಗಿದ್ದ' ಮನುಷ್ಯ ಪ್ರೇಮವನು ಅನಾವರಣಗೊಳಿಸುತ್ತದೆ

ಇಂತಹ ಮಹಾಕವಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಪ್ರಶಸ್ತಿ ಬಂದಾಗ ಅವರನ್ನು ಕಾಣಲು ಮೈಸೂರಿನ ಅವರ ಮನೆಗೆ ಗೆಳೆಯರೊಂದಿಗೆ ಹೋದಾಗ ಅವರು ಹೇಳಿದ್ದ ಮಾತು ಮನುಷ್ಯ ಭತ್ತದ ತೆನೆಯಂತಿರಬೇಕು. ತನ್ನ ಉಳಿವಿಗೆ ಆಸರೆಯಾದ ಭೂಮಿಗೆ ಕೃತಜ್ಞರಾಗಿರುವಂತೆ ನಾವು ಸಮಾಜಕ್ಕೆ ಕೃತಜ್ಞರಾಗಿರಬೇಕೆಂಬುದು. ಹೇಮಗಿರಿಯಲ್ಲಿ ನಡೆದ ಕವಿಗೋಷ್ಟಿಗೆ ಬಂದಿದ್ದ ಅವರು ನನ್ನ ಪರಿಸರದ ಮೇಲಿನ ಕವಿತೆ ಕೇಳಿಸಿಕೊಂಡು ಬೆನ್ನುತಟ್ಟಿದ್ದರು. ಮಂಡ್ಯದ ಜಾಗೃತ ಅಂಕಣಕಾರರ ಬಳಗದ ವಾರ್ಷಿಕ ಪ್ರಶಸ್ತಿಗೆ ಭಾಜನ–ರಾಗಿದ್ದ ಅವರನ್ನು ಮಂಡ್ಯಕ್ಕೆ ಕಾರಿನಲ್ಲಿ ಕರೆದುಕೊಂಡು ಹೋಗಿದ್ದ ನೆನಪು ಹಸಿರಾಗಿದೆ.

ಯುಗಸಂಧ್ಯಾಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಅವರ ಹುಟ್ಟೂರಿನಲ್ಲಿ ನಡೆದ ಸನ್ಮಾನದ ದಿನ ಗ್ರಾಮದ ರಾಜಬೀದಿಯಲಿ ಮೆರವಣಿಗೆ ಮಾಡಿ ಜೈಕಾರ ಹಾಕಿದಾಗ ಅವರ ಕಣ್ಣಂಚಿನಲಿ ಮೂಡಿ ಬಂದ ಆನಂದಭಾಷ್ಪ ಸದಾ ನೆನಪಾಗುತ್ತಿರುತ್ತದೆ. ಮತ್ತಷ್ಟು ಮೊಗದಷ್ಟು ಬರೆಯಬೇಕೆಂಬ ಅವರ ಹಂಬಲಕ್ಕೆ ಕಾಲ ಇನ್ನಷ್ಟು ಅವಕಾಶ ನೀಡಬಹುದಿತ್ತು. ಆದರೆ ಅದು ಆಗದೇ ಹೋದುದ್ದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಅವರನ್ನು ನೋಡಬೇಕೆಂಬ ಆಸೆ ಆಸೆಯಾಗಿಯೇ ಉಳಿದುಹೋಯಿತು ಸುಜನಾ ಚಿರಾಯುವಾಗಲಿ, ಸದಾ ಮನದಂಗಳದಲ್ಲಿರಲಿ.

– **ಬಲ್ಲೇನಹಳ್ಳಿ ಮಂಜುನಾಥ್**
ರಾಜ್ಯಶಾಸ್ತ್ರ ಉಪನ್ಯಾಸಕರು,
ತೆಂಡೆಕೆರೆ ಮೊ.9448740126

# ಸುಜನಾ : ಒಂದು ಸವಿನೆನಪು

'ಸುಜನಾ' ಇದು ಪ್ರೊ.ಎಸ್.ನಾರಾಯಣಶೆಟ್ಟಿಯವರ ಕಾವ್ಯನಾಮ. ಪರಿಚಿತವಾದ ನಾಮವಾದರೂ, ವ್ಯಕ್ತಿ ಬಹುತೇಕರಿಗೆ ಅಪರಿಚಿತವಾದವರು. ಸುಜನಾ, ಮಂಡ್ಯಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದಲ್ಲಿ ದಿನಾಂಕ: 13.04.1930ರಲ್ಲಿ ಹೊಸಹೊಳಲು ಗ್ರಾಮದ ಸುಬ್ಬಶೆಟ್ಟಿ–ಗೌರಮ್ಮನವರ ನಾಲ್ಕನೆ ಮಗುವಾಗಿ ಜನಿಸಿದವರು. ಹನ್ನೊಂದು ಮಕ್ಕಳ ತುಂಬು ಕುಟುಂಬದಲ್ಲಿ ಅಕ್ಕ–ತಂಗಿ, ಅಣ್ಣ–ತಮ್ಮಂದಿರೊಂದಿಗೆ ಬೆಳೆದ ಇವರಿಗೆ ಮೊದಲಿನಿಂದಲೂ ಬಂಧು–ಬಾಂಧವರೊಂದಿಗೆ ಪ್ರೀತಿ–ವಾತ್ಸಲ್ಯ ಹೆಚ್ಚು. ತಿರುನಾರಾಯಣನ ಭಕ್ತರಾಗಿದ್ದ ಅಜ್ಜಯಮ್ಮಶೆಟ್ಟಿಯವರ ಜೊತೆ ಸುಜನಾ ಆಗಾಗ ಮೇಲುಕೋಟೆಗೆ ಹೋಗಿ ಬರುತ್ತಿದ್ದರು. ಬಾಲ್ಯದಿಂದಲೂ ಚುರುಕಾಗಿದ್ದ ಸುಜನಾರವರಿಗೆ ಅಜ್ಜ ಮಹಾಭಾರತದ ಕಥೆಯನ್ನು ಹೇಳಿದವರು. ಅಜ್ಜನಿಂದ ಪ್ರಭಾವಿತರಾದ ಕಾರಣ ಚಿಕ್ಕಂದಿನಿಂದಲೂ ಮೇಲುಕೋಟೆಯ ತಿರುನಾರಾಯಣನ ಅರ್ಚಕನಾಗಬೇಕೆಂಬ ಕನಸು ಕಂಡವರು.

ಸುಜನಾರವರ ತಂದೆ ಸುಬ್ಬಶೆಟ್ಟಿಯವರದು ವ್ಯವಸಾಯ ಮತ್ತು ಚಿಲ್ಲರೆ ವ್ಯಾಪಾರದ ಅಂಗಡಿ, ತಾಯಿ ಅದೇ ಗ್ರಾಮದ ಸಿರಿವಂತ ಕುಟುಂಬಕ್ಕೆ ಸೇರಿದವರು. ಚಿಲ್ಲರೆ ಅಂಗಡಿಯಲ್ಲಿ ತೆಗೆದುಕೊಂಡ ಹಣಕ್ಕೆ ಸರಿಯಾಗಿ ಅಳತೆ ಮಾಡಿ ಸಾಮಾನು ಕೊಡದ ತಪ್ಪಿಗೆ ಸುಜನಾರವರು ತಂದೆಯವರಿಂದ ಕಾಲಿಗೆ ಏಟು ತಿಂದಿರುವ ಹಲವು ನಿದರ್ಶನಗಳಿವೆ ಮತ್ತು ಬಾಲ್ಯದಲ್ಲಿ ತಂದೆಯವರು ಪೂರ್ವಿಕರ ಆಸ್ತಿ ಉಳಿಸಿಕೊಳ್ಳುವಲ್ಲಿ ನಡೆಸಿದ ಹೋರಾಟದಿಂದಾಗಿ ಸುಜನಾರವರ ಮನಸ್ಸು ಸತ್ಯ, ನಿಷ್ಠೆ, ಹೋರಾಟದ ಬದುಕಿನಡೆಗೆ ಮುನ್ನೆಡಿಸಿತು. ಧರ್ಮಿಷ್ಠರಾಗಿದ್ದ ತಂದೆಯವರಿಗೆ 'ಮೋಸ'ದ ಹೆಸರು ಕೇಳಿದರೆ ಆಗದು. ಅವರ ನೆರಳಿನಲ್ಲಿ ಬೆಳೆದವರು ಸುಜನಾ.

ಹುಟ್ಟೂರಿನಲ್ಲೆ ಮಾಧ್ಯಮಿಕ ಶಾಲೆ ವ್ಯಾಸಂಗ ಮುಗಿದ ನಂತರ, ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕಾಗಿ ಹೊಳೆನರಸೀಪುರದಲ್ಲಿ ಪ್ರೌಢಶಾಲೆಗೆ ಸೇರಿದರು. ಒಂಭತ್ತನೆಯ ತರಗತಿಯಲ್ಲಿದ್ದಾಗ ಶ್ರೀ ರಂಗಾಚಾರ್ ಎನ್ನುವ ಸಸ್ಯಶಾಸ್ತ್ರ ಪಾಠ ಮಾಡುತ್ತಿದ್ದ ಉಪಾಧ್ಯಾಯರು ಸುಜನಾರವರಿಗೆ ವಿಜ್ಞಾನದಲ್ಲಿ ವಿಶೇಷ ಆಸಕ್ತಿ ಮೂಡುವಂತೆ ಮಾಡಿದರು. ಗಿಡದ ಎಲೆಗಳನ್ನು ಮೈಕ್ರೋಸ್ಕೋಪ್‌ನಲ್ಲಿಟ್ಟು ಅದರಲ್ಲಿನ ಉಸಿರಾಡುವ ರಂಧ್ರಗಳನ್ನು ತೋರಿಸಿದರು. ಹತ್ತನೆಯ ತರಗತಿ ತೇರ್ಗಡೆ ಹೊಂದಿದ ಸುಜನಾರವರು ಮುಂದೆ ಬೆಂಗಳೂರಿನಲ್ಲಿನ ಫೋರ್ಟ್ ಹೈಸ್ಕೂಲ್‌ಗೆ ಸೇರಿದರು, ವಿಜ್ಞಾನದ ಬಗ್ಗೆ ಸಾಕಷ್ಟು ಪ್ರೀತಿ, ಕುತೂಹಲ ಬೆಳೆದು ಕನ್ನಡ ಸಾಹಿತ್ಯದ ಬಗ್ಗೆ ಪ್ರೀತಿ ಇದ್ದರೂ ಮುಂದೆ ವಿಜಯ ಕಾಲೇಜಿನಲ್ಲಿ ವಿಜ್ಞಾನವನ್ನೇ

ಕಲಿಯಲು ಆಯ್ಕೆ ಮಾಡಿಕೊಳ್ಳುವಂತಾಯಿತು. ಸುಜನಾ ನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವವನ್ನು ಪಡೆದರು. ವಿಜ್ಞಾನದ ಬಗ್ಗೆ ಒಲವಿದ್ದರೂ ಕನ್ನಡ ಸಾಹಿತ್ಯ ಬಗ್ಗೆ ಒಂದು ರೀತಿ ಹೆಚ್ಚಿನ ಪ್ರೇಮ. ಕನ್ನಡ ಸಾಹಿತ್ಯವನ್ನು ಓದಬೇಕು ಎನ್ನುವ ಅನನ್ಯ ಉತ್ಸಾಹ, ಹುರುಪು ಮುಂದೆ ಬಿ.ಎ. ಕನ್ನಡ ಆನರ್ಸ್ ತೆಗೆದುಕೊಳ್ಳಬೇಕೆಂಬ ಹಂಬಲ ಹೆಚ್ಚಿತು. ಅಲ್ಲದೆ ವಿಜ್ಞಾನ ವಿದ್ಯಾರ್ಥಿಯಾಗಿ ಕನ್ನಡದಲ್ಲಿ ಕೇವಲ 47 ಅಂಕಗಳಿಸಿದ್ದ ಸುಜನಾರವರಿಗೆ ಕನ್ನಡದಲ್ಲಿ ಆನರ್ಸ್‌ನಲ್ಲಿ ಪ್ರವೇಶ ಸಿಕ್ಕುವುದು ಕಷ್ಟವೇ ಆಗಿತ್ತು.

1950ರ ಸಮಯ, ಸಿ. ರಂಗಾಚಾರ್‌ರವರು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿದ್ದರು, ಸುಜನಾರವರ ಕನ್ನಡ ಆನರ್ಸ್‌ಗೆ ಸೇರಬೇಕೆಂಬ ಹಂಬಲ, ಕಾಳಜಿ ಇದ್ದ ಪ್ರೊ. ಜಿ.ವೆಂಕಟಸುಬ್ಬಯ್ಯ ಅವರು ಶಿಷ್ಯ ಸುಜನಾ ಅವರಿಗೆ ಕನ್ನಡ ಓದುವ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿ ರಂಗಾಚಾರ್‌ಗೆ ಒಂದು ಪತ್ರವನ್ನು ಬರೆದುಕೊಟ್ಟರು. ಸುಜನಾರವರು ಆ ಪತ್ರವನ್ನು ರಂಗಾಚಾರ್ ಅವರಿಗೆ ನೀಡಿದಾಗ ಮುಂದೆ ನೋಡೋಣ ಹೋಗು ಎಂದರು. ಅದೇ ಸಂದರ್ಭದಲ್ಲಿ ಮಹಾರಾಜ ಕಾಲೇಜಿನಲ್ಲಿ ಪ್ರೊ. ಕುವೆಂಪು ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ಸುಜನಾ ಅವರು ಕುವೆಂಪು ಅವರಿಗೆ ತಾವೇ ಒಂದು ಪತ್ರವನ್ನು ಬರೆದರು. ಕಾಲೇಜಿನ ತಲೆ ಬಾಗಿಲಲ್ಲಿ ಹಾಕಿದ ಕಮಾನಿನ ಮೇಲೆ ಸರಸ್ವತಿ ಮಂದಿರವಿದು.. ಎನ್ನುವ ಬರಹವನ್ನೇ ಉಲ್ಲೇಖಿಸಿ "ಅಂಕದ ಬಿಂಕದಿಂದ ನನ್ನನ್ನು ದಯಮಾಡಿ ಆಳಯಬೇಡಿ, ಸರಸ್ವತೀ ಮಂದಿರವಿದು, ಸ್ಥಾನ ಕೆಲವರಿಗೆ ಮಾತ್ರ ಇರಬಹುದು, ಪ್ರವೇಶ ಮಾತ್ರ ಎಲ್ಲರಿಗೂ ಇಹುದು" ಎಂದು ಬರೆದು ತಮಗೆ ಆನರ್ಸ್‌ಗೆ ಪ್ರವೇಶ ಕೊಡಬೇಕೆಂದು ಬೇಡಿಕೊಂಡರು. ಕುವೆಂಪು ಅವರಿಗೆ ತರುಣನ ಕನ್ನಡ ಪ್ರೇಮವನ್ನು ಕಂಡು ಕರಗಿ, ಅವರನ್ನು ಕರೆಸಿ, ನೀವು ಒಮ್ಮೆ ಪ್ರಿನ್ಸಿಪಾಲರನ್ನು ಹೋಗಿ ನೋಡಿ, ನಾನು ಕಳುಹಿಸಿದೆ ಎಂದು ಹೇಳಬೇಡಿ. ಅವರು ಮನಸ್ಸು ಮಾಡಿದರೆ ಆಗುತ್ತದೆ ಎಂದು ಕಿವಿಮಾತು ಹೇಳಿ ಕಳುಹಿಸಿದರು. ಸುಜನಾ ಧೈರ್ಯದಿಂದ ಸರಸ್ವತಿಪುರಂನ ಆಗ್ನಿಶಾಮಕದಳದ ಆವರಣದ ಹತ್ತಿರದಲ್ಲಿದ್ದ ಪ್ರಿನ್ಸಿಪಾಲ್ ಶ್ರೀ ಎಂ.ವಿ.ಗೋಪಾಲಸ್ವಾಮಿ ಅವರ ಮನೆಬಾಗಿಲು ತಟ್ಟಿದರು. ಅವರ ಮನೆಗೆ ಹೋದ ಸುಜನಾ ತಾವು ಅವರನ್ನು ಕಾಣಲು ಬಂದಿರುವ ಉದ್ದೇಶ ತಿಳಿಸಿ, "ನೀವು ನನಗೆ ಕನ್ನಡ ಆನರ್ಸ್‌ಗೆ ಪ್ರವೇಶ ಕೊಡದಿದ್ದರೆ, ಇಲ್ಲೇ ನಿಮ್ಮ ಮನೆಯ ಹತ್ತಿರದಲ್ಲೇ ರೈಲು ಕಂಬಿ ಇದೆ. ನಾನು ನೇರವಾಗಿ ಅಲ್ಲಿಗೆ ಹೋಗಿ ರೈಲಿಗೆ ತಲೆಕೊಡುತ್ತೇನೆ" ಎಂದರು. ತರುಣನ ಸೆಟೆದ ಮುಖ, ಪ್ರವೇಶ ಕೊಡದಿದ್ದರೆ ಹಾಗೆ ಮಾಡಿದರೂ ಮಾಡುವಂಥವನೇ ಎಂದು ಭಾವಿಸಿದ ಶ್ರೀ ಗೋಪಾಲಸ್ವಾಮಿ ಅವರು ಸುಜನಾ ಅವರಿಗೆ ಬಿ.ಎ. ಕನ್ನಡ ಆನರ್ಸ್‌ಗೆ ಪ್ರವೇಶ ನೀಡಿದರು. ಆಗ ನಿಜಕ್ಕೂ ವಿಜ್ಞಾನದಲ್ಲಿ ಇಂಟರ್‌ಮೀಡಿಯಟ್ ಮಾಡಿದ ವಿದ್ಯಾರ್ಥಿಗಳಿಗೆ ಕನ್ನಡ ಆನರ್ಸ್‌ಗೆ ಪ್ರವೇಶ ಕೊಡಲು ವಿಶೇಷ ಅನುಮತಿ ಬೇಕಿತ್ತು. ಅವರ ಅರ್ಜಿಯನ್ನು ವಿಶೇಷವೆಂದು ಪರಿಗಣಿಸಿದಾಗ ಪ್ರವೇಶ ಸಿಗುತ್ತಿತ್ತು. ಅರಿತು ಕನ್ನಡ ಆನರ್ಸ್ (ಬಿ.ಎ.)ಗೆ ಸೇರಿದ್ದು ಮಾತ್ರ ಒಂದು ಸಾಹಸ.

ಸುಜನಾ ಅವರಿಗೆ ಕವಿ ಕುವೆಂಪು ಅವರ ಪಾಠದ ಬಗ್ಗೆ ವಿಶೇಷ ಆಸಕ್ತಿ. ಅವರ ಕಾವ್ಯ, ಸಾಹಿತ್ಯ ವಿಮರ್ಶೆ, ಕಾವ್ಯ ಮೀಮಾಂಸೆ ಅವರ ಪರಮ ಪ್ರೀತಿಗೆ ಪಾತ್ರವಾಗಿದ್ದು ಕುವೆಂಪು ಅವರ ಕಾವ್ಯಾಸ್ವಾಧನ ಪಥವು ಅಕರ್ಷಣೀಯವಾಗಿ ಕಂಡಿತು. ನಂತರದಲ್ಲಿ ಕುವೆಂಪು ಅವರ ಪರಮ ಭಕ್ತರಾದರೂ ಸುಜನಾ. ಈ ದಾರಿಯಲ್ಲಿ ಗುರುಗಳ ಮಾರ್ಗದರ್ಶನದಲ್ಲಿ ಮುನ್ನಡೆಯಲು ಪ್ರಾರಂಭಿಸಿದ ಸುಜನಾ ನಿಧಾನವಾಗಿ ಕವಿಯಾಗಿ, ಚಿಂತಕರಾಗಿ, ವಿಮರ್ಶಕರಾಗಿ ತಮ್ಮನ್ನು ತಾವು ರೂಪಿಸಿಕೊಳ್ಳುತ್ತಾ ನಡೆದು, 1953–54ರಲ್ಲಿ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಮೊದಲಿಗರಾಗಿ ಉತ್ತೀರ್ಣರಾದರು, ಮೈಸೂರು ಮಹಾರಾಜರಿಂದ ಚಿನ್ನದ ಪದಕ ಪಡೆದರು. ಇದು ಅವರ ಸಾಧನಾ ಪಥದ ಮೊದಲ ಮೈಲಿಗಲ್ಲು. ಇಲ್ಲಿಯವರೆಗೆ ಸುಜನಾ ತಮ್ಮ ಆರಾಧ್ಯ ದೈವವೆಂದು ಭಾವಿಸಿದ್ದ ಕವಿ ಕುವೆಂಪು ಮತ್ತು ಕವಿ ಪು.ತಿ.ನರಸಿಂಹಾಚಾರ್ ಇಬ್ಬರ ಜೀವನ, ಸಾಧನೆ, ಸಾಹಿತ್ಯವನ್ನು ಸಮಗ್ರವಾಗಿ ಓದಿಕೊಂಡಿದ್ದರು. ಆ ಓದಿನ ದಟ್ಟವಾದ ಪ್ರಭಾವವನ್ನು ಅವರನ್ನು ಮೂಲತಃ ಕವಿಯನ್ನಾಗಿ ಮಾಡಿತು. ನಿಜಕ್ಕೂ ಕುವೆಂಪು–ಪು.ತಿ.ನ. ಇಬ್ಬರು ನನ್ನ ಸಾಹಿತ್ಯಕ ಜೀವನವನ್ನು ರೂಪಿಸಿದ್ದು. ಅವರ ಸಾಹಿತ್ಯವೇ ನನ್ನನ್ನು ಕವಿ–ವಿಮರ್ಶಕನಾಗುವಂತೆ ಪ್ರೇರೇಪಿಸಿದ್ದು ಎನ್ನುತ್ತಾರೆ ಸುಜನಾ. ಮುಂದೆ 1960ರಲ್ಲಿ ಲಕ್ಷ್ಮೀಅವರನ್ನು ಧರ್ಮಪತ್ನಿಯಾಗಿ ಪಡೆದ ನಂತರ ಸುಜನಾ ಅವರಿಗೆ ರಂಗನಾಥ, ಶ್ರೀಧರ್, ಗುರುದೇವ ಮತ್ತು ಶುಚಿಸ್ಮಿತ ಎಂಬ ನಾಲ್ಕು ಮಕ್ಕಳು.

ಎಂ.ಎ. ಮುಗಿದ ನಂತರ ಕೆ.ಪಿ.ಎಸ್.ಸಿ.ಯ ಕೆಲಸಕ್ಕೆ ಅರ್ಜಿಹಾಕಿ ಯಶಸ್ವಿಯಾಗಿ ಉಪನ್ಯಾಸಕ ಹುದ್ದೆಗೆ ಆಯ್ಕೆಯಾದರು. ಯುವರಾಜ–ಮಹಾರಾಜ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಮುಂದುವರೆದು, 1968ರಲ್ಲಿ ರೀಡರ್, 1972ರಲ್ಲಿ ಪ್ರೊಫೆಸರ್ ಆಗಿ ಸೇವೆ ಮುಂದುವರೆಸಿ, 1985ರಲ್ಲಿ ಯುವರಾಜ ಕಾಲೇಜಿನ ಪ್ರಾಂಶುಪಾಲರಾಗಿ ಬಡ್ತಿ ಹೊಂದಿದ ಮೂರೇ ತಿಂಗಳ ನಂತರ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿ ನೇಮಕಗೊಂಡರು. ಸುಮಾರು ಹದಿನೇಳು ತಿಂಗಳು ಸೇವೆ ಸಲ್ಲಿಸಿ ನಂತರ ಮತ್ತೆ ಬೋಧನೆಯ ಕಡೆಗೆ ಒಲವು ತೋರಿ ಮತ್ತೆ ಯುವರಾಜ ಕಾಲೇಜಿನ ಪ್ರಾಂಶುಪಾಲರಾಗಿ ಬಂದರು. ಆ ಕಾಲದಲ್ಲೇ ಯುವರಾಜ ಕಾಲೇಜಿನಲ್ಲಿ ಎಂ.ಸಿ.ಎ., ಎಂ.ಬಿ.ಎ., ಕಂಪ್ಯೂಟರ್ ಸೈನ್ಸ್, ಮೈಕ್ರೋಬಯಾಲಜಿ, ಬಯೋಟೆಕ್ನಾಲಜಿ, ಷುಗರ್‌ಕೇನ್ ಟೆಕ್ನಾಲಜಿ, ಸಿರಿಕಲ್ಚರ್ ವಿಷಯಗಳು ಪಠ್ಯಗಳಾಗಿ ಬಂದವು, ಪೈಪೋಟಿಯ, ಆಧುನಿಕ ವಿಚಾರಧಾರೆಯ ಹೊಸ ಯುಗಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದರಲ್ಲಿ ಈ ವಿಷಯಗಳು ಬಹಳಷ್ಟು ಸಹಾಯ ಮಾಡಿದವು. ಇದು ಸುಜನಾರವರ ದೂರದೃಷ್ಟಿಯ ಫಲಶೃತಿಯಾಗಿದ್ದವು. ಸುಜನಾರವರು 1990ರಲ್ಲಿ ಸೇವೆಯಿಂದ ನಿವೃತ್ತರಾದರು.

ಸುಜನಾ ರವರ ಪ್ರಮುಖ ಕೃತಿಗಳಾಗಿ ಮಂಗಳಾರತಿ, ನಾಣ್ಯಯಾತ್ರೆ, ಒಂದೆ ಸೂರಡಿಯಲ್ಲಿ, ಇಬ್ಬನಿ ಆರತಿ, ಕಣಗಳು ಏಜಾಕ್ಸ್ (ಅನುವಾದಿತ ನಾಟಕ) ಭಾರತ ಕಥಾ ಮಂಜರಿ (ಸಂಗ್ರಹ) ಕೃತಿಗಳು ಕುಮಾರವ್ಯಾಸ, ಹೃದಯ ಸಂವಾದ, ಪರಂಪರೆ, ಪರಂಪರೆ ಮತ್ತು ಕುವೆಂಪು, ಪು.ತಿ.ನ. ಸಾಹಿತ್ಯದ ಕೆಲವು ಹೊಳಹುಗಳು ಎಂಬ ವಿಮರ್ಶೆ ಕೃತಿಗಳು ಮತ್ತು ಇನ್ನು ಅನೇಕ ಕೃತಿಗಳನ್ನು ರಚಿಸಿದರು.

ಸೇವೆಯಿಂದ ನಿವೃತ್ತರಾಗುವ ಕೆಲ ದಿನಗಳ ಮುಂಚೆ ಪಾರ್ಕಿನ್ಸ್‌ನ ಕಾಯಿಲೆಗೆ ತುತ್ತಾದರೂ ನಿವೃತ್ತರಾದ ನಂತರ ಪಾರ್ಕಿನ್ಸ್‌ನ ಕಾಯಿಲೆ ಪೂರ್ಣವಾಗಿ ಕುಗ್ಗಿಸಿ ಸುಜನಾರವರಿಗೆ ಬರವಣಿಗೆಯತ್ತ ಮನಸ್ಸು ಮಾಡಲಾಗಲಿಲ್ಲ. ಇದನ್ನು ಕಂಡ ಮಗಳು ಶುಚಿಸಿತ್ಮಾ ತಂದೆಯವರ ಭಾವನೆಗಳಿಗೆ ಅಕ್ಷರರೂಪ ಕೊಡ ತೊಡಗಿದರು. ಮಗಳ ನೆರವಿನಿಂದಲೇ 1999ರಲ್ಲಿ ಮಹಾಭಾರತ ಯುದ್ಧೋತ್ತರ ಧಾರುಣ ಕಥಾನಕ 'ಯುಗಸಂಧ್ಯಾ' ಎಂಬ ಮಹಾಕಾವ್ಯವನ್ನೂ ರಚನೆ ಮಾಡಿದರು.

ಸುಜನಾರವರಿಗೆ ಸಂದ ಪ್ರಶಸ್ತಿಗಳಲ್ಲಿ ವರ್ಧಮಾನ ಪ್ರಶಸ್ತಿ–1982, ಕರ್ನಾಟಕ ಸಾಹಿತ್ಯ ಆಕಾಡೆಮಿ ಪ್ರಶಸ್ತಿ– 1989, ಕನ್ನಡ ರಾಜ್ಯೋತ್ಸವ ಪ್ರಶಸ್ತಿ–1998, ವಿಶ್ವಮಾನವ ಪ್ರಶಸ್ತಿ–1999, ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ–2002, ಪ್ರಶಸ್ತಿಗಳು ಪ್ರಮುಖವಾದವು. ಸುಜನಾರವರ "ಸಂಕ್ರಾಂತಿ ಬೆರಗು", "ಶಿವಜಾಗರ" ಎಂದು ಗೀತರೂಪಕಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿದೆ ಮತ್ತು ಅವರ ಕೆಲ ಬಾವಗೀತೆಗಳು ಪ್ರಸಾರವಾಗುತ್ತಿವೆ.

ಹೀಗೆ ಪುಟ್ಟ ಹಳ್ಳಿಯೊಂದರಲ್ಲಿ ಜನ್ಮತಳೆದು, ಕನ್ನಡ ಸಾಹಿತ್ಯ ಲೋಕಕ್ಕೆ ಸೇವೆ ಸಲ್ಲಿಸಿ, ಮೈಸೂರಿನಲ್ಲಿ ನೆಲೆಸಿದ ಸುಜನಾ ನೇರ ನುಡಿಯ, ನಿಷ್ಠುರ ಮಾತಿನ ಉದಾರಿ, ಸಂಬಂಧಿಕರ ಅನೇಕ ಮಕ್ಕಳಿಗೆ ತನ್ನ ಮನೆಯಲ್ಲಿ ವಸತಿ–ಊಟ ನೀಡಿ, ವಿದ್ಯಾವಂತ–ರನ್ನಾಗಿಸಿ ಕಳುಹಿಸಿ ಕೊಟ್ಟಿದ್ದಾರೆ. ಕಷ್ಟಕ್ಕೆ ಸದಾ ಮುಂದಾಗಿ ಸಹಾಯ ಹಸ್ತ ನೀಡುತ್ತಿದ್ದ ಇವರು, ಅವ್ಯಾವಹಾರಿಕ ಬುದ್ದಿಯಿಂದಾಗಿ ತಾವು ಇನ್ನು ಹೆಚ್ಚು ಪ್ರಸಿದ್ಧಿ ಪಡೆಯಬಹುದಾಗಿದ್ದ ಅನೇಕ ಅವಕಾಶವನ್ನು ತಾವಾಗಿಯೇ ಕಳೆದುಕೊಂಡವರು. ಪ್ರಶಸ್ತಿ ನೀಡಲು, ಸನ್ಮಾನ ಮಾಡುವುದಾಗಿ ಅವರ ಮನೆಬಾಗಿಲಿಗೆ ಬಂದವರಿಗೆ ಅದೆಲ್ಲ ಬೇಕಿಲ್ಲವೆಂದು ಹೇಳಿ ವಾಪಸ್ಸು ಕಳುಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಒಮ್ಮೆ ಅವರನ್ನು ಸನ್ಮಾನಿಸಲು ಪ್ರಯತ್ನಿಸಿದಾಗ ಅದನ್ನು ವಿನಯದಿಂದಲೇ ಪತ್ರ ಮುಖೇನ ನಿರಾಕರಿಸಿದ್ದಾರೆ. ಒಮ್ಮೆ ಅಂದಿನ ಮುಖ್ಯಮಂತ್ರಿಗಳಾಗಿದ ದಿವಂಗತ ಡಿ.ದೇವರಾಜ ಆರಸು ಅವರು ಮೈಸೂರಿಗೆ ಭೇಟಿಯಿತ್ತ ಸಂದರ್ಭದಲ್ಲಿ ಬಸವಣ್ಣ ಮತ್ತು ಅಂಬೇಡ್ಕರ್ ಅವರುಗಳ ವಿಚಾರ ಧಾರೆಯನ್ನು ಮಂಡಿಸಿದ ಸುಜನಾ ಅವರ ಜ್ಞಾನ, ತಿಳುವಳಿಕೆ ಕಂಡು ಮೆಚ್ಚಿ ಖುದ್ದಾಗಿ ಭೇಟಿ ಮಾಡಲು ಆಹ್ವಾನವಿತ್ತು ಕರೆಯಿಸಿಕೊಂಡಿದ್ದರು.

ದೇವರಾಜು ಅರಸು ಸಾಮಾಜಿಕ ಅಧ್ಯಯನ ಸಂಸ್ಥೆಯು ಸನ್ಮಾನಿಸಿ ಸುಜನಾರವರಿಗೆ ನೀಡಿದ ಒಂದು ಲಕ್ಷ ರೂಪಾಯಿಗಳನ್ನು ಸುಜನಾರವರು ತನ್ನ ಹುಟ್ಟೂರಿನ ಪ್ರಾಥಮಿಕ–ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುವ ಬಡ ವಿದ್ಯಾರ್ಥಿಗಳ ವಿನಿಯೋಗಕ್ಕಾಗಿ ಬ್ಯಾಂಕ್‌ನಲ್ಲಿ ಇಡುಗಂಟಾಗಿ ಇಟ್ಟು ತನ್ನ ಮಕ್ಕಳನ್ನು ಉಸ್ತುವಾರಿಗಾಗಿ ನಿಯೋಜಿಸಿದ್ದಾರೆ.

ಮೈಸೂರಿನ ಸುಜನಾ ಅವರ ಮನೆಯು ಗೋಕುಲಂ ಮುಖ್ಯರಸ್ತೆಯಲ್ಲಿದ್ದು, ಪ್ರಾತಃಕಾಲ ಕುವೆಂಪು ಅವರು ವಾಯುವಿಹಾರಕ್ಕೆ ಆ ರಸ್ತೆಯಲ್ಲಿ ಹೋಗುತ್ತಿದ್ದರು. ಗುರುಗಳು ಮನೆಯ ಮುಂದೆ ಹಾದುಹೋಗುವ ಸಂದರ್ಭದಲ್ಲಿ ನಾನು ರಸ್ತೆಯ ಕಡೆ ಕಾಲು ಚಾಚಿ ಮಲಗಬಾರದೆಂದು, ಕುವೆಂಪುರವರ ಆಗಮನಕ್ಕೆ ಮುಂಚೆಯೇ ಎದ್ದಿರುತ್ತಿದ್ದರು ಮತ್ತು ಗುರುಗಳು ನಡೆದು ಬರುವ ರಸ್ತೆಯಲ್ಲಿ ಎಂದೂ ಉಗುಳಿದವರಲ್ಲ. ಅಷ್ಟರ ಮಟ್ಟಿನ ಗುರುಭಕ್ತಿ, ವಿನಯ ವಿಧೇಯತೆ.

ಅಂತಿಮವಾಗಿ ಸುಜನಾರವರ ಬಗ್ಗೆ ಈ ಮಾತನ್ನು ಇಲ್ಲಿ ಪ್ರಸ್ತಾಪಿಸದಿದ್ದರೆ ನಮ್ಮೂರಿಗೆ ಮಾಡಿದ ವಂಚನೆಯಾಗುತ್ತದೆ. ಆರವತ್ತರ ದಶಕದಲ್ಲಿ ಭಾರತ ದೇಶದ ಮೇಲೆ ನೆರೆಯ ಚೀನಾ ದೇಶವು ಯುದ್ಧ ನಡೆಸುತ್ತಿತ್ತು. ಆ ಸಂದರ್ಭದಲ್ಲಿ ಭಾರತ ದೇಶದ ಪ್ರಧಾನಮಂತ್ರಿ–ಗಳಾಗಿದ್ದ ಜವಾಹರಲಾಲ್ ನೆಹರು ದೇಶದ ಜನತೆಯಲ್ಲಿ ಆರ್ಥಿಕ ಸಹಾಯಕ್ಕಾಗಿ ಕರೆ ನೀಡಿದ್ದರು. ಇದನ್ನು ತಿಳಿದ ಸುಜನಾರವರು, ಎಂ.ಎ. ಪದವಿಯಲ್ಲಿ ಮೊದಲನೆ ರ್‍ಯಾಂಕ್ ಪಡೆದಾಗ ಮೈಸೂರು ಮಹಾರಾಜರು ತಮ್ಮ ಹಸ್ತದಿಂದ ನೀಡಿದ ಅಪ್ಪಟ ಚಿನ್ನದ ಪದಕವನ್ನು ಪ್ರಧಾನಮಂತ್ರಿಗಳ ಕಛೇರಿಗೆ ಕಳುಹಿಸಿ, ಸ್ವೀಕೃತಿ ಪತ್ರವನ್ನು ಪಡೆದಿರುತ್ತಾರೆ. ಇಂದಿಗೂ ಈ ಸ್ವೀಕೃತಿ ಪತ್ರ ಸುಜನಾರವರ ಮನೆಯಲ್ಲಿದೆ. ಚಿನ್ನದ ಪದಕವನ್ನು ಕಳುಹಿಸಿ ಕೊಟ್ಟು ಸ್ವೀಕೃತಿ ಪತ್ರ ಬಂದ ಮೇಲೆ ವಿಚಾರ ತಿಳಿದ ತಂದೆ ಕೊಂಚ ವಿಷಾದದಿಂದಲೇ ಹೇಳಿದರಂತೆ "ಅಲ್ಲಪ್ಪ, ಮಹಾರಾಜರ ಹಸ್ತದಿಂದ ದೊರೆತ ಚಿನ್ನದ ಪದಕವನ್ನು ನಿನ್ನಲ್ಲೇ ಇಟ್ಟುಕೊಂಡು ಚಿನ್ನದ ಪದಕದ ಮೌಲ್ಯದಷ್ಟು ಹಣವನ್ನೇ ಕಳುಹಿಸ ಬಹುದಿತ್ತಲ್ಲ" ಎಂದರಂತೆ.

ದಿನಾಂಕ: 15.03.2024

**ಎಚ್.ಎನ್.ವಿಶ್ವನಾಥ**
ನಂ.32, ಭರಣಿ ಕೃಪ, ಕಾಮಾಕ್ಷಿ ಆಸ್ಪತ್ರೆ
ಪೂರ್ವ ಸರಸ್ವತಿಪುರಂ,
ಮೈಸೂರು–570009,

ಚರವಾಣಿ: 99807 50116

# ನೆನಪಿನಂಗಳದಲಿ ಸುಜನಾ

ಸುಜನಾ ಕನ್ನಡ ಲೋಕದಲ್ಲಿ ಚಿರಸ್ಥಾಯಿಯಾಗಿ ನಲ್ಲವಂತಹ ಹೆಸರು ಸುಜನಾ ಅವರ ಪೂರ್ಣ ಹೆಸರು ಎಸ್.ನಾರಾಯಣ ಶೆಟ್ಟಿ ಹದಿನಾರು ಕೃತಿಗಳನ್ನು ನೀಡಿ ಕನ್ನಡದ ಶ್ರೀಮಂತಿಕೆಯನ್ನು ಸಮೃದ್ಧಿಗೊಳಿಸಿದ್ದಾರೆ. ಇವರ ಎಲ್ಲಾ ಕೃತಿಗಳಲ್ಲೂ ಆಳವಾದ ಅಧ್ಯಯನ ಹಾಗೂ ನೂತನ ವಿಮರ್ಶೆಯ ದೃಷ್ಟಿ ಎದ್ದು ಕಾಣುವ ಗುಣ ವಿಶೇಷಗಳು ಹೃದಯ ಸಂವಾದದಲ್ಲಿ ಸೊನ್ನೆ ಎರಡರ ನಡುವೆ ಸದಾ ಉಳಿಯುವ ಅಪೂರ್ವ ಚೇತನ ಇವರು ಕುವೆಂಪು ಇವರ ಆರಾಧ್ಯ ದೈವ. ಕುವೆಂಪು ಅವರ ಕಾವ್ಯದ ಒಳನೋಟಗಳನ್ನು ಸಮರ್ಥವಾಗಿ ಮಂಡಿಸುವ ನಿಷ್ಠುಕ. ಬಹಳ ಸರಳ ಬದುಕಿನ ಕವಿ ಹೃದಯ ಸದಾ ಒಂದು ಪೈಜಾಮ, ಬಿಳಿ ಜುಬ್ಬದ ಶ್ವೇತದಾರಿ. ನಿಗರ್ವಿ. ಎಲ್ಲಿಯೂ ಪ್ರಚಾರಕ್ಕೆ ಆಶಿಸಿದವರಲ್ಲ 'ಮಂದಿಯ ಕೈ ಚಪ್ಪಾಳೆ ವೃತ್ತ ಪತ್ರಿಕೆಗಳ ಹಗ್ಗದ ಸ್ಥಿತಿ ಬಿರುದು ಭಾವನೆಗಳ ವ್ಯಾಮೋಹ ಇವುಗಳಿಗೆ ವಶವಾಗದೇ, ತಾನು ಹಿಡಿದ ಕೆಲಸವನ್ನು ಪಟ್ಟು ಹಿಡಿದು ನಿಶಬ್ಧವಾಗಿ ಮಾಡುವಾತನೆ ನಿಜವಾದ ಕರ್ಮಯೋಗಿ ಎಂಬ ಕುವೆಂಪುರವರ ಮಾತಿನ ಅನುಯಾಯಿ.

ನುಡಿದಂತೆ ನಡೆದ ನಿಜವಾದ ಕರ್ಮಯೋಗಿ. ತಾನು ಕಂಡುಕೊಂಡ ಸತ್ಯಕ್ಕೆ ತಮ್ಮ ಜೀವನಕ್ಕೆ ವಿರುದ್ಧವಾಗಿ ಎಂದೂ ರಾಜಿ ಮಾಡಿಕೊಳ್ಳದ ನಿಷ್ಠಾವಂತ. ಇಂತಹ ಸದ್ಗುಣಿಗಳು ಜೀವನದಲ್ಲಿ ಅಪರೂಪದಲ್ಲೂ ಅಪರೂಪ

ಸಾಮಾನ್ಯವಾಗಿ ಸಾಹಿತ್ಯ ಪ್ರಪಂಚದಲ್ಲಿ ಸಾಹಿತ್ಯ ವಿಮರ್ಶೆಯನ್ನು ಕುರಿತು ಬರವಣಿಗೆ ನಡೆಯುತ್ತದೆ. ಆದರೆ ಅವರ ವ್ಯಕ್ತಿತ್ವ ಅನುಸರಿಸಿದ ಮಾರ್ಗಗಳ ಬಗ್ಗೆ ವಿವರ ದೊರೆಯುವುದಿಲ್ಲ, ಸುಜನಾ ಅವರ ಬದುಕು ಅವರು ಅಳವಡಿಸಿಕೊಂಡಿದ್ದ ವ್ಯಕ್ತಿತ್ವ ಅನುಕರಣೀಯವಾದುದ್ದು ಹಾಗೂ ಹಲವು ಸಂದರ್ಭಗಳನ್ನು ದಾಖಲಿಸುವ ಕಡೆಗೆ ಮನ ಚೆಲ್ಲುವುದು ಅದರಣೀಯವೆಂದು ಭಾವಿಸುತ್ತೇನೆ.

1.ಅವರ ಸರಳತೆಗೆ ಒಂದು ಸಂದರ್ಭ ನೆನಪಿಗೆ ಬರುತ್ತದೆ

ಸುಜನಾರವರ ಬಗ್ಗೆ ಪಿ.ಹೆಚ್‌ಡಿ ಮಾಡಲು ನಮ್ಮ ಗುರುಗಳಾದ ಡಾ॥ ರಾಮೇಗೌಡರು (ರಾ ಗೌ) ಹಾಗೂ ಮ.ರಾಮಕೃಷ್ಣರವರು ಸುಜನಾ ಅವರನ್ನು ಕಂಡು ವಿಷಯ ಪ್ರಸ್ತಾಪಿಸಿದಾಗ ನಾನಾವ ಸಾಧನೆಯನ್ನು ಮಾಡಿದ್ದೇನೆ ಎಂದು ಹೇಳಿ ಒಪ್ಪಿಗೆ ನೀಡಲಿಲ್ಲವಂತೆ. ಕೊನೆಗೆ ರಾ ಗೌ ಅವರು ನಿಮ್ಮ ಒಪ್ಪಿಗೆಯನ್ನು ಸೌಜನ್ಯಕ್ಕೆ ಕೇಳಿದ್ದೇವೆ. ನೀವು ಒಪ್ಪದಿದ್ದರೂ, ಈ ಕಾರ್ಯವನ್ನು ಶ್ರೀ ಮ.ರಾಮಕೃಷ್ಣರವರು ಮಾಡುತ್ತಾರೆ ಎಂದು ಹೇಳಿ ವಾಪಾಸ್ಸಾದರಂತೆ

2. ದಿವಂಗತ ಡಿ ದೇವರಾಜು ಅರಸು ಮುಖ್ಯಮಂತ್ರಿಯಾಗಿದ್ದಾಗ ಮೈಸೂರಿಗೆ ಮೊಕ್ಕಾಂ ಆದರೆ ಸುಜನಾ ಅವರ ಮನೆಗೆ ಕಾರು ಕಳಿಸಿ ಅವರನ್ನು ಆಹ್ವಾನಿಸಿ ಗಂಟೆಗಟ್ಟಲೆ ಒಮ್ಮೊಮ್ಮೆ ದಿನಗಟ್ಟಲೇ ಒಮ್ಮೆಮ್ಮೆ ಚರ್ಚಿಸುತ್ತಿದ್ದರೆಂಬ ವಿಷಯ ತಿಳಿದಿದ್ದರೆ ಸುಜನಾ ಅವರು ಕೇವಲ ಸಾಹಿತ್ಯ ಪ್ರಪಂಚದಲ್ಲೇ ಅಲ್ಲ ಸಮಾಜದ ಸೇವೆಯಲ್ಲೂ ಚಿಂತಕರಾಗಿದ್ದರು ಎಂಬುದಕ್ಕೆ ಇದೊಂದು ನಿದರ್ಶನ. ದುರ್ಬಲ ಹಿಂದುಳಿದ ವರ್ಗದವರಿಗೆ ಸಾಮಾನ್ಯರಿಗೆ ಕಾನೂನಿನಡಿಯಲ್ಲಿ ಯಾವ ರೀತಿ ಸವಲತ್ತು ಒದಗಿಸಬಹುದೆಂಬ ಚಿಂತನೆಯನ್ನು ತಮ್ಮ ಭಾಷಣದಲ್ಲೂ ತಿಳಿ ಹೇಳುತ್ತಿದ್ದಾರೆ. ಇಬ್ಬರ ಚಿಂತನೆಯ ಹಾದಿಯಲ್ಲಿ ಅರಸು ಅವರ ಅವಧಿಯಲ್ಲಿ ಅನೇಕ ಯೋಜನೆಗಳು ರೂಪುಗೊಂಡಿವೆ

3. 1998 ರಲ್ಲಿ ಕರ್ನಾಟಕ ಸರ್ಕಾರದ ಡಿ.ದೇವರಾಜು ಅರಸು ಪ್ರಶಸ್ತಿ ನೀಡಲಾಯಿತು. ಇದರಿಂದ ಬಂದ ಹಣವನ್ನು ತಮ್ಮ ಹುಟ್ಟೂರು ಹೊಸಹೊಳಲಿನ ಪ್ರಾಥಮಿಕ ಶಾಲೆಗೆ ಗ್ರಾಮೀಣ ಮಕ್ಕಳ ಅಭಿವೃದ್ಧಿಗಾಗಿ ನೀಡಿದ್ದು ಸುಜನಾ ಅವರ ಔಧಾರ್ಯತೆಗೆ ಸಾಕ್ಷಿಯಾಗಿದೆ.

4. ದಾರಿಯಲ್ಲಿ ಹೋಗುವಾಗ ರಸ್ತೆಯಲ್ಲಿ ಬಿದ್ದಿದ್ದ ಕಲ್ಲ ಕಂಡರೆ ಅದನ್ನು ಎತ್ತಿ ರಸ್ತೆ ಬದಿಗೆ ಬಿಸಾಡುವ ಪದ್ಧತಿ ರೂಢಿಸಿಕೊಂಡಿದ್ದರು. ಟೀಕೆಗಳನ್ನು ಎದುರಿಸಿ ಈ ಕ್ರಿಯೆಯನ್ನು ತಪ್ಪದೇ ಮಾಡುತ್ತಿದ್ದರು. 2009ರಲ್ಲಿ ಪ್ರೋ ಬಿ.ಎ.ವಿವೇಕರೈ ಅವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು. ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಬಗ್ಗೆ ಸುಜನಾ ಅವರ ಉಪನ್ಯಾಸಗಳನ್ನು ಕೇಳಿ ತುಂಬಾ ಪ್ರಭಾವಿತರಾಗಿದ್ದರು. ಪ್ರೋ.ವಿವೇಕರೈ ಆ ಸಾಲಿನ ಘಟಿಕೋತ್ಸವದಲ್ಲಿ ಸುಜನಾ ಅವರಿಗೆ ಗೌರವ ಡಾಕ್ಟರೇಟ್ ಕೊಡಲು ನಿರ್ಧರಿಸಿತ್ತು. ಸುಜನಾ ಅವರ ಒಪ್ಪಿಗೆ ಪಡೆಯಲು ವಿವೇಕರೈ ಮನೆಗೆ ಹೋಗಿ ಪ್ರಸ್ತಾಪಿಸಿದಾಗ ಬೇಡ ನನಗೆ ಈಗ ಈ ಡಾಕ್ಟರೇಟ್‌ನಿಂದ ಏನಾಗಬೇಕು. ನನಗೆ ಗುರುವಿನ ಕೃಪೆ ಸಾಕು ಎಂದು ಮಾತನಾಡಿದರಂತೆ. ಕನ್ನಡಕ್ಕಾಗಿ ವಿಶ್ವವಿದ್ಯಾನಿಲಯದ ಗೌರವಕ್ಕಾಗಿ ಒಪ್ಪಿಕೊಳ್ಳಿ ಎಂದು ಒತ್ತಾಯದ ಕೋರಿಕೆಗೆ ತಲೆ ಅಲ್ಲಾಡಿಸಿ ಆಯಿತೆಂದರು. ಇದನ್ನು ವಿವೇಕರೈ ಅವರು ಈಗಲೂ ನೆನಪಿಸಿಕೊಳ್ಳುತ್ತಾರೆ. ಆನಾರೋಗ್ಯ ಇದ್ದರೂ ಘಟಿಕೋತ್ಸವದಲ್ಲಿ ಬಾಗವಹಿಸಿ ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿದರು.

5. ಮತ್ತೊಂದು ಪ್ರಸಂಗ ಹೇಳಲೇಬೇಕು ಜೆ.ಎಸ್.ಎಸ್.ಮಠ ಶ್ರೀ ದೇಸಿ ಕೇಂದ್ರ ಮಹಾಸ್ವಾಮಿಗಳು ಸುಜನಾ ಅವರ ಅಭಿನಂದನಾ ಗ್ರಂಥ ಹೊರತರಲು ತಿಳಿಸಿದ್ದರಂತೆ. ಈ ಬಗ್ಗೆ ಸುಜನಾ ರವರ ಒಪ್ಪಿಗೆ ಪಡೆಯಲು ನಾನು ಸಂಸ್ಕೃತ ಪ್ರಾಧ್ಯಪಕರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಭವನದ ನಿರ್ದೇಶಕರಾಗಿದ್ದ ಡಾ॥ ಎಸ್.ಶಿವರಾಜಪ್ಪ ಐದು ಜನರ ತಂಡ ಮನೆಗೆ ಹೋಗಿದ್ದೆವು. ಸಜ್ಜನಿಕೆ ಪ್ರೀತಿಯಿಂದ ಸತ್ಕರಿಸಿದ ಸುಜನಾ ಅವರು ನಾನು ಯಾವ ಸಾಧನೆಯನ್ನು ಮಾಡಿದ್ದೇನೆಂದು ಅಭಿನಂದನಾ ಗ್ರಂಥ ಎಂದು ಸಾತ್ವಿಕ ಕೋಪ ಪ್ರದರ್ಶಿಸಿ ಒಪ್ಪಲೇ ಇಲ್ಲ. ಏನೂ ಸಾಧನೆ ಮಾಡಿದವರು, ಸಾಲು ಸಾಲು ಅಭಿನಂದನಾ ಗ್ರಂಥ ಹೊರ ತರಲು ಹವಣಿಸುವವರು ಇರುವಂತಹ ಈ ಸಮಾಜದಲ್ಲಿ ಸುಜನಾ ಅವರ ಮೇರು ವ್ಯಕ್ತಿತ್ವ ಆದರ್ಶವಾಗಿ ನಿಲ್ಲುತ್ತದೆ ಅಲ್ಲವೇ?

6. 'ಅನ್ಯರ ಕಂಡರೆ ಅಸಹ್ಯ ಪಡದಿರು' ಇದೇ ಅಂತರಂಗ ಶುದ್ದಿ ಇದೇ ಬಹಿರಂಗ ಶುದ್ದಿ ಎಂಬ ಒಂದು ಸಾಲನ್ನು ತೆಗೆದುಕೊಂಡು ಸುಮಾರು ಎರಡು ಮೂರು ಗಂಟೆ ಉಪನ್ಯಾಸ ನೀಡಿ ಅಚ್ಚರಿ ಪಡಿಸಿದ್ದ ಆಳವಾದ ಜ್ಞಾನಕ್ಕೆ ಸಭೀಕರು ತಲೆದೂಗಿದರು. ಶೋಷಿತ ವರ್ಗದವರ ಭವಣೆ, ಶ್ರೇಣಿಕೃತ ಸಮಾಜದ ದಬ್ಬಾಳಿಕೆ, ಮನುಷ್ಯರ ಮೂಲಭೂತ ಪ್ರವೃತ್ತಿ, ದೇಶ ದೇಶಗಳ ನಡುವೆ ಕಿತ್ತಾಟ, ದಾರ್ಮಿಕ ವಿಡಂಬನೆ ಇವೆಲ್ಲವನ್ನೂ ಎಳೆ ಎಳೆಯಾಗಿ ಬಿಡಿಸಿ ಆಚಾರ ಅನಾಚಾರಗಳ ಚಿತ್ರಣ ಅವರ ಬೃಹತ್ ಪ್ರತಿಭೆಗೆ ಸಾಮಾಜಿಕ ಕಳಕಳಿಗೆ ಕನ್ನಡಿ ಹಿಡಿದಂತಿತ್ತು.

7. ಕವಿಗಳು, ಚಿಂತಕರು, ಸಮಾಜ ಮುಖಿ ಆಗಿರುವ ವ್ಯಕ್ತಿಗಳು ಸರಳ ಬಾಳ್ವೆ ನಡೆಸಬೇಕು. ಜಾತ್ಯಾತೀತರಾಗಿ ಬದುಕಬೇಕು. ಇಲ್ಲದಿದ್ದರೆ ಭವಿಷ್ಯದ ಯುವ ಜನಾಂಗ ಎಂದಿಗೂ ನಮ್ಮನ್ನು ಕ್ಷಮಿಸುವುದಿಲ್ಲ ಎಂದು ಸುಜನಾ ಅನೇಕ ಬಾಷಣಗಳಲ್ಲಿ ಒತ್ತಿ ಒತ್ತಿ ಹೇಳುತ್ತಿದ್ದರು. ಇದು ಎಲ್ಲಾ ಕಾಲಕ್ಕೂ ಅನ್ವಯಿಸುತ್ತದೆ. ತಮ್ಮಲ್ಲಿ ಸಹಾಯ ಕೇಳಿ ಬಂದ ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸಕ್ಕೆ ಜಾತ್ಯಾತೀತವಾಗಿ ಹಣ ಸಹಾಯ ಮಾಡಿದ್ದನ್ನೂ ನಾವೇ ಕಂಡಿದ್ದೇವೆ. ಆದರೆ ಈ ವಿಷಯವನ್ನು ಯಾರಿಗೂ ತಿಳಿಯದ ಹಾಗೇ ಮಾಡುತ್ತಿದ್ದುದ್ದು ಅವರ ದೊಡ್ಡ ಗುಣ.

8. ರೈತ ಮತ್ತು ನೇಕಾರ ದೇಶದ ಎರಡು ಕಣ್ಣುಗಳದ್ದ ಹಾಗೆ, ರೈತ ಬೆಳೆದ ಹತ್ತಿ ಮತ್ತು ರೇಷ್ಮೆಯನ್ನು ನೂಲಾಗಿ ಪರಿವರ್ತಿಸಿದ ನಂತರ ಪತ್ತಲಾಗುವ ಮೊದಲು ಹಸಿಯನೂಲು ಹಾನಾಗಿ ಬೀಸಿಕೋಳ್ಳಬೇಕು ಉಂಗೆ ಕಂಬದ ನಡುವೆ ಬಿಗಿ ಬಿಗಿಸಿಕೊಂಡು,ಗಂಜಿ ತೀಡಿಸಿಕೊಂಡು, ಹುರಿಗೊಂಡು... ಹೀಗೆ ಸುದೀರ್ಘ ಕವನದಲ್ಲಿ

ಸುಜನಾ ಅವರು ತಮ್ಮ ನೇಕಾರ ವೃತ್ತಿಯ ಬಗ್ಗೆ ಎಳೆ ಎಳೆಯಾಗಿ ವಿವರಿಸುತ್ತಾ ಹೋಗುತ್ತಾರೆ ಈ ವಿವರಣೆಯನ್ನು ಓದಿದರೆ ಸಾಕು ಇಡೀ ನೇಕಾರ ವೃತ್ತಿಯ ಚಿತ್ರಣ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಇಷ್ಟು ಸ್ಪಷ್ಟವಾಗಿ, ನಿಖರವಾದ ನೇಕಾರ ವೃತ್ತಿಯನ್ನು ವಿವರಣೆಯನ್ನು ಯಾರೂ ನೀಡಿಲ್ಲ. ಆದ್ಯ ವಚನಕಾರ ದೇವರ ದಾಸಿಮಯ್ಯ ತನ್ನ ಒಂದೆರಡು ವಚನಗಳಲ್ಲಿ ಅಲ್ಲಲ್ಲಿ ನೆಯ್ಗೆ ವೃತ್ತಿಯ ಬಗ್ಗೆ ಪ್ರಸ್ತಾಪಿಸುತ್ತಾನೆಯೇ ವಿನಃ ಇಷ್ಟು ವಿವರಣೆ ನೀಡುವುದಿಲ್ಲ. ಇದು ಸುಜನಾ ಅವರಲ್ಲಿ ನೆಯ್ಗೆ ವೃತ್ತಿಯ ಬಗ್ಗೆ ಇರುವ ಆಸಕ್ತಿಯನ್ನು ಎತ್ತಿ ಹಿಡಿಯುತ್ತದೆ. ನೇಕಾರರ ಬದುಕಿನ ತವಕ ತಲ್ಲಣಗಳಿಗೆ ದನಿಯಾಗಿ ನಿಲ್ಲುತ್ತದೆ ಈ ಕವನ.

9. ನೇಕಾರರು ಇಂದಿನ ಸಮಾಜದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಇಂದಿನ ಶೋಷಿತ ಸಮಾಜದಲ್ಲಿ ಅವರ ಸ್ಥಾನಮಾನ, ನೇಕಾರ ವೃತ್ತಿಯ ಭವಿಷ್ಯ, ಸರ್ಕಾರ ಮತ್ತು ಸಮಾಜ ಅವರನ್ನು ನೋಡುತ್ತಿರುವ ದೃಷ್ಟಿಕೋನದ ಬಗ್ಗೆ, ಹಿಂದೆ ಆಳಿದವರೆಲ್ಲ... ಇಂದು ಆಳುತ್ತಿರುವವರೆಲ್ಲಾ... ಗಂಜಿ ಗುಂಡಿಯಲಷ್ಟೆ ನಮ್ಮ ಬ್ರಹ್ಮಾಂಡ ಒದಗಿರುವುದು, ಸಾಕು ಗಂಜಿ ಕೈ ತೊಳೆದು ಬನ್ನಿರಿ ಹೊರಗೆ, ಮೊದಲು ಹಸಿದಾದರೂ ಓದಿಸಿಕೊಳ್ಳಿ ನಿಮ್ಮ ಮಕ್ಕಳ ಎಂದು ನೇಕಾರರಿಗೆ ಕರೆ ನೀಡಿ ಎಚ್ಚರಿಕೆಯನ್ನು ನೀಡುತ್ತಾರೆ. ಸುಜನಾ ಇದು ನೇಕಾರಿಗೆ, ಸಮಾಜಕ್ಕೆ ಮುನ್ನುಡಿಯಾಗಿ ನಿಲ್ಲುತ್ತದೆ. ಅವರ ಚಿಂತನೆ ಇಂದಿಗೂ ಅನ್ವಯವಾಗುತ್ತದೆ.

10. 'ಯುಗ ಸಂಧ್ಯಾ ಮಹಾಕಾವ್ಯ ರಚಿಸುವ ಮೂಲಕ ಸುಜನಾ ಅವರು ಮಹಾಕಾವ್ಯ ರಚಿಸಿದವರ ಸಾಲಿಗೆ ಸೇರುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶ–ಇವರಿಗೆ 2002 ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭ್ಯವಾಗುತ್ತದೆ. ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಈವರೆಗೂ ಲಭ್ಯವಾಗಿರುವುದು ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕಾವ್ಯಕ್ಕೆ ಮತ್ತು ಸುಜನಾ ಅವರ 'ಯುಗ ಸಂಧ್ಯಾ' ಗ್ರಂಥಕ್ಕೆ ಎಂದಾಗ ಅದರ ಮೌಲ್ಯ ಹೆಚ್ಚುತ್ತದೆ.

11. ಸರಳತೆ ಮತ್ತು ಮುಗ್ದತೆಯ ಪ್ರತೀಕ ಸುಜನಾ ಅವರು. ಸಂಬಳದಿಂದ ಬಂದ ಹಣ ಬಂದಾಗ ನೋಟು ಎಣಿಸಿ ಇಷ್ಟು ಹಣ ಏತಕ್ಕೆ? ನಮಗಿಂತ ಕಡಿಮೆ ಜೀವನ ಸಾಗಿಸುವವರಿಗೆ ಇಂತಹ ಸೌಲಭ್ಯ ಇಲ್ಲವಲ್ಲ ಎಂದು ಮರುಗುತ್ತಿದ್ದರು.

12. ಕಾಯುವುದು ಒಂದು ತಪಸ್ಸು ಎಂದು ಸುಜನಾ ಅವರ ಉಪನ್ಯಾಸ ಭಾಷಣಗಳಲ್ಲಿ ಆಗಾಗ್ಗೆ ಉಲೇಖಿಸುತ್ತಿದ್ದರು. ಅವರ 'ಹೃದಯ ಸಂವಾದ' ಸಾಹಿತ್ಯ ವಿಮರ್ಶೆಯ ನವ ವಿಧಾನದ ರಾಜವೀಧಿಯಲ್ಲಿ ದೀಪಸ್ತಂಭದಂತೆ ಬೆಳಗಬಲ್ಲ ಕೃತಿ ವಿಮರ್ಶೆಯ ಹೊಸ

ದೃಷ್ಟಿ ಕೋನವನ್ನೆ ಹುಟ್ಟು ಹಾಕಿತು. 'ಮಹಾಭಾರತದಲ್ಲಿ ಅವರು ಯಾರೂ ಕಾಯಲಿಲ್ಲ' ಲೇಖನ ಎಲ್ಲರ ಮನಸ್ಸನ್ನ ನೆನಪಿಸುತ್ತದೆ. ಅಮೆರಿಕಾದ ಚಿಂತಕ ಮಾರ್ಟಿನ್ ಕಿಂಗ್ ಲೂಥರ್, ಅಮೆರಿಕಾದ ಗಾಂಧಿಯೆಂದೆ ಪ್ರಸಿದ್ಧರಾದ ಅವರು ಇಂದಿನ ಯುವ ಜನತೆಯ ಬಗ್ಗೆ ತಿಳಿಸುತ್ತಾ ಕಾಯದೆ ಎಲ್ಲವೂ ಮುಂಚಿತವಾಗಿ ಸಿಗುತ್ತಿರುವುದರಿಂದ ಸಿನಿಕರಾಗಿ ದುರಂತಕ್ಕೆ ಒಳಗಾಗುತ್ತಿದ್ದಾರೆ ಎಂದು ಅಭಿಪ್ರಾಯಿಸುತ್ತಾರೆ. ಕಾಯುವುದು ತಪಸ್ಸು ಎಂಬ ಸುಜನಾ ಅವರು ಮಾತು ಸಾರ್ವಕಾಲಿಕವಾಗುತ್ತದೆ.

13. ಜಾತಿ, ಗುಂಪು, ಅಧಿಕಾರ, ಹಣ ಯಾವುದೂ ಇಲ್ಲದೆ 81 ವರ್ಷ ಬದುಕು ಸಾಗಿಸಿದ 'ಸುಜನಾ' ಕೊನೆಯ ವರ್ಷಗಳಲ್ಲಿ ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದರು. ನೆನಪುಗಳು ಮಾಸಿ ಹೋಗಿ ಮರೆವಿನ ಛಾಯಿಲೆ ಆವರಿಸಿತು. ಹಾಗೇಯೇ ಅವರು ಆಡುವ ಮಾತು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ, ಅರ್ಥವಾಗುತ್ತಿರಲಿಲ್ಲ. ಒಮ್ಮೊಮ್ಮೆ ಹನ್ನೆರಡು ಗಂಟೆ ರಾತ್ರಿಯಲ್ಲಿಯೂ ಫೋನಾಯಿಸಿ ಮಾತನಾಡುತ್ತಿದ್ದರು. ಆ ಮಾತು ನಮಗೆ ಸ್ವಲ್ಪವೂ ಅರ್ಥವಾಗದೇ ಅವರಿಗೆ ಬೇಜಾರಾಗುತ್ತೆ ಎಂದು ಹೂಗೂಡುವುದರೊಂದಿಗೆ ಅಂತ್ಯವಾಗುತ್ತಿತ್ತು. ಒಮ್ಮೆಮ್ಮೆ ಅರ್ಧ ಗಂಟೆಗೂ ಈ ಮಾತು ಮುಂದುವರೆಯುತ್ತಿತ್ತು. 'ಯುಗಸಂಧ್ಯಾ' ಮಹಾಕಾವ್ಯವನ್ನು ನೀಡಿದ ಈ ಮಹಾನ್ ಚೇತನ ಪಡುತ್ತಿದ್ದ ಯಾತನೆ ಕರುಳು ಹಿಂಡುತ್ತಿತ್ತು. ಅವರ ಮಾತನ್ನು ಅರ್ಥ ಮಾಡದ ಪರಿಸ್ಥಿತಿ ಇಂದಿಗೂ ಕಣ್ಣ ಮುಂದೆ ಬಂದು ನಿಲ್ಲುತ್ತದೆ ಆ ಮಾತಿನಲ್ಲಿ ಏನೇನೊ ಆಶಯಗಳಿದ್ದವು... ಬಲ್ಲವರಾರು?

ಕನ್ನಡ ಸಾಹಿತ್ಯ ಸಂಸ್ಕೃತಿ ಲೋಕದ ಈ ಮೇರು ಕವಿ ದಿನಾಂಕ 15-05-2011 ರಂದು ನಮ್ಮನ್ನೆಲ್ಲಾ ಅಗಲಿ ಇಹಲೋಕ ತ್ಯಜಿಸುತ್ತಾರೆ. ಅವರ ಕೃತಿಗಳನ್ನು ಅಧ್ಯಯನ ಮಾಡುವುದೊಂದೆ ಅವರಿಗೆ ನಾವು ಸಲ್ಲಿಸುವ ಕೃತಜ್ಞತೆ.

**ಕೆ.ಜೆ.ನಾರಾಯಣ**
ಕಿಕ್ಕೇರಿ, ವಿಮರ್ಶಕರು,
ಮೈಸೂರು. ಮೋ.8453235599

**"ಜನವ ಪ್ರೀತಿಸಿ, ಇಹವಿ ಸುಖವನು ಬಿತ್ತಿಬೆಳೆ**
**ಸ್ವರ್ಗದುದ್ಯಾನದಾಮಿಷ ಬೇಡ:**
**ಇರಲಲ್ಲೆ ಮೇಲೆ ಕಲ್ಪತರು ಕಾಮಧೇನುಗಳು,**
**ನೆಲವ ಪ್ರೀತಿಸು ಕೊಡುವುದು ಸಮಸ್ತವನು ವಸುಧೆ"**
**ಡಾ॥ ಸುಜನಾ**

# ಜೀವಂತ ಸುಜನಾ

ಒಳ್ಳೆಯವರು ಸಜ್ಜನ ಸಜ್ಜನಿಕೆಯಿಂದ ಕೂಡಿದ ಎಂಬ ಪದದ ಅರ್ಥವೇ 'ಸುಜನಾ'. ಈ ಪದ ಅವರ ವ್ಯಕ್ತಿತ್ವ ನೋಡಿಯೇ ಕಾವ್ಯನಾಮವಾಗಿ ಅವರಿಗೆ ಬಂದಿರಬಹುದು ಎಂದೆನಿಸುತ್ತದೆ.

ಸುಜನಾರವರು ತುಂಬಾ ವಿಶೇಷವಾದ ಅಪರೂಪ ಸಾಹಿತಿಗಳಲ್ಲಿ ಒಬ್ಬರಾಗಿ ನಿಲ್ಲುತ್ತಾರೆ. ಏಕೆಂದರೆ ಕಾಲೇಜಿನಲ್ಲಿ ಇಂಟರ್ಮೀಡಿಯಟ್ (ಪಿ.ಯು.ಸಿ.) ವಿಜ್ಞಾನ ವಿಷಯದಲ್ಲಿ ಓದಿ ಪುನಃ ಕನ್ನಡ ಭಾಷೆಯನ್ನು ಆಯ್ಕೆ ಮಾಡಿಕೊಂಡು ಓದಿ ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಪಡೆಯುವುದು ಅಷ್ಟು ಸುಲಭವಾದುದ್ದಲ್ಲ.

ಶ್ರೀಯುತ ರಾಷ್ಟ್ರಕವಿ ಕುವೆಂಪುರವರ ಶಿಷ್ಯವೃಂದದಲ್ಲಿ ಹೃದಯದ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡವರು ಸುಜನಾರವರು ಎಂದರೆ ತಪ್ಪಾಗಲಾರದು.

ಇನ್ನು ಒಂದು ಹಂತ ಮುಂದೆ ಹೋಗಿ ಹೇಳುವುದಾದರೆ ಶ್ರೀಯುತ ಕುವೆಂಪುರವರನೊಳಗೊಂಡು, ಅವರ ಮಹಾಕಾವ್ಯವಾಗಲಿ, ಕೃತಿಗಳಾಗಲಿ ಎಲ್ಲವನ್ನು ಪರಕಾಯ ಪ್ರವೇಶ ಮಾಡಿದ ಏಕೈಕ ವ್ಯಕ್ತಿ ಎಂದರೆ ಅದು ಸುಜನಾರವರೊಬ್ಬರೆ.

ಒಂದು ಮಹಾಕಾವ್ಯ ರಚಿಸುವುದು ಅದು ಸುಲಭದ ಕೆಲಸವೇನಲ್ಲ. ವರ್ಷಗಟ್ಟಲೆ ಸಮಯ ಮೀಸಲಿಡಬೇಕು ಮತ್ತು ಬರವಣಿಗೆಯಲ್ಲಿ ಅಪಾರ ಜ್ಞಾನ, ಮೌಲ್ಯಾಧಾರಿತ ಸಾಹಿತ್ಯ ವಿಷಯ ಸಂಗ್ರಹ, ಆಳವಾದ ಅಧ್ಯಯನ, ಪುಸ್ತಕ ಪಾಂಡಿತ್ಯ, ಓದುವಾಗ ಎಲ್ಲರ ಭಾವನೆಯು ಒಂದೇ ಕಡೆ ಕೇಂದ್ರೀಕೃತವಾಗಿಸುವಂತಹ ಬರವಣಿಗೆ ಇವೆಲ್ಲವೂ ಒಬ್ಬ ಸಾಹಿತಿಯ ಮಹಾಕಾವ್ಯ ಪುಸ್ತಕದ ಪುಟಗಳಲ್ಲಿರಬೇಕು. ಅದು ದಿಗ್ಗಜ ಸಾಹಿತಿ ಸುಜನಾರವರಿಗೆ ಇದ್ದುದ್ದರಿಂದ ಪುಸ್ತಕದ ಭಂಡಾರವು ಪುಸ್ತಕದ ಬಿಳಿಯ ಹಾಳೆಯ ಪುಟಗಳಿಗೆ ಹಸ್ತದಿಂದ ಅಕ್ಷರ ರೂಪದಲ್ಲಿ ಮಹಾಕಾವ್ಯ, ಕವನ, ವಿಮರ್ಶೆಗಳಾಗಿ ಜನ್ಮ ಪಡೆದವು.

ಸುಜನಾರವರು ರಚಿಸಿರುವ ಮಹಾಕಾವ್ಯ ಯುಗಸಂಧ್ಯಾ ಆಗಿರಬಹುದು, ಇತರೇ ಕೃತಿಗಳಾಗಿರಬಹುದು, ಒಂದೊಂದು ಸಾಲುಗಳನ್ನು ಓದುತ್ತಿದ್ದರೆ ಮನಃಸ್ಮೃತಿಪಟಲ ಸೇರುತ್ತಿದ್ದವು. ಜ್ಞಾನವಿಕಾಸ, ವ್ಯಕ್ತಿತ್ವ ವಿಕಾಸ ಹೊಂದುವಂತಹ ನುರಿತ ಸಾಹಿತ್ಯ ಆ ಶಕ್ತಿ ಅವರ ಬರವಣಿಗೆಯಲ್ಲಿತ್ತು.

ಸುಜನಾ ವಿರಚಿತ ಯುಗಸಂಧ್ಯಾ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ದೊರೆತರೂ... ಪಂಪ ಪ್ರಶಸ್ತಿಯಾಗಲಿ... ನೃಪತುಂಗ ಪ್ರಶಸ್ತಿಯಾಗಲಿ ಇವರಿಗೆ ಸಲ್ಲದಿರುವುದು ನೋವಿನ ಸಂಗತಿ. ಸುಜನಾರವರ ಧೈತ್ಯ ಸಾಹಿತ್ಯ ಸಾಧನೆಯ ಹಿಂದೆ ಮನೆಯವರ ಮತ್ತು ಮಕ್ಕಳ ಸಹಕಾರ ತ್ಯಾಗ ಮರೆಯುವಂತದ್ದಲ್ಲ.

ಗುರುಗಳಾದ ಮಾನ್ಯ ಕುವೆಂಪುರವರು ಶ್ರೀ ರಾಮಾಯಣದರ್ಶನಂ ಮಹಾಕಾವ್ಯ ರಚಿಸಿದರೆ ಅವರ ಶಿಷ್ಯರಾಗಿ ಸುಜನಾರವರು ಅವರ ಹಾದಿಯಲ್ಲೇ ಸಾಗಿ ಮಹಾಭಾರತದ 'ಯುಗಸಂಧ್ಯಾ' ಮಹಾಕಾವ್ಯ ರಚಿಸಿದರು. ಪ್ರಾಯಶಃ ಸುಜನಾರವರು ಬಿಟ್ಟರೆ ಕುವೆಂಪುರವರ ನಂತರದಲ್ಲಿ ಮತ್ತಾವ ಸಾಹಿತಿಯೂ ಮಹಾಕಾವ್ಯ ರಚಿಸಿರಲಿಲ್ಲ. ಇವರೇ ಕಡೆಯ ಕಾವ್ಯ ದಿಗ್ಗಜ ಇರಬಹುದು ಎಂದು ನನ್ನ ಭಾವನೆ.

ಎಲ್ಲೋ ಒಂದು ಕಡೆ ಹಿಂದಿನ ಮತ್ತು ಇಂದಿನ ಸರ್ಕಾರಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಸುಜನಾರವರನ್ನು ಜ್ಞಾಪಿಸಿಕೊಳ್ಳದಿರುವುದು ಅತ್ಯಂತ ಶೋಚನೀಯ.

ಇವರ ಹಾದಿ ಜೀವನಚರಿತ್ರೆ, ತುಂಬು ಸಾಹಿತ್ಯ ಯಾವುದೂ ಕೂಡ ಶಾಲಾ ಕಾಲೇಜುಗಳ ಪಠ್ಯ ಪುಸ್ತಕಗಳಲ್ಲಿ ಮಕ್ಕಳುಗಳು ಓದುವಂತಾಗಲಿಲ್ಲ. ಅದಲ್ಲದೆ ಸರ್ಕಾರಗಳು ಕೂಡ ಸುಜನಾರವರ ಹೆಸರಿನಲ್ಲಿ ಒಂದು ಪ್ರಶಸ್ತಿಯನ್ನಾದರು ಘೋಷಣೆ ಮಾಡಬೇಕಿತ್ತು. ಯುವ ಸಾಹಿತಿಗಳಿಗೆ ಬರಹಗಾರರಿಗೆ ಉತ್ತೇಜನ ಕೊಟ್ಟು ಕನ್ನಡ ಸಾಹಿತ್ಯ ಉಳಿಸಿ ಬೆಳೆಸುವ ಹಾಗೆ ಬೆನ್ನುತಟ್ಟಿ ಬೆಳಕು ಚೆಲ್ಲಬೇಕಿತ್ತು.

ಸುಜನಾರವರಿಗೂ ಅಪಾರ ಶಿಷ್ಯವೃಂದವೂ ಸಹ ಇದೆ. ಪ್ರತಿ ವರ್ಷ ಸುಜನಾರವರು ಏಪ್ರಿಲ್ – 13 ಹುಟ್ಟಿದ ದಿನದಂದು ಶಿಷ್ಯವೃಂದದವರೆಲ್ಲರೂ ಕೂಡಿ 'ಆತ್ಮಶ್ರೀ ಸುಜನಾ' ಎಂಬ ಅಭಿವಂದನಾ ಕಾರ್ಯಕ್ರಮವನ್ನು ವಿನಮ್ರದಿಂದ ಗೌರವ ಸೂಚಿಸಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಸರ್ಕಾರ ಮಾಡಬೇಕಿದ್ದ ಕೆಲಸವನ್ನು ಖಾಸಗಿಯಾಗಿ ನಡೆಸಿಕೊಂಡು ಬರುತ್ತಿದೆ ಎಂಬುದೇ ಪದೇ ಪದೇ ನೊವುಂಟು ಮಾಡುತ್ತದೆ.

– **ಕಿಕ್ಕೇರಿ ದಿನೇಶ್‌ಕುಮಾರ್**
ಬೆಂಗಳೂರು.
ಮೊ. 6360197870

# ಸುಜನಾ : ಒಂದು ದೊಡ್ಡ ಯಶಸ್ಸು

ಕನ್ನಡದಲ್ಲಿ ಸುಜನಾ ಎಂಬ ಕಾವ್ಯನಾಮದಿಂದ ಹೆಸರಾದ ಕವಿ ಮತ್ತು ವಿಮರ್ಶಕ ಎಸ್.ನಾರಾಯಣಶೆಟ್ಟಿಯವರು. ನಾನು ನನ್ನ ಲೇಖನಕ್ಕೆ 'ಸುಜನಾ : ಒಂದು ದೊಡ್ಡ ಯಶಸ್ಸು' ಎಂದು ಹೆಸರಿಡಲು ಕಾರಣವೇನೆಂದರೆ, ಸುಜನಾ ಎಂಬ ಪದದ ಅರ್ಥವೇ ಒಂದು ದೊಡ್ಡ ಯಶಸ್ಸು, ಆ ಅರ್ಥದ ರೀತಿಯಲ್ಲಿಯೇ ತಮ್ಮ ಜೀವನದಲ್ಲಿ ಅಪಾರವಾದ ಯಶಸ್ಸನ್ನು ಕಂಡವರು ಎಸ್.ನಾರಾಯಣಶೆಟ್ಟರು.

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲಿನಲ್ಲಿ 1930, ಏಪ್ರಿಲ್ 13 ರಂದು ಜನಿಸಿದ ಎಸ್.ನಾರಾಯಣಶೆಟ್ಟರ ತಂದಯ ಹೆಸರು ಸುಬ್ಬಶೆಟ್ಟಿ ಮತ್ತು ತಾಯಿ ಗೌರಮ್ಮ. ಹೆಂಡತಿಯ ಹೆಸರು ಲಕ್ಷ್ಮಿ. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಲ್ಲೇ ಮುಗಿಸಿದ ಸುಜನಾ ಅವರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ವಿಜ್ಞಾನದಲ್ಲಿ ಇಂಟರ್ಮೀಡಿಯಟ್ ಓದಿದರು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ವಿಜ್ಞಾನ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದ ಸುಜನಾ ಅವರು ಕನ್ನಡ ಸಾಹಿತ್ಯದ ಮೇಲಿನ ಅಪಾರವಾದ ಪ್ರೀತಿಯಿಂದಾಗಿ ಮಹಾರಾಜ ಕಾಲೇಜಿನಲ್ಲಿ ಎಂ.ಎ. ಪದವಿಯನ್ನು ಮಾಡಲು ನಿಶ್ಚಯಿಸಿದರು. ಆದರೆ ಅವರು ವಿಜ್ಞಾನದ ವಿದ್ಯಾರ್ಥಿಯಾದುದರಿಂದ ಪ್ರವೇಶವನ್ನು ನಿರಾಕರಿಸಲಾಯಿತು. ಆದರೂ ಕೂಡ ಅವರು ಛಲ ಬಿಡದೆ ಕನ್ನಡ ಸಾಹಿತ್ಯವನ್ನು ಓದುವ ಸಲುವಾಗಿ ಕೊನೆಗೆ ಬಿ.ಎ. ಆನರ್ಸ್‌ಗೆ ಪ್ರವೇಶವನ್ನು ಪಡೆದು, ಆನಂತರ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಸ್ವಲ್ಪ ಕಾಲಗಳ ಕಾಲ ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರಾಗಿ ಕಾರ್ಯ ನಿರ್ವಹಿಸಿ, ನಂತರ ಯುವರಾಜ ಕಾಲೇಜಿನ ಪ್ರಾಚಾರ್ಯರಾಗಿ ನಿವೃತ್ತಿ ಹೊಂದಿದರು.

ಬಹುಶಃ ಸುಜನಾ ಅವರು ಅಂದು ವಿಜ್ಞಾನ ಕ್ಷೇತ್ರದಿಂದ ಕಲಾಕ್ಷೇತ್ರಕ್ಕೆ ಬರದೇ ಹೋಗಿದ್ದರೆ ಇಂತಹ ಶ್ರೇಷ್ಠ ಸಾಹಿತಿಯನ್ನು ನಾವು ಕಳೆದುಕೊಳ್ಳುತ್ತಿದ್ದೆವು.

ಸುಜನಾರವರು ಕುವೆಂಪುರವರ ನೆಚ್ಚಿನ ಶಿಷ್ಯಂದಿರಲ್ಲಿ ಒಬ್ಬರು. ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಕೃತಿಯಲ್ಲಿ ಲೋಪದೋಷಗಳೇನಾದರೂ ಇದ್ದರೆ ಅದನ್ನು ಸರಿಪಡಿಸುವ ಕಾರ್ಯವನ್ನು ನಿರ್ವಹಿಸಲು ಕುವೆಂಪುರವರು ಸುಜನಾರವರಿಗೆ ನೀಡಿದ್ದರಂತೆ. ಇದು ಸುಜನಾರವರಿಗೆ ಹೆಮ್ಮೆಯನ್ನು ತಂದು ಕೊಡುವ ವಿಷಯ. ಸುಜನಾರವರ ಮೊದಲ ಕವನ ಸಂಕಲನ ಮಂಗಳಾರತಿ ನಾಣ್ಯಯಾತ್ರೆ 1965ರಲ್ಲಿ ಪ್ರಕಟವಾಯಿತು. 1982ರವರೆಗಿನ ಇವರ ಕವನಗಳು ಒಂದೇ ಸೂರಡಿಯಲ್ಲಿ ಎಂಬ ಶಿರ್ಷಿಕೆಯಡಿಯಲ್ಲಿ ಪ್ರಕಟವಾಗಿವೆ.

**ಸುಜನ ರವರ ಇತರೆ ರಚನೆಗಳು**

1. ಯುಗಸಂಧ್ಯಾ
2. ಹೃದಯ ಸಂವಾದ
3. ಭಾರತ ಕಥಾಮಂಜರಿ
4. ಪರಂಪರೆ
5. ಕುವೆಂಪು, ಪು.ತಿ.ನ. ಸಾಹಿತ್ಯದ ಹೊಳಹುಗಳು
6. ಚಿಲಿಪಿಲಿ ಮಕ್ಕಳ ಕವನ ಸಂಕಲನ
7. ಇಬ್ಬನಿ ಆರತಿ ವಚನ ಕವನ ಸಂಕಲನ
8. ಕಣಗಳು
9. ಏಜಾಕ್ಸ್ (ಅನುವಾದಿತ ನಾಟಕ)
10. ಬಾಲಕಾಂಡ ವಾಲ್ಮೀಕಿ ರಾಮಾಯಣ (ಸಿ.ಪಿ.ಕೆ.ಯೊಡನೆ) ಅನುವಾದಿತ ಕೃತಿಯನ್ನು ಇವರು ರಚಿಸಿದ್ದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆಯುವುದು ಅಷ್ಟು ಸುಲಭದ ಮಾತಲ್ಲ. ಆದರೆ ಸುಜನಾ ಅವರಿಗೆ ತಮ್ಮ ಯುಗಸಂಧ್ಯಾ ಕೃತಿಗೆ ಈ ಪ್ರಶಸ್ತಿ ಲಭಿಸಿತು. ಸುಜನಾರವರು ಈ ಮಹಾಕಾವ್ಯವನ್ನು ಹತ್ತು ವರ್ಷಗಳ ಕಾಲಾವಧಿಯಲ್ಲಿ ರಚಿಸಿದರು. ಇದು ಮಹಾಭಾರತ ಪಾಂಡವರ ಆನಂತರದ ಕಥೆ. ಪಂಪನಾಗಲೀ, ಕುಮಾರವ್ಯಾಸನಾಗಲೀ, ಮಹಾಭಾರತದ ಯುದ್ಧದ ಆನಂತರದ ಕಥೆಯನ್ನು ಹೇಳುವ ಪ್ರಯತ್ನ ಮಾಡಲಿಲ್ಲ. ಆದರೆ ಸುಜನಾ ಅಂತಹ ಸಾಹಸವನ್ನು ಮೆರೆದರು ಮತ್ತು ಒಂದು ದೊಡ್ಡ ಯಶಸ್ಸನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆಯುವ ಮೂಲಕ ಕಂಡರು.

ಅಲ್ಲದೆ ವರ್ಧಮಾನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ದೇವರಾಜ ಬಹದ್ದೂರ್ ಪ್ರಶಸ್ತಿ ಇಂತಹ ಹಲವಾರು ಪ್ರಶಸ್ತಿಗಳನ್ನು, ಯಶಸ್ಸನ್ನು ತನ್ನ ಮುಡಿಗೇರಿಸಿಕೊಂಡ ಧೀಮಂತ ಕವಿ.

ನನ್ನ ಪ್ರಕಾರ ಸುಜನಾ ಎಂದರೆ :-

ಸು : ಸುವರ್ಣ ಕನ್ನಡ ಸಾಹಿತ್ಯದಲ್ಲಿ
ಜ : ಜನಿಸಿದ ಒಂದು ದೊಡ್ಡ ಯಶಸ್ಸು
ನಾ : ನಾರಾಯಣಶೆಟ್ಟರು.

ಒಟ್ಟಾರೆಯಾಗಿ ಸುಜನಾರವರು ಇಂದು ನಮ್ಮ ಜೊತೆ ಇಲ್ಲದೇ ಇರಬಹುದು, ಆದರೆ ಅವರ ಕೃತಿಗಳ ಮೂಲಕ ನಮ್ಮ ಕನ್ನಡ ನಾಡಿನಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಅವರ ಒಂದು ದೊಡ್ಡ ಯಶಸ್ಸು ಕನ್ನಡಿಗರ ಯಶಸ್ಸು.

– ಯಶೋಧ. ಆರ್.ಪಾಂಡುಶೆಟ್ಟಿ
ರಾಚೇನಹಳ್ಳಿ,
ಶ್ರವಣಬೆಳಗೊಳ (ಹೋ)
ಚನ್ನರಾಯಪಟ್ಟಣ ತಾ.
ಹಾಸನ
ಮೊ.8431598095

**"ಈ ಮಹಾಯುಗದಲ್ಲಿ ನಡೆಯುತ್ತಿರುವ ಬಾಹ್ಯಾಂತರ ಕ್ರಾಂತಿ ಸಂಕ್ರಾಂತಿಯನ್ನೂ ಗ್ರಹಿಸಿಕೊಳ್ಳುವ ಪ್ರತಿಮಿಸುವ ಪ್ರತಿಭಾ ಸಂಪನ್ನ ಕವಿ–ಸಾಹಿತಿ ನಿಜಕ್ಕೂ ಧನ್ಯ"**
**– ಡಾ. ಸುಜನಾ; ಸಂವಹನ–ಪುಟ 417**

# ನಾನು ಮೆಚ್ಚಿದ ಗಣ್ಯರು
# ಗ್ರಾಮೀಣ ಮಕ್ಕಳ ಹಿತ ಚಿಂತನೆಯ ಪ್ರೊ. ಸುಜನಾ

ಪ್ರೊ.ಸುಜನಾ ಅವರು ಮೈಸೂರಿನ ಯುವರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ದಿನಗಳು. ನಾನು ಮೈಸೂರಿನ ಆರತಿ ದಿನಪತ್ರಿಕೆಯಲ್ಲಿ ಉಪಸಂಪಾದಕನಾಗಿ ಕಾರ್ಯ ಮಾಡುತ್ತಿದ್ದೆ. ಜೊತೆಗೆ ಗೆಳೆಯ ಸಿಂಗನಹಳ್ಳಿ ಸ್ವಾಮಿಗೌಡ ಜೊತೆ ಸೇರಿ ಗ್ರಾಮಾಂತರ ಬುದ್ಧಿ ಜೀವಿಗಳ ಬಳಗ ಆರಂಭಿಸಿ ಆ ಸಂಸ್ಥೆಯ ಮೂಲಕ ಕವಿಗೋಷ್ಠಿಯನ್ನು ಆಯೋಜಿಸುತ್ತಿದ್ದೆ,

ಹಲವು ಕವಿಗೋಷ್ಠಿಗಳಿಗೆ ಹೆಸರಾಂತ ಸಾಹಿತಿ ಸುಜನಾ ಅವರನ್ನು ಉದ್ಘಾಟಕರಾಗಿ, ಅಧ್ಯಕ್ಷರಾಗಿ, ಅತಿಥಿಗಳಾಗಿ ಆಗಮಿಸುತ್ತಿದ್ದರು. ಅವರ ಮಾತು ಹಾಗೂ ಉಡುಪಿನಲ್ಲಿ ಯಾವಾಗಲೂ ಸರಳತೆ, ಅಣ್ಣ ಎಂದು ಹೃದಯ ತುಂಬಿ ಮಾತನಾಡಿಸುತ್ತಿದ್ದರು. ಕವಿಗಳನ್ನು ಕಂಡರೆ ಅಪಾರ ಮಮತೆ. ಪ್ರೊ.ಹೆಚ್.ಎಸ್.ಕೆ., ಡಾ.ಸಿ.ಪಿ.ಕೆ., ಪ್ರೊ.ಸುಜನಾ., ಡಾ.ಅಕಬರ ಆಲಿ ಇವ್ರು ಕವಿಗೋಷ್ಠಿಯಲ್ಲಿ ಪಾಲ್ಗೊಂಡರು ಎಂದರೆ ಅದು ವಿದ್ವತ್ ಪೂರ್ಣ ಸಭೆ ಎನಿಸುತ್ತಿತ್ತು. ನಮ್ಮ ಸಂಸ್ಥೆಯ ಸುಮಾರು ಒಂದು ನೂರಕ್ಕೂ ಹೆಚ್ಚು ಕವಿಗೋಷ್ಠಿಗಳಲ್ಲಿ ಈ ಗಣ್ಯರ ಸಮ್ಮುಖದಲ್ಲಿ ಜರುಗಿದೆ. ಇದು ನನ್ನ ಸೌಭಾಗ್ಯ.

ಸುಜನಾ ಅವ್ರು ಮೈಸೂರು ಯುವರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ನನ್ನ ಗೆಳೆಯನ ಸಹೋದರ ಒಬ್ಬ ಹಳ್ಳಿಯಿಂದ ಒಂದು ಮೈಸೂರಿನಲ್ಲಿ ಪಿ.ಯು.ಸಿ. ಓದುತ್ತಿದ್ದ. ಹಳ್ಳಿಯ ಹುಡುಗ ವಿಜ್ಞಾನ ತೆಗೆದುಕೊಂಡು ಸರಿಯಾಗಿ ಓದಲಾಗದೆ ಕೇವಲ ಶೇ.40 ಅಂಕ ಪಡೆದಿದ್ದ. ಆತ ಪದವಿ ಓದಲು ಯುವರಾಜ ಕಾಲೇಜಿಗೆ ಅರ್ಜಿ ಹಾಕಿದ್ದ. ಆದ್ರೆ ಕಡಿಮೆ ಅಂಕ ಪಡೆದಿದ್ದರಿಂದ ಆತನಿಗೆ ಅಲ್ಲಿ ಪ್ರವೇಶ ಸಿಕ್ಕಿರಲಿಲ್ಲ.

ನಿನಗೆ ಸುಜನಾ ಪರಿಚಯ ಇದ್ದಾರಲ್ಲ, ಒಂದು ಮಾತು ಹೇಳಿ ಆ ಕಾಲೇಜಿನಲ್ಲಿ ನನ್ನ ತಮ್ಮನಿಗೆ ಬಿ.ಎಸ್ಸಿ ಗೆ ಸೀಟು ಕೊಡಿಸು ಅಂತ ನನ್ನ ಸ್ನೇಹಿತ ಗಂಟು ಬಿದ್ದ. ಕೊನೆಗೆ ಸುಜನಾ ನೋಡಲು ಕರೆದೊಯ್ದೆ.

ಸುಜನಾ ಅವ್ರಿಗೆ ಚೀಟಿ ಕಳಿಸಿದೆ. ಏನೂ ಭೇರ್ಯ ಅಣ್ಣ, ಏನು ಕವಿಗೋಷ್ಠಿಗೆ ಕರೆಯಲು ಬಂದಿರ, ಕಾಲೇಜು ಪ್ರವೇಶದ ಸಮಯ, ಈ ಬಾರಿ ನಾನು ಬರಲು ಆಗುವುದಿಲ್ಲ ಅಂತ ಸುಜನಾ ನುಡಿದರು.

ಇಲ್ಲ ಸರ್, ನನ್ನ ಗೆಳೆಯನ ತಮ್ಮನಿಗೆ ನಿಮ್ಮ ಕಾಲೇಜಿನಲ್ಲಿ ಸೀಟು ಬೇಕಾಗಿತ್ತು ಅಂತ ಹೇಳಿದೆ. ಯಾಕ್ರೀ ಅರ್ಜಿ ಹಾಕಿಲ್ಲವೇ.. ಅಂತ ಕೇಳಿದರು. ಸರ್ ಹಾಕಿದ್ದಾನೆ, ಅವನಿಗೆ ಅಂಕಗಳು ಕಡಿಮೆ ಬಂದಿದೆ, ಆತ ಹಳ್ಳಿಯ ಹುಡುಗ, ವಿಜ್ಞಾನ ಅರ್ಥವಾಗದೆ ಕಡಿಮೆ ಅಂಕ ಪಡೆದಿದ್ದಾನೆ. ಆತನಿಗೆ ನಿಮ್ಮ ಕಾಲೇಜಿನಲ್ಲಿ ಸೀಟು ಸಿಕ್ಕಿಲ್ಲ. ಅದಕ್ಕಾಗಿ ನಿಮ್ಮನ್ನು ನೋಡಲು ಬಂದೆ ಅಂತ ತಿಳಿಸಿದೆ. ಆ ಹುಡುಗನ್ನ ಕರೆಯಿರಿ ಎಂದರು. ಪಾಪ ಗ್ರಾಮೀಣ ಮಕ್ಕಳು, ವಿಜ್ಞಾನ ವಿಷಯ ಹಾಗೂ ಆಂಗ್ಲ ಮಾಧ್ಯಮ ಎರಡೂ ಅರ್ಥವಾಗದೆ ಕಷ್ಟ ಪಡುತ್ತವೆ ಅಂತ ಸುಜನಾ ನೋವಿನೊಂದಿಗೆ ನುಡಿದರು.

ಆ ವೇಳೆಗೆ ವಿದ್ಯಾರ್ಥಿ ಪ್ರಿನ್ಸಿಪಾಲ್ರ ಕೊಠಡಿಯೊಳಕ್ಕೆ ಬಂದ. ನೋಡಪ್ಪ ನಿನಗೆ ಸೀಟು ಕೊಡುತ್ತೇನೆ. ನೀನು ಮಹಾತ್ಮ ಗಾಂಧೀಜಿ ಅವರ ಫೋಟೋ ಮುಟ್ಟಿ ಚೆನ್ನಾಗಿ ಓದುತ್ತೇನೆ ಎಂದು ಪ್ರಮಾಣ ಮಾಡು ಅಂತ ಸೂಚಿಸಿದರು. ಆ ಹುಡುಗ ಪ್ರಮಾಣ ಮಾಡಿದ, ಆತನಿಗೆ ಕಾಲೇಜಿನಲ್ಲಿ ಪ್ರವೇಶ ನೀಡಿದರು. ಆ ವಿದ್ಯಾರ್ಥಿ ಈಗ ನ್ಯಾಯಾಂಗ ಇಲಾಖೆಯಲ್ಲಿ ಉತ್ತಮ ಸ್ಥಾನದಲ್ಲಿ ಇದ್ದಾನೆ. ಸಾಹಿತಿಗಳನ್ನು ಕಂಡರೆ ಬಹಳ ಗೌರವ ನೀಡುತ್ತಾನೆ. ಸುಜನಾ ಅವರ ಸರಳತೆ, ಗ್ರಾಮೀಣ ಪರ ಚಿಂತನೆಗೆ ಇದು ನೇರ ನಿದರ್ಶನ.

ಸರಿ ಸುಮಾರು 2000ನೇ ಇಸವಿಯ ದಿನಗಳು ಅಂದು ರಾಜ್ಯದ ಅತ್ಯುತ್ತಮ ಭಾವಗೀತೆಗಳ ಗಾಯಕಿ ಎಂದು ಹೆಸರು ಪಡೆದಿದ್ದ ಶ್ರೀಮತಿ ಶಾಂತಾ ಜಗದೀಶ್ ಅವರು ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ವಾಸವಿದ್ದರು. ಅವರು ಭಾವಸಂಪದ ಎಂಬ ಗಾಯನ ವೇದಿಕೆ ಆರಂಭಿಸಿದರು. ಅವರು ಅಂದಿನ ಜನಪ್ರಿಯ ಕವಿಗಳಾದ ಡಾ.ಸಿ.ಪಿ.ಕೆ., ಡಾ.ಅಕಬರ ಆಲಿ, ಪ್ರೊ.ಹೆಚ್.ಎಸ್.ಕೆ., ಬೀ.ನಂ.ಚಂದ್ರಯ್ಯ, ಪ್ರೊ.ಕೆ.ಭೈರವಮೂರ್ತಿ, ಮಳಲಿ ವಸಂತ ಕುಮಾರ್, ಬಿ.ಎಸ್.ನಾಗರಾಜರಾವ್ ಇವರೊಡನೆ ನನ್ನ ಹಾಗೂ ಅವರ ಸ್ವರಚಿತ ಕವನಗಳನ್ನು ಸುಶ್ರಾವ್ಯವಾಗಿ ಹಾಡಿ ಅದನ್ನು ಭಾವ ಸಂಪದ ಎಂಬ ಕ್ಯಾಸೆಟ್ ಮೂಲಕ ಹೊರತಂದರು. ಆ ಕ್ಯಾಸೆಟ್ ಲೋಕಾರ್ಪಣೆ ಸಂದರ್ಭದಲ್ಲಿ ಸುಜನಾ ಹೇಳಿದ ಮಾತು ನನ್ನ ಬದುಕಿನ ಮೇಲೆ ಅಪಾರ ಪರಿಣಾಮ ಬೀರಿತು.

ಕವಿಗಳು, ಚಿಂತಕರು, ಸಮಾಜಮುಖಿ ಆಗಿರುವ ವ್ಯಕ್ತಿಗಳು ಸರಳ ಬಾಳುವೆ ನಡೆಸಬೇಕು. ಜಾತ್ಯಾತೀತರಾಗಿ ಬದುಕಬೇಕು, ಇಲ್ಲದಿದ್ದರೆ ಭವಿಷ್ಯದಲ್ಲಿ ಯುವ ಜನಾಂಗ ಎಂದಿಗೂ ನಮ್ಮನ್ನು ಕ್ಷಮಿಸುವುದಿಲ್ಲ. ಸುಜನಾ ಅವರ ಈ ಕಿವಿಮಾತು ಎಲ್ಲ ಕಾಲಕ್ಕೂ ಅನ್ವಹಿಸುವಂತಹದ್ದು.

ಸುಜನಾ ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ರಾಷ್ಟ್ರಕವಿ ಕುವೆಂಪು ಅವರ ಪ್ರಭಾವಕ್ಕೆ ಒಳಗಾಗಿ ಬದುಕನ್ನು ಸರಳವಾಗಿ ಕಟ್ಟಿಕೊಂಡವರು. ಜಾತ್ಯಾತೀತವಾಗಿಯೇ ಬದುಕು ಕಟ್ಟಿಕೊಂಡವರು. ಅಂತಹವರ ಜೀವನ ಹಾಗೂ ಸಾಹಿತ್ಯ ಸೇವೆಯ ಬಗ್ಗೆ ಕನ್ನಡ ಸಾಹಿತ್ಯ ಪ್ರಪಂಚ, ಕರ್ನಾಟಕ ರಾಜ್ಯ ಸರ್ಕಾರ ದಿವ್ಯ ಮೌನವಹಿಸಿರುವುದು ಅತ್ಯಂತ ದುಃಖದ ಸಂಗತಿ.

ಇಂದಿನ ಸಾಹಿತ್ಯದ ವಿದ್ಯಾರ್ಥಿಗಳಿಗೆ ಮಹಾಕವಿ ಸುಜನಾ ಅವರ ಕೊಡುಗೆಯನ್ನು ಅವರ ಸರಳ ಜೀವನ, ಆದರ್ಶಗಳು ಹಾಗೂ ಕೃತಿಗಳನ್ನು ತಿಳಿಸಬೇಕು. ಯಾವುದೇ ಅಧಿಕಾರ, ಅಂತಸ್ತು ಪಡೆದರೂ ಸರಳತೆ, ನಿಸ್ಪೃಹತೆ ತ್ಯಜಿಸದ ಸುಜನಾ ಅವರ ಜೀವನ ಮುಂದಿನ ಯುವ ಪೀಳಿಗೆಗೆ ದಾರಿದೀಪವಾಗಬೇಕು. ಈ ಬಗ್ಗೆ ರಾಜ್ಯ ಸರ್ಕಾರ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಅಕಾಡೆಮಿ ಕಾರ್ಯಕ್ರಮಗಳನ್ನು ರೂಪಿಸಬೇಕಾದ ಅಗತ್ಯವಿದೆ.

– **ಡಾ. ಭೇರ್ಯ ರಾಮಕುಮಾರ್**
ಕೃಷ್ಣರಾಜನಗರ, ಮೈಸೂರು ಜಿಲ್ಲೆ
ಮೋ. ನಂ. 6363172368

**“ಪೂರ್ಣವಿದು, ಪೂರ್ಣವದು;**
**ಕೂಡಿ ಕಳೆದರೂ**
**ಪೂರ್ಣವುಳಿವುದಖಂಡವಾಗಿಯೇ!!”**
**– ಡಾ. ಸುಜನಾ**

# ಸುಜನಾ

ಕ್ಷೀರಪಥದಲ್ಲಿ ಸಂಭ್ರಮದ ಬೆಳಕಿನ ಪರ್ವ
ಚಂದ್ರಕಾಂತಿಯ ಚಿಲುಮೆ ಚಿದಾತ್ಮನಗೆಯಪೂರ್ವ
ಅಚ್ಛೋದ ತೀರದಲಿ ಮಲ್ಲಿಗೆಯ ಹೂ ರಾಶಿ
ಮಂಗಳ ಮಹೋನ್ನತಿಯ ದರುಶನವೆ ಶಿವಕಾಶಿ!
ಜ್ಞಾನಶರಧಿಯ ನಡುವೆ ಗಗನದೆತ್ತರ ನಿಂತ
ಬಹುಜ್ಞತ ಹಿಮಗಿರಿಶಿಖರ ಶ್ರೀಗುರು ಸಂತ
ವಿದ್ವತ್ಪ್ರಪಂಚದಲಿ ತಲಸ್ಪರ್ಶಿ ಸಾರಮತಿ
ಗದುಗಿನ ಕವಿಚಕ್ರಿಯ ಸಹೋದರನಾದಯತಿ
ಹೃದಯ ಸಂವಾದ ರಸಸ್ಫುರಿತ ವರಶುಭಶ್ವೇತ
ಮಾನವೀಯ ಗುಣಗಣ ಬದುಕದುವೆ ಪರಿಪೂತ
ನುಡಿಯೆಲ್ಲಾರೂಪಕ ನಡೆಯೆಲ್ಲಾದೀಪಕ
ಶುಚೀಸ್ಮಿತ ಸುಪ್ರೀತ ಸುಸಂಭಾವ್ಯ ಸಾಧಕ
ಕುವೆಂಪು ಬಸವರ ತತ್ವಾದರ್ಶ ಪರಿವೇಷಣ
ಅನ್ವರ್ಥನಾಮ ದಿಟ ನೀವು ನಿಜಕೂಸುಜನಾ!

– **ಡಾ.ಪಿ.ಕೆ.ರಾಜಶೇಖರ**
#42, 8ನೇ ಮುಖ್ಯರಸ್ತೆ,
23ನೇ ತಿರುವು, 3ನೇ ಹಂತ,
ಇ.ಬ್ಲಾಕ್, ವಿಜಯನಗರ
ಮೈಸೂರು.

ಕೃಪೆ : ಅಭಿವ್ಯಕ್ತಿ–35, ನವೆಂಬರ್–2011, ಸಂಪುಟ 3, ಸಂಚಿಕೆ 11, ಕರ್ನಾಟಕ ಸಂಘ, ಮಂಡ್ಯ

# ಸುಜನಾ ನಮನ

ಹೊಸಹೊಳಲಿನ ಕವಿತಾ ಪ್ರತಿಭಾ ಚೇತನ
ಹೊಸ ಹೊಸ ಹೊಳಹಿನ ಮಹಾಕವಿ ಸುಜನಾ॥

ಮಂಗಳಾರತಿಯಲಿ ನಾಣ್ಯಯಾತ್ರೆ ಯಾನ
ಒಂದೆ ಸೂರಡಿಯಲಿ ಕಣ ರೋಮಾಂಚನ
ಇಬ್ಬನಿ ಆರತಿಯಲಿ ಚಿಲಿಪಿಲಿ ಗಾನ
ಅಮೃತತ್ವದಲಿ ಯುಗಸಂಧ್ಯಾ ದರ್ಶನ॥

ವಿನಯ ವಿಮರ್ಶೆಯ ನವ್ಯ ಚಿಂತನ
ಹೃದಯ ಸಂವಾದದ ದಿವ್ಯ ಮಂಥನ
ವಿಕಾರ ರಹಿತ ನುಡಿಯುದ್ಯಾನವನ
ವಿಚಾರ ಸಂಹಿತ ಜೀವ ಸತ್ಯಾವತರಣ॥

ನವೋದಯ ಪರಂಪರೆಯ ಪ್ರತಿಸ್ಪಂದನ
ನಿಜಗುರು ಕುವೆಂಪು ಪುತಿನ ಅಂತರ್ಧ್ಯಾನ
ಕನ್ನಡ ನಾಡು ನುಡಿಯ ಸಕಾಲಿಕ ಸಂವಹನ
ಮಹಾಕವಿ ಸೌಭಾಗ್ಯಕೆ ನಮೋನಮನ॥

– **ಶಿ.ಕುಮಾರಸ್ವಾಮಿ**
ನಿವೃತ್ತ ಪ್ರಾಚಾರ್ಯರು,
ಅಕ್ಷಯ ಕುಟುಂಬ, ಶ್ರವಣಬೆಳಗೊಳ ರಸ್ತೆ,
ಕೃಷ್ಣರಾಜಪೇಟೆ. 9449148885

## ಅನುಬಂಧ : 1

## ಸುಜನಾ ಕುರಿತ ಕೃತಿಗಳು

1. **2004** : **ಸುಜನಾ ಸಾಹಿತ್ಯ**
**ಸಂಪಾದಕರು :** ಪ್ರೊ.ಜಿ.ಟಿ.ವೀರಪ್ಪ,
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು.

2. **2006** : ಸುಜನಾ ಬದುಕು–ಬರಹ 'ವ್ಯಕ್ತಿ ಚಿತ್ರ ಮಾಲಿಕೆ' ಬೆಲೆ:10ರೂ.
ಸುಮನಾ ವಿಶ್ವನಾಥ್,
ಭಾರತೀಯ ವಿದ್ಯಾಭವನ, ಬೆಂಗಳೂರು.

3. **2012** : **ಸುಜನಾ : ಬದುಕು–ಬರೆಹ 120ಪುಟ/60ರೂ**
**ಸಂಪಾದಕರು :** ಡಾ.ಪ್ರಧಾನ್ ಗುರುದತ್ತ
(ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು)
ನವಕರ್ನಾಟಕ ಪ್ರಕಾಶನ
ಬೆಂಗಳೂರು.

4. **2005 ಮಹಾಕವಿ ಸುಜನಾ –** ಶಿ.ಕುಮಾರಸ್ವಾಮಿ
ಬಂಧುಮಿತ್ರ ಪ್ರಕಾಶನ, ಕಿರಗಂದೂರು,
ಮಂಡ್ಯ ತಾ।–571403

5. **ಪಿ.ಎಚ್‌ಡಿ. ಗ್ರಂಥಗಳು**

1. **ಡಾ॥ ಮ.ರಾಮಕೃಷ್ಣ** : ಸುಜನಾ ಅವರ ಸಮಗ್ರ ಕಾವ್ಯ ಒಂದು ಅಧ್ಯಯನ
ನಿವೃತ್ತ ಪ್ರಾಧ್ಯಾಪಕರು. ಮಂಡ್ಯ

2. **ಡಾ॥ ಬಸವರಾಜು** : ಮಹಾಕಾವ್ಯ ಪರಂಪರೆಯಲ್ಲಿ ಯುಗ ಸಂಧ್ಯಾ ಮಹಾಕಾವ್ಯ
ಕನ್ನಡ ಪ್ರಾಧ್ಯಾಪಕರು, ಸ.ಪ್ರ.ದ.ಕಾಲೇಜು. ವೀರಾಜಪೇಟೆ.

## ಅನುಬಂಧ : 2

### ಕೃತಿಗಳಲ್ಲಿ ಲೇಖನಗಳು

1. ಪುಣ್ಯಕೋಟಿ : ಲೇಖಕರು: ಮ.ರಾಮಕೃಷ್ಣ
   ಪ್ರ.ಸಂ. ಜಿ.ಟಿ.ವೀರಪ್ಪ, ಪುಟ 358–371
   ಲೇಖನ : ಸುಜನಾ
   ಸಂಪಾದಕರು : ಅರ್ಜುನಪುರಿ ಅಪ್ಪಾಜಿಗೌಡ – 1995, ಕ್ಯಾತನಹಳ್ಳಿ ರಾಮಣ್ಣ
2. ಲೇಖನ : ಸುಜನಾ, ಲೇಖಕರು: ಎಚ್ಚೆಸ್ಕೆ
   ಆಕರ : ಸುಧಾ ವಾರಪತ್ರಿಕೆ – ಸಮಕ್ಷಮ
3. ಲೇಖನ : ಸುಜನಾ, ಲೇಖಕರು : 'ಬಳಗ' (ದೇಜಗೌ)
4. ಲೇಖನ : ಸುಜನಾ, ಲೇಖಕರು : TV ವೆಂಕಟಾಚಲ ಶಾಸ್ತ್ರೀ
   ಕೃತಿ : ಮಹನೀಯರು.
5. ಕೃತಿ : ಕವಿಗಳು ಮತ್ತು ನಾಟಕಕಾರರು
   ಲೇಖನ : ಸುಜನಾ ಪುಟ 115
   ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
6. ಜಾನಪದದ ತುಂಬುಹೊಳೆ (ಪುಟ 40)
   ಸುಜನಾ ಲೇಖನ ರಾಗಿಯಕಲ್ಲು.

**ಸಂಗ್ರಹ: ಶ್ರೀ ಕೆ.ಜಿ.ನಾಗರಾಜು**
ಸಾಹಿತ್ಯ ಪರಿಚಾರಕರು
ಕೃಷ್ಣರಾಜಪೇಟೆ. ಮೋ : 8105724341

## ಅನುಬಂಧ : 3

### ಸುಜನಾ ಕೃತಿಗಳು

| | | | |
|---|---|---|---|
| 1. | ಮಂಗಳಾರತಿ ಕವನ ಸಂಕಲನ | – | 1956 |
| 2. | ನಾಣ್ಯಯಾತ್ರೆ | – | 1964 |
| 3. | ಒಂದೆ ಸೂರಡಿಯಲ್ಲಿ ಕವನ ಸಂಕಲನ | – | 1982 |
| 4. | ಇಬ್ಬನಿ ಆರತಿ ವಚನ | – | 1982 |
| 5. | ಕಣಗಳು ಮಿಡಿಗವನ | – | 1983 |
| 6. | ಏಜಾಕ್ಸ್ ಅನುವಾದ ನಾಟಕ | – | 1961 |
| 7. | ಬಾಲಕಾಂಡ ಸಂಪಾದಿತ (ಸಿ.ಪಿ.ಕೆ. ಅವರೊಂದಿಗೆ) | – | 19 |
| 8. | ಭಾರತ ಕಥಾಮಂಜರಿ ಸಂಗ್ರಹ | – | 1964 |
| 9. | ಕುಮಾರವ್ಯಾಸ ಕಿರುಹೊತ್ತಿಗೆ | – | 1971 |
| 10. | ಹೃದಯ ಸಂವಾದ ವಿಮರ್ಶೆ | – | 1964 |
| 11. | ಪರಂಪರೆ | – | 1982 |
| 12. | ಪರಂಪರೆ ಮತ್ತು ಕುವೆಂಪು | – | 1984 |
| 13. | ಪು.ತಿ.ನ. ಸಾಹಿತ್ಯದ ಹೊಳಹು | – | 1992 |
| 14. | ಚಿಲಿಪಿಲಿ ಮಕ್ಕಳ ಕವನ | – | 1992 |
| 15. | ನವಿಲುಗರಿ ಸಂಪಾದಿತ | – | 1993 |
| 16. | ಕುವೆಂಪು – ವಿಮರ್ಶೆ | – | 1993 |
| 17. | ನೀರವ ಸಾಧಕ ಸಂಪಾದಿತ | – | 1997 |
| 18. | ಯುಗಸಂಧ್ಯಾ | | 16.05.1999 |
| 19. | ಸಂವಹನ – ವಿಮರ್ಶೆ | – | 2002 |

* 1959 ರಿಂದ 1965 ರವರೆಗೆ ಸುಜನಾ ಅವರು ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿದ್ದರು.

## ಅನುಬಂಧ – ೪

## ಗ್ರಾಮಭಾರತಿ ಪ್ರಕಟಣೆಗಳು

1. ಕಾವ್ಯದೀಪ – ಕವನ ಸಂಕಲನ : ಕಾವ್ಯ ಎನ್.ಕೆ. 2012
2. ಬೆಳದಿಂಗಳು – ಬಿಡಿ ಬರಹಗಳು : ಅಣ್ಣೇಗೌಡ ಕೆ. 2018
3. ಶೀಲವಂತ ರಾಜಕಾರಣಿ – ಎಸ್.ಎಂ.ಲಿಂಗಪ್ಪ ಸಂಸ್ಮರಣಾ ಗ್ರಂಥ
4. ಸಾಹಿತ್ಯ ಸಂಭ್ರಮ – ಪ್ರಬಂಧ ಸಂಕಲನ – 2023
5. ಕಾವ್ಯ ಸಂಭ್ರಮ – ಕವನ ಸಂಕಲನ – 2024
6. ಶೈಕ್ಷಣಿಕ ಸಂಭ್ರಮ – ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದ ವಾರ್ಷಿಕ ಸಂಚಿಕೆ – 2024
7. ಆತ್ಮಶ್ರೀ ಸುಜನಾ – 2024

## ಅಚ್ಚಿನಲ್ಲಿದೆ

1. ಬೆಳ್ದಿಂಗಳ ಮಿಂಚು : ಅಣ್ಣೇಗೌಡ.ಕೆ

**ನಾ ಬೇಡುವೆ ಮುಕ್ತಿ..**

ಆನಂದ ರಸ ಕ್ಷೀರ ಸಾಗರಾಗಾರ ಹೃದಯಿ!
ಕರಗಿಸಿಕೊ ಇವ ನೀನು ತವನಿಧಿ ಹೃದಯದಲ್ಲಿ;
ಹೇ! ರಸಶರೀರಿ ಜಗದ್ಗುರುವೆ. ಅದುವೆ ನಾ
ಪಡೆವ ಕಾವ್ಯನಂದ ಜನ್ಯ ಭವ ಮುಕ್ತಿ !

**ಡಾ. ಸುಜನಾ : ಮಂಗಳಾರತಿ..**

ಸುಜನಾ ಬಹುಶ್ರುತರು. ಪ್ರವಚನ ಪಟು.ಕಾವ್ಯಗಳ ಗುಣ ವಿಮರ್ಶೆಯಲ್ಲಿ ಇವರದು ನಿಕಷ ಪ್ರಜ್ಞೆ, ಇವರ ನಾಣ್ಯಯಾತ್ರೆ ಎಂಬ ಕವಿತಾ ಸಂಗ್ರಹವನ್ನೂ ಹೃದಯ ಸಂವಾದ ವೆಂಬ ವಿಮರ್ಶಾ ಸಂಕಲನವನ್ನು ನಾನು ಓದಿ ಸಂತೋಷಪಟ್ಟಿದ್ದುಂಟು. ಪಂಪ-ಕುಮಾರವ್ಯಾಸರನ್ನು ಕುರಿತ ಇವರ ಪ್ರಬಂಧ ಇವರ ವಿದ್ವತ್ತೆಗೂ ವಿಮರ್ಶಾಪ್ರೌಢಿಮೆಗೂ ಸಾಕ್ಷಿಯಾಗಿ ನಿಂತಿದೆ.

ಪುತಿನ<br>
ಇಬ್ಬನಿ ಆರತಿ ವಚನ ಸಂಕಲನದ ಮುನ್ನುಡಿ<br>
೧೯೮೨

ಕುವೆಂಪು ಅವರ ಪರಮ ಶಿಷ್ಯರಾದ ಸುಜನಾ ನಮ್ಮ ಉತ್ತಮೋತ್ತಮ ಪ್ರಾಧ್ಯಾಪಕರಲ್ಲಿ ಒಬ್ಬರು. ಭಾರತೀಯ ಕಾವ್ಯರಾಶಿ ಕಾವ್ಯಮಿಮಾಂಸೆಗಳನ್ನು ತೌಲನಿಕವಾಗಿ ತಲಸ್ಪರ್ಶಿಯಾಗಿ ಮುಕ್ತ ಮನಸ್ಸಿನಿಂದ, ತಾರತಮ್ಯ ವಿವೇಕದಿಂದ ಅಧ್ಯಯನ ಮಾಡಿ ಬಹುಶ್ರುತರಾಗಿರುವ ಘನ ವಿದ್ವಾಂಸರು. ಅವರಂಥ ಸ್ವಸ್ಥಮನಸ್ಸಿನ, ನಿರ್ವಿಕಾರ ಮನೋಭಾವದ, ವ್ಯಾಪಕ ವ್ಯಾಸಂಗದ, ಸೂಕ್ಷ್ಮಮತಿಯ ಸತ್ಯ ನಿಷ್ಠೆಯ, ವಿಚಾರಶೀಲತೆಯ, ಸಾಕ್ಷಿಪ್ರಜ್ಞೆಯ ವಿಮರ್ಶಕರು ಕನ್ನಡದಲ್ಲಿ ವಿರಳ"

ದೇಜಗೌ<br>
ಪರಂಪರೆ ಮತ್ತು ಕುವೆಂಪು ಮುನ್ನುಡಿ<br>
೧೯೮೪

"ಪ್ರೊ. ಸುಜನಾ ಅವರು ಹಿರಿಯ ತಲೆಮಾರಿನ ಮೇಧಾವೀ ವಿದ್ವಾಂಸರು ಹಾಗೂ ಸಹೃದಯ ವಿಮರ್ಶಕರು. ಅವರು ಪ್ರಾಚೀನ, ಅರ್ವಾಚೀನ, ಸೃಜನ-ಸೃಜನೇತರ, ಭಾರತೀಯ ಭಾರತೇತರ ಸಾಹಿತ್ಯ ಚಿಂತನೆ ಕುರಿತು ಆಳವಾಗಿ ಆಲೋಚಿಸಿದವರು ಶ್ರೀಯುತರು ಕಡಿಮೆ ಬರೆದದ್ದು, ಆದರೆ ಬರವಣಿಯೆಲ್ಲವೂ ಆಳವಾದ ವ್ಯುತ್ಪತ್ತಿ, ಪ್ರತಿಭೆ ಮತ್ತು ಪಾಂಡಿತ್ಯದಿಂದ ಬಂದದ್ದು"

ಪ್ರೊ. ಮಲ್ಲೇಪುರಂ ಜಿ ವೆಂಕಟೇಶ್<br>
ಸಂವಹನ ಮುನ್ನುಡಿ<br>
೨೦೦೨

ಕುವೆಂಪು, ಪುತಿನ ಅವರಂಥ ಮಹಾಕವಿ ಚೇತನಗಳು ಪ್ರಭಾವ ಸ್ಫೂರ್ತಿಗಳ ಹಿನ್ನಲೆಯಲ್ಲಿ ತಮ್ಮ ಕವಿ ವ್ಯಕ್ತಿತ್ವವನ್ನು ರೂಪಿಸಿ ಕೊಂಡವರು ಸುಜನಾ. ಸ್ವೋಪಜ್ಞ ವಿಮರ್ಶಕರಾಗಿಯೂ, ಪ್ರಾಚೀನ - ಅರ್ವಾಚೀನ ಸಾಹಿತ್ಯಗಳನ್ನು ಓರೆಗೆ ಹಚ್ಚಿದ ಹಿರಿಮೆ ಅವರದು. ನಿವೃತ್ತಿಯ ನಂತರವೂ ನಿರಂತರವಾಗಿ ತರುಣ ತಲೆಮಾರಿನ ಸಾಹಿತಿಗಳನ್ನು ವಿಮರ್ಶಕರನ್ನು ಪ್ರೋತ್ಸಾಯಿಸುತ್ತಿದ್ದರು.

ಪ್ರಧಾನ್ ಗುರುದತ್ತ<br>
ಸುಜನಾ - ಮುನ್ನುಡಿ ೨೦೧೨